# ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆ

**(ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅಧೀನದಲ್ಲಿರುವ ಸ್ವಾಯತ್ತ ಸಂಸ್ಥೆ)**

## ಮಾಹಿತಿ ಕೈಪಿಡಿ

**ಕೃತಿಸ್ವಾಮ್ಯ ಕಾಯ್ದಿರಿಸಲಾಗಿದೆ (c)**

*31.03.2021*

# ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆ – ಪರಿಚಯ

ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯು ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವಾಲಯದಡಿಯಲ್ಲಿ 1965 ರಲ್ಲಿ ಸ್ಥಾಪಿಸಲ್ಪಟ್ಟಿತು. ಇದು ಪೂರ್ಣ ಪ್ರಮಾಣದ ಅನುದಾನವನ್ನು ಪಡೆದಿದ್ದು, ಸ್ವಯಂಶಾಸನವನ್ನು ಹೊಂದಿರುವ ಒಂದು ವಿಶೇಷ ಸಂಸ್ಥೆಯಾಗಿದೆ. ಸಂವಹನ ನ್ಯೂನತೆ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲ ಅಭಿವೃದ್ದಿ, ವೃತ್ತಿಪರ ತರಬೇತಿ ನೀಡುವುದು, ಚಿಕಿತ್ಸಾ ಸೇವೆಗಳನ್ನು ಒದಗಿಸುವುದು, ಸಂಶೋಧನೆ ಕೈಗೊಳ್ಳುವುದು ಮತ್ತು ಶ್ರವಣ ನ್ಯೂನತೆ, ಬುದ್ಧಿಮಾಂದ್ಯತೆ, ಧ್ವನಿ ಹಾಗೂ ಮಾತಿನ ನಿರರ್ಗಳತೆ ಹಾಗೂ ಧ್ವನಿವಿಜ್ಞಾನ ಮತ್ತು ಭಾಷಾ ನ್ಯೂನತೆ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಸಂಸ್ಥೆಯ ಪ್ರಮುಖ ಉದ್ದೇಶಗಳಾಗಿವೆ.

ಪ್ರಾಥಮಿಕವಾಗಿ ತರಬೇತಿ ಸಂಸ್ಥೆಯಾಗಿ ಪ್ರಾರಂಭಗೊಂಡ ಈ ಸಂಸ್ಥೆಯು ಪ್ರಾರಂಭದಿಂದಲೇ ಸ್ನಾತಕೋತ್ತರ ಪದವಿಮಟ್ಟದಲ್ಲಿ ತರಬೇತಿ ನೀಡತೊಡಗಿತು. ಬಿ.ಎಸ್ಸಿ. (ವಾಕ್–ಶ್ರವಣ) ತರಬೇತಿಯು 1967ರಲ್ಲಿ ಪ್ರಾರಂಭವಾಯಿತು. ಸಂಸ್ಥೆಯು ಪಿ.ಹೆಚ್‌ಡಿ.ಯ ಜೊತೆಗೆ ಹಲವಾರು ಅಲ್ಪಕಾಲಿಕ ತರಬೇತಿ ಕಾರ್ಯಕ್ರಮಗಳನ್ನೂ ನಡೆಸುತ್ತಿದೆ. ಸಂಸ್ಥೆಯು ಮೈಸೂರು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಪದವಿಯನ್ನು ನೀಡುತ್ತಿದೆ. ಇತ್ತೀಚೆಗೆ. ಬಿ.ಎಸ್.ಎಡ್. (ಹೆಚ್ ಐ) ಮತ್ತು ಶ್ರವಣಯಂತ್ರ ಹಾಗೂ ಕಿವಿಯಚ್ಚು ತಂತ್ರಜ್ಞಾನದ ವಿಷಯದಲ್ಲಿ ಡಿಪ್ಲೋಮಾ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಿದೆ. ಹಾಗೆಯೇ, ವಾಕ್–ಶ್ರವಣ ವಿಜ್ಞಾನದಲ್ಲಿ ಪ್ರತ್ಯೇಕವಾದ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳನ್ನು ಆರಂಭಿಸಿದೆ.

ಸಂಸ್ಥೆಯು ಮೈಸೂರಿನ ಮಾನಸಗಂಗೋತ್ರಿಯ ಮೈಸೂರು ವಿಶ್ವವಿದ್ಯಾಲಯಕ್ಕೆ ಹೊಂದಿಕೊಂಡಂತಿರುವ 32 ಎಕರೆಗಳಷ್ಟು ಅಚ್ಚ ಹಸಿರಿನ ಆವರಣದಲ್ಲಿದೆ. ಇದು ಸಂವಹನ ನ್ಯೂನತೆ ಕ್ಷೇತ್ರದಲ್ಲಿ ದಕ್ಷಿಣ ಏಷ್ಯಾದಲ್ಲಿಯೇ ಒಂದು ವಿಶಿಷ್ಟ ಸಂಸ್ಥೆಯಾಗಿದ್ದು, ಒಟ್ಟು ಹನ್ನೊಂದು ವಿಭಾಗಗಳು ಮತ್ತು ಸುಸಜ್ಜಿತ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರವನ್ನು ಹೊಂದಿದೆ. ಸಂಸ್ಥೆಯು ವಿದ್ಯಾರ್ಥಿಗಳ ತರಬೇತಿಗಾಗಿ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿದೆ.

ಸಂಸ್ಥೆಯು ಸಂವಹನ ನ್ಯೂನತೆಯುಳ್ಳ ಎಲ್ಲಾ ವಯಸ್ಸಿನವರಿಗೂ ಚಿಕಿತ್ಸೆ ನೀಡುತ್ತದೆ. ಭಾರತ ಮತ್ತು ಪ್ರಪಂಚದ ಇತರೆ ಭಾಗಗಳಿಂದಲೂ ಸಹ ವಿದ್ಯಾರ್ಥಿಗಳು ಅಧ್ಯಯನಕ್ಕಾಗಿ ಇಲ್ಲಿ ಆಗಮಿಸುತ್ತಾರೆ. ಕಳೆದ 50 ವರ್ಷಗಳಲ್ಲಿ ಸಂಸ್ಥೆಯು ಶ್ರವಣವಿಜ್ಞಾನ, ಮಾತು–ಭಾಷೆ ಹಾಗೂ ವಿಶೇಷ ಶಿಕ್ಷಣ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲ ಅಭಿವೃದ್ದಿ, ವೃತ್ತಿಪರ ತರಬೇತಿ, ಚಿಕಿತ್ಸಾ ಸೇವೆ, ಹಾಗೂ ಸಂಶೋಧನೆಯಲ್ಲಿ ಹಲವಾರು ಮೈಲಿಗಲ್ಲುಗಳನ್ನು ಸ್ಥಾಪಿಸಿದ್ದು, ಈ ನಿಟ್ಟಿನಲ್ಲಿ ನಿರಂತರವಾಗಿ ಶ್ರಮಿಸುತ್ತಿದೆ. ಸಂಸ್ಥೆಯು ಕಿವುಡುತನದ ಚಿಕಿತ್ಸೆಯಲ್ಲಿ ಉತ್ಕೃಷ್ಟ ಕೇಂದ್ರವೆಂದು ಡಬ್ಲ್ಯುಹೆಚ್‌ಓ ನಿಂದ (WHO) ಪರಿಗಣಿಸಲ್ಪಟ್ಟಿದೆ ಹಾಗೂ ಪರಿಷ್ಕೃತ ಸಂಶೋಧನೆಗಳ ಕೇಂದ್ರವೆಂದು ಯುಜಿಸಿಯುಂದಲೂ (UGC) ಮತ್ತು ಉತ್ತಮ ವೈಜ್ಞಾನಿಕ ಮತ್ತು ತಾಂತ್ರಿಕ ಸಂಸ್ಥೆ ಎಂದು ಡಿಎಸ್ ಟಿ ಯಿಂದಲೂ (DST) ಪರಿಗಣಿಸಲ್ಪಟ್ಟಿದೆ.

ಸಂಸ್ಥೆಯು ಸಂಪೂರ್ಣವಾಗಿ ಭಾರತ ಸರ್ಕಾರದಿಂದ ಧನಸಹಾಯವನ್ನು ಪಡೆಯುತ್ತಿದ್ದು, ಕಾರ್ಯನಿರ್ವಾಹಕ ಸಲಹಾ ಮಂಡಲಿಯೊಂದರ ನಿರ್ದೇಶನದಂತೆ ನಡೆಯುತ್ತಿದೆ. ಈ ಮಂಡಳಿಗೆ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಅಧ್ಯಕ್ಷರಾಗಿದ್ದು, ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಉಪಾಧ್ಯಕ್ಷರಾಗಿಯೂ ಇರುತ್ತಾರೆ. ಕರ್ನಾಟಕ ಸರ್ಕಾರದ ಸಂಸ್ಥೆಯ ಇತರ ಶಾಸನಬದ್ಧ ಸಮಿತಿಗಳಲ್ಲಿ ಹಣಕಾಸು ಸಮಿತಿ ಮತ್ತು ಶೈಕ್ಷಣಿಕ ಸಮಿತಿಗಳು ಸೇರಿವೆ.

ಇಂದು ಸಂಸ್ಥೆ ತನ್ನ ಶೈಕ್ಷಣಿಕ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದ್ದು, ಮಾತು, ಭಾಷೆ, ಶ್ರವಣ ವಿಜ್ಞಾನ ಹಾಗೂ ವಿಶೇಷ ಶಿಕ್ಷಣದಲ್ಲಿ ಪ್ರಮಾಣಪತ್ರ ಶಿಕ್ಷಣದಿಂದ ಹಿಡಿದು ಡಾಕ್ಟರೇಟ್‌ವರೆಗಿನ ಶಿಕ್ಷಣವನ್ನು ನೀಡುತ್ತಿದೆ. ಇದಲ್ಲದೆ, ಸಂವಹನಾ ನ್ಯೂನತೆಯಿಂದ ಬಳಲುತ್ತಿರುವ ಎಲ್ಲಾ ವಯಸ್ಸಿನವರಿಗೆ ತಪಾಸಣೆ, ಚಿಕಿತ್ಸೆ, ಶೈಕ್ಷಣಿಕ ಸೇವೆಗಳನ್ನು ಒದಗಿಸುತ್ತದೆ. ಜೊತೆಗೆ ಶ್ರವಣ ತರಬೇತಿ ಘಟಕ, ಪರ್ಯಾಯ ಸಂವಹನ ಸಂವರ್ಧನ ಘಟಕ (ಎಎಸಿ), ವೃತ್ತಿಪರರಿಗೆ ಸಂರಕ್ಷಣಾ ಧ್ವನಿಘಟಕಗಳನ್ನು ಹೊಂದಿದ್ದು, ಶ್ರವಣದೋಷ, ತಂತನತೆ ಮತ್ತು ಬುದ್ಧಿಮಾಂದ್ಯತೆ ಸಮಸ್ಯೆಯಿಂದ ಬಳಲುವ ಮಕ್ಕಳಿಗೆ ಶಾಲಾಪೂರ್ವ ಕಾರ್ಯಕ್ರಮಗಳನ್ನು ಒದಗಿಸುತ್ತದೆ.

ವೈದ್ಯಕೀಯ ನ್ಯಾಯಶಾಸ್ತ್ರದನ್ವಯ ಧ್ವನಿ ವಿಶ್ಲೇಷಣೆ ಸೌಲಭ್ಯವಿದೆ. ಸಂಸ್ಥೆಯಲ್ಲಿ ತರಬೇತಿ ಪಡೆದವರು ಭಾರತ ಮತ್ತು ವಿದೇಶದಲ್ಲೂ ತಮ್ಮ ಹೆಸರು ಪಸರಿಸಿದ್ದಾರೆ. ಬಹು ವಿಧದ ಸಂಶೋಧನೆಗಳು, ತೊಂದರೆಗಳ ಶೀಘ್ರಪತ್ತೆ ಹಚ್ಚುವಿಕೆ ಮತ್ತು ತಡೆಗಟ್ಟುವಿಕೆ, ಚಿಕಿತ್ಸಾ ವಿಧಾನ ಮತ್ತು ತಂತ್ರಜ್ಞಾನದ ಕುರಿತು ಶ್ರವಣದೋಷ ಹಾಗೂ ಸಂವಹನ ನ್ಯೂನತೆಗಳ ಬಗ್ಗೆ ಸಂಶೋಧನೆ ನಡೆಯುತ್ತಿದೆ. ಸಂಸ್ಥೆ ಸ್ಥಾಪಿಸಿರುವ ಪ್ರತ್ಯೇಕ ಸಂಶೋಧನಾ ನಿಧಿಯು ಸರ್ಕಾರಿ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಅಲ್ಪಾವಧಿ ಯೋಜನೆಗಳಿಗೆ ದೊರಕುತ್ತದೆ. ವಂಶತಳಿ ಶಾಸ್ತ್ರ, ಸಾಂಕ್ರಾಮಿಕ ಶಾಸ್ತ್ರ, ಭಾಷಾ ಶಾಸ್ತ್ರ, ಜೈವಿಕ ತಂತ್ರಜ್ಞಾನ, ನರಶಾಸ್ತ್ರ ತಜ್ಞರು, ಮನೋವಿಜ್ಞಾನಿಗಳು,ಕಿವಿ–ಮೂಗು–ಗಂಟಲು ತಜ್ಞರು, ಮತ್ತು ಮಕ್ಕಳ ತಜ್ಞರು ಈ ನಿಧಿಯಿಂದ ಸಹಾಯ ಪಡೆಯಬಹುದು. ಸಂವಹನ ಕ್ಷೇತ್ರದಲ್ಲಿ ದೂರ ಶಿಕ್ಷಣದ ಮೂಲಕ ಮಾನವ ಸಂಪನ್ಮೂಲ ಅಭಿವೃದ್ಧಿ, ಸಾರ್ವಜನಿಕ ಶಿಕ್ಷಣದ ಮೂಲಕ ಮಾಹಿತಿ ವಿತರಣೆ ಹಾಗೂ ಮನೆಯಲ್ಲಿನ ತರಬೇತಿ ಕಾರ್ಯಕ್ರಮದ ಮೂಲಕ ಸಂವಹನ ನ್ಯೂನತೆಯುಳ್ಳ ಮಕ್ಕಳಿಗೆ ಚಿಕಿತ್ಸೆ ಹಾಗೂ ಅವರ ಪೋಷಕರ ಸಾಮರ್ಥ್ಯವನ್ನು ಹೆಚ್ಚಿಸುವುದು ಮತ್ತು ಪೋಷಕರ ವಕಾಲತ್ತು ನಡೆಸುವುದು – ಇವೆಲ್ಲವನ್ನು ಮುದ್ರಣ ಹಾಗೂ ತಂತ್ರಜ್ಞಾನದ ಮೂಲಕ ಸಾಧಿಸುವುದು ಮುಂದಿರುವ ಗುರಿಗಳಾಗಿವೆ.

**ಸಂಸ್ಥೆಯ ಗುರಿಗಳು ಮತ್ತು ಧ್ಯೇಯೋದ್ದೇಶಗಳು:** ಸಂವಹನ ನ್ಯೂನತೆಯ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ, ಸಂಶೋಧನೆ, ಚಿಕಿತ್ಸಾ ಸೇವೆಗಳು ಮತ್ತು ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ಜಾಗತಿಕ ಸಂಸ್ಥೆಯಾಗಿ ಬೆಳೆಯುವುದು ಸಂಸ್ಥೆಯ ಪ್ರಮುಖ ಗುರಿ ಹಾಗೂ ಧ್ಯೇಯೋದ್ದೇಶಗಳಾಗಿವೆ.

**ಸಂಸ್ಥೆಯ ನಕ್ಷೆ**

**ಅಧ್ಯಕ್ಷರು**
ಗೌರವಾನ್ವಿತ ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ
ಭಾರತ ಸರ್ಕಾರ, ನಿರ್ಮಾಣ ಭವನ, ನವದೆಹಲಿ – ೧೧೦ ೧೦೮

**ಉಪಾಧ್ಯಕ್ಷರು**
ಗೌರವಾನ್ವಿತ ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ
ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು – ೫೬೦ ೦೦೧

**ಸದಸ್ಯರು**
ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ
ಭಾರತ ಸರ್ಕಾರ, ನಿರ್ಮಾಣ ಭವನ, ನವದೆಹಲಿ – ೧೧೦ ೧೦೮

**ಮಹಾನಿರ್ದೇಶಕರು, ಆರೋಗ್ಯ ಸೇವೆಗಳು**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ
ಭಾರತ ಸರ್ಕಾರ, ನಿರ್ಮಾಣ ಭವನ, ನವದೆಹಲಿ – ೧೧೦ ೧೦೮

**ಹೆಚ್ಚುವರಿ ಕಾರ್ಯದರ್ಶಿಗಳು (H)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ
ಭಾರತ ಸರ್ಕಾರ, ನಿರ್ಮಾಣ ಭವನ, ನವದೆಹಲಿ – ೧೧೦ ೧೦೮

**ಹೆಚ್ಚುವರಿ ಕಾರ್ಯದರ್ಶಿಗಳು (FA)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ
ಭಾರತ ಸರ್ಕಾರ, ನಿರ್ಮಾಣ ಭವನಮ
ಎರಡನೇ ಮಹಡಿ, "ಎ" ವಿಭಾಗ, ನವದೆಹಲಿ – ೧೧೦ ೧೦೮

**ಜಂಟಿಕಾರ್ಯದರ್ಶಿಗಳು (H)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ
ಭಾರತ ಸರ್ಕಾರ, ನಿರ್ಮಾಣ ಭವನ
ಎರಡನೇ ಮಹಡಿ, "ಎ" ವಿಭಾಗ, ನವದೆಹಲಿ – ೧೧೦ ೧೦೮

**ಜಂಟಿಕಾರ್ಯದರ್ಶಿಗಳು (DD)**
ಭಾರತ ಸರ್ಕಾರ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ, ಶಾಸ್ತ್ರೀ ಭವನ
ಆರನೇ ಮಹಡಿ, ನವದೆಹಲಿ – ೧೧೦ ೧೦೮

**ಉಪಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು – ೫೭೦ ೦೦೫**

**ಮುಖ್ಯ ಕಾರ್ಯದರ್ಶಿಗಳು (H)**
ಕರ್ನಾಟಕ ಸರ್ಕಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು – ೫೬೦ ೦೦೧

**ವೈದ್ಯಕೀಯ ಶಿಕ್ಷಣ ನಿರ್ದೇಶಕರು,** ಕರ್ನಾಟಕ ಸರ್ಕಾರ
ಆನಂದರಾವ್ ಸರ್ಕಲ್, ಬೆಂಗಳೂರು – ೫೬೦ ೦೦೯

**ಗೌರವಾನ್ವಿತ ಕೇಂದ್ರ ಸಚಿವರ ನಾಮನಿರ್ದೇಶಿತರು**
ನಿರ್ದೇಶಕರ ನಾಮನಿರ್ದೇಶಿತರು

**ಸದಸ್ಯರು** – ಕಾರ್ಯದರ್ಶಿಗಳು
ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆ
ಮೈಸೂರು – ೫೭೦ ೦೦೬

**ಹಣಕಾಸು ಸಮಿತಿ**
ಅಧ್ಯಕ್ಷರು
ಹೆಚ್ಚುವರಿ ನಿರ್ದೇಶಕರು (H)
ಭಾರತ ಸರ್ಕಾರ, ಆರೋಗ್ಯ ಸಚಿವಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ನವದೆಹಲಿ – ೧೧೦ ೧೦೮

**ಸದಸ್ಯರು**
ಮಹಾನಿರ್ದೇಶಕರು, ಆರೋಗ್ಯ ಸೇವೆಗಳು (ಅಥವಾ ಅವರ ನಾಮನಿರ್ದೇಶಿತರು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ
ನಿರ್ಮಾಣ ಭವನ
ನವದೆಹಲಿ – ೧೧೦ ೦೧೮

**ಹೆಚ್ಚುವರಿ ನಿರ್ದೇಶಕರು (FA)**
ಭಾರತ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ
ಆರೋಗ್ಯ ಇಲಾಖೆ
ನವದೆಹಲಿ – ೧೧೦ ೧೦೮

**ಕಾರ್ಯದರ್ಶಿಗಳು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ)**
ಕರ್ನಾಟಕ ಸರ್ಕಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ
ಬಹುಮಹಡಿ ಕಟ್ಟಡ, ಬೆಂಗಳೂರು – 560 001

**ಸದಸ್ಯರು – ಕಾರ್ಯದರ್ಶಿಗಳು**
ನಿರ್ದೇಶಕರು
ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆ
ಮೈಸೂರು – ೫೭೦ ೦೦೬

**ಶೈಕ್ಷಣಿಕ ಸಮಿತಿ**

**ಅಧ್ಯಕ್ಷರು**
ಶ್ರೀ. ಜೆ. ಶಶಿಧರ್ ಪ್ರಸಾದ್
ನಿವೃತ್ತ ಉಪಕುಲಪತಿಗಳು ಮತ್ತು ಪ್ರಾಧ್ಯಾಪಕರು, ಭೌತಶಾಸ್ತ್ರ
ಮೈಸೂರು ವಿಶ್ವವಿದ್ಯಾನಿಲಯ, ೪೯/೨, ೫ನೇ ಮೈನ್, ೩ನೇ ಬ್ಲಾಕ್, ಜಯಲಕ್ಷ್ಮೀಪುರಂ, ಮೈಸೂರು ೫೭೦ ೦೧೨

**ಸದಸ್ಯರು**
ಉಪ ಮಹಾನಿರ್ದೇಶಕರು, ಆರೋಗ್ಯ ಸೇವೆಗಳು
ಭಾರತ ಸರ್ಕಾರ
ನಿರ್ಮಾಣ ಭವನ, ನವದೆಹಲಿ ೧೧೦೧೦೮

**ನಿರ್ದೇಶಕರು, ವೈದ್ಯಕೀಯ ಶಿಕ್ಷಣ**
ಕರ್ನಾಟಕ ಸರ್ಕಾರ
ಬೆಂಗಳೂರು – ೫೬೦ ೦೦೯

**ಉಪಕುಲಪತಿಗಳ ನಾಮನಿರ್ದೇಶಿತರು**
ಮೈಸೂರು ವಿಶ್ವವಿದ್ಯಾಲಯ, ಮೈಸೂರು
೫೭೦ ೦೦೫

**ಡಾ.ಎ.ಕೆ. ಅಗರ್‌ವಾಲ್**
ಡೀನ್ ಮತ್ತು ನಿರ್ದೇಶಕರು
ಎಂಎಎಂಸಿ
**ಹೆಚ್ಚು ಮಹಾನಿರ್ದೇಶಕರು**

**ಭಾರತ ಸರ್ಕಾರ**
ಡಿಜಿಹೆಚ್ಎಸ್‌ನ ಕಚೇರಿ
ನಿರ್ಮಾಣ ಭವನ, ನವದೆಹಲಿ ೧೧೦ ೧೦೮
ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆಯ ಮೂರು ವಿಭಾಗಗಳ ಮುಖ್ಯಸ್ಥರು
ಮೈಸೂರು
(ಸರದಿಯಂತೆ ಪ್ರತಿ ಎರಡು ವರ್ಷಗಳಿಗೊಮ್ಮೆ)

**ಪ್ರೊ. ಹೆಚ್.ಎ. ರಂಗನಾಥ**
ನಿರ್ದೇಶಕರು, ಎನ್ಎಎಸಿ
ಜ್ಞಾನಭಾರತಿ ಆವರಣ
ಬೆಂಗಳೂರು

**ಡಾ. ಹೆಚ್. ಸುದರ್ಶನ್**
ವಿಜಿಕೆಕೆ, ೬೮೬
೧೬ನೇ ಮೈನ್, ೪ನೇ ‘ಟಿ’ ಬ್ಲಾಕ್
ಜಯನಗರ
ಬೆಂಗಳೂರು ೫೬೦ ೦೪೧

**ಸದಸ್ಯರು – ಕಾರ್ಯದರ್ಶಿ**
ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆ
ಮೈಸೂರು ೫೬೦ ೦೦೬

## ಶೈಕ್ಷಣಿಕ

### ಉದ್ದೇಶಗಳು

- ಸಂವಹನ ನ್ಯೂನತೆ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ
- ಸಂವಹನ ನ್ಯೂನತೆ ಕ್ಷೇತ್ರದಲ್ಲಿ ಸಂಶೋಧನೆ
- ಸಂವಹನ ನ್ಯೂನತೆಯುಳ್ಳ ವ್ಯಕ್ತಿಗಳಿಗೆ ಚಿಕಿತ್ಸಾ ಸೇವೆಗಳು
- ಸಾರ್ವಜನಿಕ ಶಿಕ್ಷಣ

### ಸೌಲಭ್ಯಗಳು

- ಮಲ್ಟಿಮೀಡಿಯಾ ಸೌಲಭ್ಯ ಹೊಂದಿರುವ 22 ತರಗತಿಗಳು
- ಸೆಮಿನಾರ್ ಹಾಲ್ (180 ಆಸನ ಸಾಮರ್ಥ್ಯದ) ಮತ್ತು ಒಂದು ಆಡಿಟೋರಿಯಂ (400ರ ಆಸನ ಸಾಮರ್ಥ್ಯ)
- ಡಿಹೆಚ್ಎಲ್ಎಸ್ ಪ್ರೋಗ್ರಾಂಗಳಿಗಾಗಿ 07 ಕೇಂದ್ರಗಳಿಗೆ ಸಂಪರ್ಕಿತವಾಗಿರುವ ಆಡಿಯೋ–ವೀಡಿಯೊದೊಂದಿಗೆ ವೀಡಿಯೊ ಕಾನ್ಫರೆನ್ಸಿಂಗ್ ಸಿಸ್ಟಮ್
- ಒಳಾಂಗಣ ಮತ್ತು ಹೊರಾಂಗಣ ಕ್ರೀಡಾಂಗಣ, ಜಿಮ್, ಒಳಾಂಗಣ ಆಟಗಳೊಂದಿಗೆ ಜಿಮ್ಖಾನಾ
- ಹುಡುಗರಿಗೆ ಮತ್ತು ಹುಡುಗಿಯರಿಗೆ ವಸತಿ ಸೌಲಭ್ಯ
- ಸುಸಜ್ಜಿತ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ
- ಉತ್ತಮವಾದ ನೈದಾನಿಕ ವ್ಯವಸ್ಥೆ ಮತ್ತು ಸಿ.ಸಿ.ಟಿ.ವಿ ಮೇಲ್ವಿಚಾರಣೆಯೊಂದಿಗಿನ ಪ್ರಾಯೋಗಿಕ ತರಬೇತಿ
- ಉತ್ತಮ ಅರ್ಹ ಸಿಬ್ಬಂದಿ ಮತ್ತು ಇತರ ತಾಂತ್ರಿಕ ಸಿಬ್ಬಂದಿ

**ಕೋರ್ಸ್‌ಗಳು**

- ಪದವಿ  – ಶ್ರವಣ ವಿಜ್ಞಾನ, ಮಾತು ಮತ್ತು ಭಾಷೆ (ಬಿ ಎ ಎಸ್ ಎಲ್ ಪಿ)
- ಪದವಿ – ವಿಶೇಷ ಶಿಕ್ಷಣದಲ್ಲಿ (ಶ್ರವಣದೋಷ) (ಬಿಎಡ್.ಎಸ್ಪಿ.ಎಡ್ (ಹೆಚ್ಐ)
- ಡಿಪ್ಲೊಮಾ – ಶ್ರವಣೋಪಕರಣ ಮತ್ತು ಕಿವಿಯಚ್ಚು ತಂತ್ರಜ್ಞಾನ (ಡಿಹೆಚ್ಎ ಮತ್ತು ಇಟಿ)
- ಡಿಪ್ಲೊಮಾ – ಶೈಶವ ಹಂತದ ವಿಶೇಷ ಶಿಕ್ಷಣ (ಹಿಯರಿಂಗ್ ಇಂಪೇರ್ಮೆಂಟ್ (ಡಿಇಸಿಎಸ್ಇ (ಎಚ್ಐ))
- ಡಿಪ್ಲೊಮಾ –  ಶ್ರವಣ ವಿಜ್ಞಾನ, ಭಾಷೆ ಮತ್ತು ಮಾತು (ಡಿಹೆಚ್ಎಲ್ಎಸ್) – ದೂರ ಸಂಪರ್ಕ ಮಾಧ್ಯಮದ ಮೂಲಕ
- ಸ್ನಾತಕೋತ್ತರ ಡಿಪ್ಲೋಮಾ–ಸ್ನಾತಕೋತ್ತರ ಡಿಪ್ಲೋಮ, ಚಿಕಿತ್ಸಾ ಭಾಷಾ ವಿಜ್ಞಾನ, ಭಾಷಾ ಮತ್ತು ಮಾತು ತಜ್ಞರಿಗೆ(ಪಿಜಿಡಿಸಿಎಲ್ ಪಿ)
- ಸ್ನಾತಕೋತ್ತರ ಡಿಪ್ಲೊಮಾ – ಧ್ವನಿ ಸಂಬಂಧಿತ ವೈದ್ಯಕೀಯ ನ್ಯಾಯಶಾಸ್ತ್ರದಲ್ಲಿ (ಪಿಜಿಡಿಎಫ್ಎಸ್ ಎಸ್ ಟಿ)
- ಸ್ನಾತಕೋತ್ತರ ಡಿಪ್ಲೊಮಾ – ನರ ಶ್ರವಣ ವಿಜ್ಞಾನ (ಪಿಜಿಡಿಎನ್ಎ)
- ಸ್ನಾತಕೋತ್ತರ ಡಿಪ್ಲೊಮಾ – ಮಾತಿನ ಹೊರತಾದ ಇತರ ಪರ್ಯಾಯ ಸಂವಹನ (ಪಿಜಿಡಿಎಸಿ)
- ಶ್ರವಣ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ
- ಮಾತು ಮತ್ತು ಭಾಷಾ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ
- ವಿಶೇಷ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ (ಶ್ರವಣ ದೋಷ)
- ಶ್ರವಣ ವಿಜ್ಞಾನದಲ್ಲಿ ಡಾಕ್ಟರೇಟ್ ಪದವಿ
- ಮಾತು ಮತ್ತು ಭಾಷಾ ವಿಜ್ಞಾನದಲ್ಲಿ ಡಾಕ್ಟರೇಟ್ ಪದವಿ
- ಡಾಕ್ಟರೋತ್ತರ ಫೆಲೋಶಿಪ್

## ಶಿಷ್ಯವೇತನ ಮತ್ತು ಫೆಲೋಶಿಪ್

**ಬಿಎಎಸ್ಎಲ್ಪಿ**

- ಒಂದು ವರ್ಷದಲ್ಲಿ ೧೦ ತಿಂಗಳು–ತಿಂಗಳಿಗೆ ರೂ ೮೦೦ / –: ಮೊದಲ ೩ ವರ್ಷಗಳು. ಇಂಟರ್ನ್ ಷಿಪ್ ವರ್ಷ (೪ ನೇ ವರ್ಷ): ದೇಶದ ವಿವಿಧ ಪ್ರದೇಶಗಳಲ್ಲಿ ಇಂಟರ್ನ್ ಷಿಪ್
- ಈಶಾನ್ಯ ರಾಜ್ಯಗಳು – ತಿಂಗಳಿಗೆ ರೂ.೬,೦೦೦ / –. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಅನುಷ್ಠಾನದಲ್ಲಿರುವ ರಾಜ್ಯಗಳು – ತಿಂಗಳಿಗೆ ರೂ ೫,೫೦೦ / –. ಇತರೆ ರಾಜ್ಯಗಳು – ತಿಂಗಳಿಗೆ ರೂ. ೫,೦೦೦ / –
- ಇಂಟರ್ನ್ ಷಿಪ್ ವರ್ಷದಲ್ಲಿ (೪ ನೇ ವರ್ಷ) ನೈರುತ್ಯ ರಾಜ್ಯಗಳಲ್ಲಿ ಪ್ರತಿ ತಿಂಗಳು ರೂ.೬೦೦೦ /– ರಂತೆ – ೧೦ ತಿಂಗಳು
- ಇತರ ರಾಜ್ಯಗಳಲ್ಲಿ ಪ್ರತಿ ತಿಂಗಳು ರೂ.೫೦೦೦ /– ರಂತೆ  – ೧೦ ತಿಂಗಳು
- ಎಂ.ಎಸ್ಸಿ (ಆಡಿಯಾಲಜಿ) & ಎಮ್ಎಸ್ಸಿ (ಸ್ಪೀಚ್ ಲ್ಯಾಂಗ್ವೆಂಜ್ ಪೆಥಾಲಜಿ): ತಿಂಗಳಿಗೆ ರೂ. ೧೩೦೦ / –  ೧೦ ತಿಂಗಳು.
- ಬ್ಯಾಚುಲರ್ ಆಫ್ ಸ್ಪೆಶಲ್ ಎಜುಕೇಶನ್ (ಹಿಯರಿಂಗ್ ಇಂಪೇರ್ಮೆಂಟ್):. ತಿಂಗಳಿಗೆ ರೂ ೪೦೦ / – ೧೦ ತಿಂಗಳು
- ಪಿಜಿ. ಡಿಪ್ಲೊಮಾ ಇನ್ ಕ್ಲಿನಿಕಲ್ ಲಿಂಗ್ವಿಸ್ಟಿಕ್ಸ್ ಫಾರ್ ಸ್ಪೀಚ್ ಲ್ಯಾಂಗ್ವೇಜ್ ಪೆಥಾಲಜಿ: ತಿಂಗಳಿಗೆ ರೂ. ೫೦೦ – ೧೦ ತಿಂಗಳು
- ಹಿಯರಿಂಗ್ ಏಡ್ ಮತ್ತು ಇರ್ಮೌಲ್ಡ್ ತಂತ್ರಜ್ಞಾನದಲ್ಲಿ ಡಿಪ್ಲೊಮಾ: ತಿಂಗಳಿಗೆ ರೂ. ೨೫೦ / –  ೧೦ ತಿಂಗಳು
- ಶೈಶವ ಹಂತದ ವಿಶೇಷ ಶಿಕ್ಷಣದಲ್ಲಿ ಡಿಪ್ಲೊಮಾ (ಹಿಯರಿಂಗ್ ಇಂಪೇರ್ಮೆಂಟ್): ತಿಂಗಳಿಗೆ  ೨೫೦/ – ೧೦ ತಿಂಗಳು.
- ವಿಡಿಯೋ ಕಾನ್ಫರೆನ್ಸ್ ಮೂಲಕ ಹಿಯರಿಂಗ್, ಲ್ಯಾಂಗ್ವೇಜ್ ಮತ್ತು ಸ್ಪೀಚ್ ಡಿಪ್ಲೊಮಾ: ತಿಂಗಳಿಗೆ ರೂ. ೨೫೦ ? ೧೦ ತಿಂಗಳು
- ಪಿ.ಹೆಚ್.ಡಿ (ಆಡಿಯಾಲಜಿ) ಮತ್ತು ಪಿ.ಹೆಚ್.ಡಿ (ಸ್ಪೀಚ್ – ಲ್ಯಾಂಗ್ವೇಜ್ ಪೆಥಾಲಜಿ):

**ಸಂಶೋಧನಾ ಫೆಲೋಶಿಪ್ಗಳನ್ನು ಪ್ರತಿವರ್ಷ ೪ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ**

ತಿಂಗಳಿಗೆ ರೂ. ೨೦೦೦೦ / – + 20% HRA: ಮೊದಲ ವರ್ಷ.

ತಿಂಗಳಿಗೆ ರೂ. ೨೨೦೦೦ / – + 20% HRA: ಎರಡನೇ ವರ್ಷ.

ತಿಂಗಳಿಗೆ ರೂ. ೨೫೦೦೦ / – + 20% HRA ಮೂರನೇ ಮತ್ತು ಅಂತಿಮ ವರ್ಷ.

**ಪೋಸ್ಟ್ ಡಾಕ್ಟರಲ್ ಫೆಲೋಶಿಪ್‌ಗೆ ಸ್ಟೈಫಂಡ್ ಕೆಳಕಂಡಂತಿವೆ:**

ಫೆಲೋಶಿಪ್ ಸಂಪೂರ್ಣ ಅವಧಿಗೆ ತಿಂಗಳಿಗೆ ೩೫,೦೦೦ ರೂ. ನಿಯಮಗಳ ಪ್ರಕಾರ HRA. ರೂ ಮತ್ತು ೫೦,೦೦೦ / – ವಾರ್ಷಿಕ ಸಾದಿಲ್ವಾರು ಅನುದಾನ

**ಸಂಸ್ಥೆಯ ಪ್ರಶಸ್ತಿಗಳು**

- ಡಾ. ವಿಜಯ್ ವಿ. ಕುಮಾರ್, ಅನಿಲ್ ವಿ. ಕುಮಾರ್ ಮತ್ತು ಅವರ ಕುಟುಂಬದಿಂದ ಸ್ಥಾಪಿಸಲ್ಪಟ್ಟ ಶ್ರೀ ಡಿ ಕೆ ವೆಂಕಟೇಶ್ ಮೂರ್ತಿ ಚಿನ್ನದ ಪದಕವನ್ನು ಬಿ.ಎಸ್.ಸಿ / ಬಿ.ಎ.ಎಸ್.ಎಲ್.ಪಿ ಡಿಗ್ರಿಯಲ್ಲಿ ಮೊದಲ ರ್‍ಯಾಂಕ್ ಪಡೆದವರಿಗೆ ನೀಡಲಾಗುತ್ತದೆ
- ಮೂರನೇ ಬಿ.ಎಸ್.ಸಿ / ಬಿ.ಎ.ಎಸ್.ಎಲ್.ಪಿ ಡಿಗ್ರಿಯಲ್ಲಿ ಅತ್ಯುತ್ತಮ ಕ್ಲಿನಿಕಲ್ ಕಾನ್ಫರೆನ್ಸ್ ಪ್ರಸ್ತುತಿಗಾಗಿ ವಿದ್ಯಾರ್ಥಿಗಳಿಗೆ ಪ್ರಶಸ್ತಿ.
- ಎಂ.ಎಸ್.ಸಿ (ಸ್ಪೀಚ್–ಲ್ಯಾಂಗ್ವೇಜ್ ಪೆಥಾಲಜಿ) ಯಲ್ಲಿನ ಅತ್ಯುತ್ತಮ ವಿದ್ಯಾರ್ಥಿ ಚಿಕಿತ್ಸಕರಿಗೆ ಶ್ರೀಮತಿ ಇಂದಿರಾ ಕುಮಾರಿ ಅವರು ಸ್ಥಾಪಿಸಿದ ಅಭಿಲಾಶ ಪ್ರಶಸ್ತಿ. ಈ ಪ್ರಶಸ್ತಿ ನಗದು ಬಹುಮಾನದ ರೂಪದಲ್ಲಿದೆ.
- ಡಾ. ವಿಜಯ್ ವಿ. ಕುಮಾರ್, ಅನಿಲ್ ವಿ. ಕುಮಾರ್ ಮತ್ತು ಅವರ ಕುಟುಂಬದವರು ಸ್ಥಾಪಿಸಿದ ಶ್ರೀಮತಿ ಜಯಲಕ್ಷ್ಮಿ ಚಿನ್ನದ ಪದಕ ಎಂಎಸ್ಸಿ (ಸ್ಪೀಚ್–ಲ್ಯಾಂಗ್ವೇಜ್ ಪೆಥಾಲಜಿ) ಯಲ್ಲಿ ಮೊದಲ ಸ್ಥಾನ ಪಡೆದವರಿಗೆ ನೀಡಲಾಗುತ್ತದೆ
- ಫ್ರೆಂಡ್ಸ್ ಯುನೈಟೆಡ್ ಆರ್ಗನೈಸೇಶನ್ ಎಂಡೋಮೆಂಟ್ ಸ್ಕಾಲರ್ಶಿಪ್, ಎಂಎಸ್ಸಿ (ಸ್ಪೀಚ್ ಲ್ಯಾಂಗ್ವೆಜ್ ಪೆಥಾಲಜಿ) ಯಲ್ಲಿ ಅತ್ಯಧಿಕ ಅಂಕ ಪಡೆದ ವಿದ್ಯಾರ್ಥಿಗೆ ನಗದು ಬಹುಮಾನ ನೀಡಲಾಗುತ್ತದೆ
- ಮೊದಲ ಎಂಎಸ್ಸಿ(ಆಡಿಯಾಲಜಿ / ಸ್ಪೀಚ್–ಲ್ಯಾಂಗ್ವೇಜ್ ಪೆಥಾಲಜಿ) ವಿದ್ಯಾರ್ಥಿಗಳಿಗೆ ಗೆ ಅತ್ಯುತ್ತಮ ಜರ್ನಲ್ ಕ್ಲಬ್ ಪ್ರಸ್ತುತಿಗಾಗಿ ಪ್ರಶಸ್ತಿ ನೀಡಲಾಗುತ್ತದೆ.
- ಶ್ರೀಮತಿ. ಟಿ.ವಿ. ಅಲಮೇಲು ಚಿನ್ನದ ಪದಕ– ಎಂ.ಎಸ್ಸಿ. (ಸ್ಪೀಚ್–ಲ್ಯಾಂಗ್ವೇಜ್ ಪೆಥಾಲಜಿ) ಮಾತಿನ ಉಚ್ಚಾರಣೆ (ಸ್ಪೀಚ್ ಪ್ರೊಡಕ್ಷನ್) ಎಂಬ ವಿಷಯದಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸಿದವರಿಗೆ ನೀಡಲಾಗುತ್ತದೆ.
- ಡಾ. ಆರ್. ಸುಂದರ್ ಚಿನ್ನದ ಪದಕ – ಮಾತು–ಭಾಷಾ ಸಂಸ್ಕರಣೆ (ಸ್ಪೀಚ್– ಲ್ಯಾಂಗ್ವೇಜ್ ಪ್ರೊಸೆಸಿಂಗ್)/ ಮಾತು ಭಾಷಾಗ್ರಹಿಕೆ (ಸ್ಪೀಚ್–ಲ್ಯಾಂಗ್ವೇಜ್ ಪೆರ್ಸೆಪ್ಷನ್) ವಿಷಯದಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸಿದವರಿಗೆ (ಮಾತು – ಭಾಷೆ ಸಂಸ್ಕರಣೆ / ಎಂಎಸ್ಸಿ (ಸ್ಪೀಚ್–ಲ್ಯಾಂಗ್ವೇಜ್ ಪೆಥಾಲಜಿ) ನೀಡಲಾಗುತ್ತದೆ.

- ಡಾ. ವಿಜಯಲಕ್ಷ್ಮಿ ಬಸವರಾಜ್ ಚಿನ್ನದ ಪದಕ – ಅತ್ಯುತ್ತಮ ಸ್ನಾತಕೋತ್ತರ ವಿದ್ಯಾರ್ಥಿ ಎಂ.ಎಸ್ಸಿ. (ಆಡಿಯಾಲಜಿ), ಎಲ್ಲ ಸೆಮಿಸ್ಟರ್ ಗಳಲ್ಲಿ ಅತ್ಯುನ್ನತ ಅಂಕಗಳನ್ನು ಗಳಿಸಿದವರಿಗೆ ನೀಡಲಾಗುತ್ತದೆ.
- ಶ್ರೀಮತಿ. ಆರ್. ಸುಮಿತ್ರಮ್ಮ ಮತ್ತು ಶ್ರೀ ಆರ್.ಕೆ. ರಾಜಗೋಪಾಲ ಚಿನ್ನದ ಪದಕ – ಎಂ.ಎಸ್ಸಿ (ಆಡಿಯಾಲಜಿ) ೪ ಸೆಮಿಸ್ಟರ್ ಗಳಲ್ಲಿ ಪ್ರಾಯೋಗಿಕ ವಿಷಯದಲ್ಲಿ ಅತ್ಯಧಿಕ ಅಂಕ ಗಳಿಸಿದವರಿಗೆ ನೀಡಲಾಗುತ್ತದೆ.

**ಮೈಸೂರು ವಿಶ್ವವಿದ್ಯಾನಿಲಯದ ಸಮಾವೇಶದಲ್ಲಿ ನೀಡುವ ಚಿನ್ನದ ಪದಕಗಳು:**

- ಬಿಎಎಸ್ಎಲ್ಪಿಯಲ್ಲಿ ಅತ್ಯಧಿಕ ಅಂಕಗಳನ್ನು ಪಡೆಯುವ ವಿದ್ಯಾರ್ಥಿಗೆ ಡಾ. ನಟೇಶ್, ರತ್ನ ಚಿನ್ನದ ಪದಕ ನೀಡಲಾಗುತ್ತದೆ.
- ರಾಷ್ಟ್ರೀಯ ಶ್ರವಣ ರಕ್ಷಣಾ ಸಂಘದ (ನ್ಯಾಷನಲ್ ಹಿಯರಿಂಗ್ ಕೇರ್) ವತಿಯಿಂದ ಸ್ಥಾಪಿತಗೊಂಡಿರುವ ಶ್ರವಣ ವಿಜ್ಞಾನ ಚಿನ್ನದ ಪದಕ – ಬಿ.ಎಸ್.ಸಿ (SP & HG)/©.ಎ.ಎಸ್.ಎಲ್.ಪಿ ಡಿಗ್ರಿಯಲ್ಲಿ ಆಡಿಯಾಲಜಿ ಆಧಾರಿತ ವಿಷಯಗಳಲ್ಲಿ ಅತ್ಯುನ್ನತ ಅಂಕಗಳನ್ನು ಪಡೆದುಕೊಳ್ಳುವ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ.
- ಈ ಸಂಸ್ಥೆಯಲ್ಲಿ ಸ್ಪೀಚ್ ಪೆಥಾಲಜಿ ಇಲಾಖೆಯಲ್ಲಿ ಬೋಧಕರಾಗಿದ್ದ ದಿವಂಗತ ಮನೋಹರ್ ಅವರ ಹೆಸರಿನಲ್ಲಿ ಎಂಎಸ್ಸಿ (ಸ್ಪೀಚ್–ಲ್ಯಾಂಗ್ವೇಜ್ ಪೆಥಾಲಜಿ) ಯಲ್ಲಿ ಮೊದಲ ರ್‍ಯಾಂಕ್ ಪಡೆದ ವಿದ್ಯಾರ್ಥಿಗೆ ಶ್ರೀ ಮನೋಹರ್ ಚಿನ್ನದ ಪದಕ ನೀಡಲಾಗುತ್ತದೆ.
- ಈ ಸಂಸ್ಥೆಯ ವಿದ್ಯಾರ್ಥಿಯಾಗಿದ್ದ ದಿವಂಗತ ಶ್ರೀಮತಿ ಆರತಿ ವೆಂಕಟರಾಮನ್ ಅವರ ನೆನಪಿಗಾಗಿ ಸ್ಥಾಪಿಸಲಾದ ಆರತಿ ವೆಂಕಟರಾಮನ್ ಚಿನ್ನದ ಪದಕವನ್ನು ಎಂಎಸ್ಸಿ (ಆಡಿಯಾಲಜಿ) ಮೊದಲ ರ್‍ಯಾಂಕ್ ಪಡೆದ ವಿದ್ಯಾರ್ಥಿಗೆ ನೀಡಲಾಗುತ್ತದೆ.

**ಸಂಪರ್ಕಿಸಿ**

**ಡಾ. ಅಜಿತ್ ಕುಮಾರ್ ಯು.**
ಪ್ರಾಧ್ಯಾಪಕರು, ಶ್ರವಣ ವಿಜ್ಞಾನ / ಸಂಯೋಜಕರು, ಶೈಕ್ಷಣಿಕ ವಿಭಾಗ
ದೂರವಾಣಿ: 91-0821-2502586 / 2502165
ಇಮೇಲ್: ajithkumar18@gmail.com / aiish.academic@gmail.com

**ಡಾ. ಜಯಶಂಕರ್ ರಾವ್**
ರಿಜಿಸ್ಟ್ರಾರ್
ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮೈಸೂರು – 570 006
ದೂರವಾಣಿ: 91-0821-2502164
ಇಮೇಲ್: jadhavjsrao@aiishmysore.in

**ಶ್ರೀಮತಿ ಎನ್. ಪರಿಮಳ**
ಸಹಾಯಕ ರಿಜಿಸ್ಟ್ರಾರ್
ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮೈಸೂರು – 570 006
ದೂರವಾಣಿ:: 91-0821-2502162
ಇಮೇಲ್: aiish.asstregistrar@gmail.com

**ಶ್ರೀ ಕೆ.ಪಿ. ನರಸಿಂಹ ಪ್ರಸಾದ್**
ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮೈಸೂರು – 570 006
ದೂರವಾಣಿ: 91-0821-2502172

# ವಿಭಾಗಗಳು

# ಶ್ರವಣವಿಜ್ಞಾನ ವಿಭಾಗ

## ಉದ್ದೇಶಗಳು

ಶ್ರವಣವಿಜ್ಞಾನ ವಿಭಾಗದ ಪ್ರಮುಖ ಉದ್ದೇಶವೆಂದರೆ ವೃತ್ತಿಪರ ತರಬೇತಿ ನೀಡುವುದು, ಪ್ರಾಯೋಗಿಕ ಸೇವೆಗಳನ್ನು ಒದಗಿಸುವುದು, ಸಂಶೋಧನೆ **ನಡೆಸುವುದು ಮತ್ತು ಶ್ರವಣದೋಷಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು.**

## ಪಾತ್ರ:

ಶ್ರವಣವಿಜ್ಞಾನ ಕ್ಷೇತ್ರದಲ್ಲಿ ಮಾನವಸಂಪನ್ಮೂಲವನ್ನು ಹೆಚ್ಚಿಸುವ ಸಲುವಾಗಿ, ಡಿಪ್ಲೊಮಾ, ಪದವಿ ಮತ್ತು ಸ್ನಾತಕೋತ್ತರ ಹಂತದ ವಿವಿಧ ಅಲ್ಪಾವಧಿ ಮತ್ತು ದೀರ್ಘಾವಧಿ ತರಬೇತಿ ಕಾರ್ಯಕ್ರಮಗಳ ಮೂಲಕ ವೃತ್ತಿಪರ ತರಬೇತಿಯನ್ನು ನೀಡುವುದು, ಹೆಚ್ಚಿನ ಚಿಕಿತ್ಸಾ ಸೇವೆಗಳನ್ನು ಒದಗಿಸುವುದರ ಜೊತೆಗೆ ಕಿವುಡುತನವನ್ನು ತಡೆಗಟ್ಟುವುದು, ಶ್ರವಣಶಕ್ತಿಯ ಪರೀಕ್ಷೆ, ಶ್ರವಣ ಉಪಕರಣಗಳ ಆಯ್ಕೆ ಮತ್ತು ಪರೀಕ್ಷೆ, ಕಸ್ಟಮ್ ಕಿವಿ ಅಚ್ಚುಗಳ ತಯಾರಿಕೆ, ಶ್ರವಣದೋಷ ಹೊಂದಿರುವವರ ಪುನರ್ವಸತಿ, ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ಸಂಶೋಧನಾ ಚಟುವಟಿಕೆಗಳಲ್ಲಿ ಭಾಗವಹಿಸುವುದು. ಇದರೊಂದಿಗೆ, ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಶ್ರವಣವಿಜ್ಞಾನದ ಸಂಶೋಧನೆಗಳೊಂದಿಗೆ ಸಾಟಿಯಿರಲು ಸಂಶೋಧನಾ ಚಟುವಟಿಕೆಗಳನ್ನು ಕೈಗೊಳ್ಳುವುದು.

## ಚಟುವಟಿಕೆಗಳು

- ತರಬೇತಿ ಮತ್ತು ಪ್ರಾಯೋಗಿಕ ಸೇವೆಗಳನ್ನು ಒದಗಿಸುವುದು
- ಸಂಶೋಧನಾ ಚಟುವಟಿಕೆಗಳನ್ನು ಕೈಗೊಳ್ಳುವುದು
- ವಿಸ್ತರಣಾ ಚಟುವಟಿಕೆಗಳು ಮತ್ತು ಸಾರ್ವಜನಿಕ ಶಿಕ್ಷಣ

## ತರಬೇತಿ

ವಿಭಾಗದ ಬೋಧನಾ ಸಿಬ್ಬಂದಿಯು ಹಲವಾರು ಅಲ್ಪಾವಧಿಯ ಮತ್ತು ದೀರ್ಘಾವಧಿಯ ತರಬೇತಿ ಕಾರ್ಯಕ್ರಮಗಳಲ್ಲಿ ಬೋಧಿಸುತ್ತಾರೆ.
ಅವುಗಳು:

- ಪೋಸ್ಟ್ ಡಾಕ್ಟರಲ್ ಫೆಲೋಶಿಪ್
- ಶ್ರವಣವಿಜ್ಞಾನದಲ್ಲಿ ಸಂಶೋಧನೆ
- ಎಂಎಸ್ಸಿ (ಆಡಿಯಾಲಜಿ)
- ಸ್ನಾತಕೋತ್ತರ ಮಟ್ಟದಲ್ಲಿ ಸಾಫ್ಟ್ ಕೋರ್ ಮತ್ತು ಮುಕ್ತ ಚುನಾಯಿತ (ಓಪನ್ ಎಲೆಕ್ಟಿವ್) ವಿಷಯಗಳ ಬಗ್ಗೆ ಕಲಿಸುವುದು
- ಬಿ.ಎ.ಎಸ್ ಎಲ್ ಪಿ
- ನ್ಯೂರೋ ಆಡಿಯಾಲಜಿಯಲ್ಲಿ ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ
- ಹಿಯರಿಂಗ್ ಏಡ್ ಮತ್ತು ಇಯರ್ ಮೌಲ್ಡ್ ಟೆಕ್ನಾಲಜಿಯಲ್ಲಿ ಡಿಪ್ಲೊಮಾ
- ಹಿಯರಿಂಗ್, ಲ್ಯಾಂಗ್ವೇಜ್ ಮತ್ತು ಸ್ಪೀಚ್ ಸೈನ್ಸಸ್ನಲ್ಲಿ ಡಿಪ್ಲೊಮಾ

- ಡಿಪ್ಲೊಮಾ (ವಿಶೇಷ ಶಿಕ್ಷಣ) (ಹಾರ್ಡ್ ಆಫ್ ಹಿಯರಿಂಗ್)
- ಪದವಿ ಶಿಕ್ಷಣ (ವಿಶೇಷ ಶಿಕ್ಷಣ) (ಹಿಯರಿಂಗ್ ಇಂಪೈರ್ಮೆಂಟ್)
- ಸ್ನಾತಕೋತ್ತರ ಪದವಿ (ವಿಶೇಷ ಶಿಕ್ಷಣ) (ಹಿಯರಿಂಗ್ ಇಂಪೈರ್ಮೆಂಟ್)
- ಅಲ್ಪಾವಧಿಯ ತರಬೇತಿ ಶಿಕ್ಷಣ
- ಪುನಶ್ಚೇತನ ಶಿಕ್ಷಣ / ಸೆಮಿನಾರ್ ಗಳು / ಕಾರ್ಯಾಗಾರಗಳು
- ಸಾಪ್ತಾಹಿಕ ಜರ್ನಲ್ ಕ್ಲಬ್  ಮತ್ತು ಚಿಕಿತ್ಸಾ ಸಮ್ಮೇಳನಗಳಿಗೆ ಮಾರ್ಗದರ್ಶನ
- ಸರ್ವ ಶಿಕ್ಷಾ ಅಭಿಯಾನ (ಎಸ್ಎಸ್ಎ) ಕಾರ್ಯಕ್ರಮ

## ಚಿಕಿತ್ಸಾ ಸೇವೆಗಳು

ವಿಭಾಗವು ನವಜಾತ ಶಿಶುಗಳಿಂದ ಹಿಡಿದು ವಯಸ್ಸಾದವರಿಗೆ ಸಂಪೂರ್ಣ ಚಿಕಿತ್ಸಾ ಸೇವೆಗಳನ್ನು ಒದಗಿಸುತ್ತದೆ. ಶ್ರವಣದೋಷವನ್ನು ತಡೆಗಟ್ಟುವುದು, ಶ್ರವಣಶಕ್ತಿಯ ಪರೀಕ್ಷೆ, ಶ್ರವಣೋಪಕರಣಗಳ ಆಯ್ಕೆ ಮತ್ತು ಪರೀಕ್ಷೆ, ವ್ಯಕ್ತಿಗತ ಕಿವಿ ಅಚ್ಚುಗಳು ಮತ್ತು ಶ್ರವಣದೋಷ ಹೊಂದಿದ ವ್ಯಕ್ತಿಗಳ ಪುನರ್ವಸತಿ – ಈ ಸೇವೆಗಳನ್ನು ಶ್ರವಣಶಕ್ತಿಯ ತಪಾಸಣೆ ಮತ್ತು ಶ್ರವಣಶಕ್ತಿಯ ನಿರ್ವಹಣೆ ಎಂದು ವ್ಯಾಪಕವಾಗಿ ವರ್ಗೀಕರಿಸಬಹುದು.

## ಶ್ರವಣ ತಪಾಸಣೆ:

ಶ್ರವಣ ತಪಾಸಣೆಯು ವಿವರವಾದ ಪರೀಕ್ಷೆಗಳನ್ನು ಒಳಗೊಳ್ಳುತ್ತದೆ. ವ್ಯಕ್ತಿಯ ನಡವಳಿಕೆ/ ವರ್ತನಾ ಪರೀಕ್ಷೆ ಹಾಗೂ ವಸ್ತುನಿಷ್ಠ ಪರೀಕ್ಷೆಗಳ ಮೂಲಕ ವಿವರವಾದ ಶ್ರವಣ ತಪಾಸಣೆ ನಡೆಸಲಾಗುತ್ತದೆ. ಶ್ರವಣಶಕ್ತಿ ಸಮಸ್ಯೆಯನ್ನು ಅತ್ಯಾಧುನಿಕ ತಂತ್ರಜ್ಞಾನ ಮತ್ತು ಅನೇಕ ಪರೀಕ್ಷೆಗಳ ಬ್ಯಾಟರಿಯ ಫಲಿತಾಂಶಗಳ ಆಧಾರದ ಮೇಲೆ ಮಾಡಲಾಗುತ್ತದೆ. ಇದರ ಜೊತೆಗೆ, ಕಿವಿಯಲ್ಲಿ ಗುಂಯ್ ಗುಡುವುದು, ಹೈಪರಾಕುಸಿಸ್, ಕಾಕ್ಲಿಯಾರ್ ಡೆಡ್ ಪ್ರದೇಶಗಳು, ಶ್ರವಣೇಂದ್ರಿಯ ಡಿಸ್–ಸಿಂಕ್ರೋನಿ ಮತ್ತು ಕೇಂದ್ರೀಯ ಆಡಿಟರಿ ಪ್ರೊಸೆಸಿಂಗ್ ಡಿಸಾರ್ಡರ್ (ಸಿಎಪಿಡಿ) ಪರೀಕ್ಷೆಗಳು ಲಭ್ಯವಿವೆ.

ವಿಭಾಗದಲ್ಲಿ ಪ್ರಮುಖ ವರ್ತನೆಯ ಪರೀಕ್ಷೆಗಳು, ಶಬ್ದಗಳನ್ನು ಬಳಸಿ ಮಾಡುವ ಪರೀಕ್ಷೆಗಳು ಮತ್ತು ಮಾತನ್ನು ಬಳಸಿ ಮಾಡುವಂತಹ ಪರೀಕ್ಷೆಗಳು,  ವರ್ತನೆಯ ಪರೀಕ್ಷೆಗಳನ್ನು (ಃಔಂ) ಸಹ ನಡೆಸುವ ಸೌಲಭ್ಯಗಳು ಇವೆ. ಗಿಖಂ ಮೂಲಕ ಆರು ತಿಂಗಳ ಮಕ್ಕಳು ಶ್ರವಣ ಸಂಬಂಧಿತ ಪ್ರಚೋದನೆಗಳಿಗೆ ಹೇಗೆ ಪ್ರತಿಕ್ರಿಯಿಸುತ್ತಾರೆ ಎಂದು ತಿಳಿದುಕೊಳ್ಳಬಹುದು.

ವಸ್ತುನಿಷ್ಠ ಪರೀಕ್ಷೆಗಳ ಮೂಲಕ ಶಬ್ಧಗಳಿಗೆ ಪ್ರತಿಕ್ರಿಯೆಯನ್ನು ವ್ಯಕ್ತಿಯ ಸ್ವಯಂಪ್ರೇರಣೆಯಿಲ್ಲದೆ ಪಡೆಯಬಹುದು. ಇವುಗಳಲ್ಲಿ ಮಧ್ಯಕಿವಿ ಪರೀಕ್ಷೆ, ಒಳಕಿವಿ ಪರೀಕ್ಷೆ ಹಾಗೂ ಶ್ರವಣೇಂದ್ರಿಯದ ನರದ ಪರೀಕ್ಷೆಗಳು ಲಭ್ಯವಿದೆ.

ಶ್ರವಣಶಕ್ತಿ ಪರೀಕ್ಷೆಗಳ ನಂತರ, ಸರಿಯಾದ ಸೂಕ್ತ ಚಿಕಿತ್ಸೆ ಅಥವಾ ಪುನರ್ವಸತಿ ಸೇವೆಗಳನ್ನು ಪಡೆಯಲು ಶಿಫಾರಸು ಮಾಡಲಾಗುತ್ತದೆ. ಉದ್ದೇಶಿತ ಚಿಕಿತ್ಸೆಯು ವೈದ್ಯಕೀಯ / ಶಸ್ತ್ರಚಿಕಿತ್ಸಾ ಮಾರ್ಗವಾಗಿರಬಹುದು. ಶಿಫಾರಸು ಮಾಡಿದಂತಹ ಚಿಕಿತ್ಸೆಗಳನ್ನು ವಿಭಾಗದಲ್ಲಿ ಪಡೆಯಬಹುದು.

## ಶ್ರವಣಶಕ್ತಿ ನಿರ್ವಹಣೆ

ಶ್ರವಣೋಪಕರಣಗಳನ್ನು ಅಳವಡಿಸುವುದು: ವಿಭಿನ್ನ ವಿಧಗಳ/ ಮಾದರಿಗಳ ಶ್ರವಣೋಪಕರಣಗಳು ಮತ್ತು ಸಹಾಯಕ ಶ್ರವಣ ಸಾಧನಗಳು (೦ಐಆ) ಸೇರಿದಂತೆ ಅನೇಕ ಶ್ರವಣೋಪಕರಣಗಳು ಪ್ರಯೋಗಕ್ಕೆ ಲಭ್ಯವಿದೆ. ಸಾಮಾನ್ಯವಾಗಿ, ವೈದ್ಯಕೀಯ ಚಿಕಿತ್ಸೆಯಿಂದ ಶ್ರವಣ ನ್ಯೂನತೆಗೆ ಪರಿಹಾರ ಸಿಗದಿದ್ದ ಸಂದರ್ಭದಲ್ಲಿ ಶ್ರವಣೋಪಕರಣಗಳನ್ನು ಸೂಚಿಸಲಾಗುತ್ತದೆ. ಸೂಚಿಸಲಾದ ಶ್ರವಣೋಪಕರಣಗಳನ್ನು ದೇಹದ ಮಟ್ಟ ಮತ್ತು ಕಿವಿಯ ಮಟ್ಟದಲ್ಲಿ (BTE, Spectacle, in the ear, receiver-in-the canal hearing aids, in-the-canal and completely in-the-canal hearing aids) ಇರಿಸಿಕೊಳ್ಳಬಹುದಾಗಿದೆ. ಗ್ರಾಹಕರ ಪರೀಕ್ಷೆಗೆ ಸಾಂಪ್ರದಾಯಿಕ ಮತ್ತು ಡಿಜಿಟಲ್ ತಂತ್ರಜ್ಞಾನದ ಸಾಧನಗಳು ಲಭ್ಯವಿದೆ. ಗ್ರಾಹಕರಿಗೆ ಸೂಕ್ತವಾದ ಸಾಧನವನ್ನು ಆಯ್ಕೆ ಮಾಡಲು ಅವುಗಳ ಪ್ರಯೋಜನವನ್ನು ನಿರ್ಣಯಿಸಲು ನಿರ್ದಿಷ್ಟ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಅರ್ಹ ಗ್ರಾಹಕರಿಗೆ, ದೇಹ ಮಟ್ಟದ ಶ್ರವಣ ಸಾಧನಗಳನ್ನು ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ 'ಅಂಗವಿಕಲ ವ್ಯಕ್ತಿಗಳಿಗೆ ನೆರವು / ಸಹಾಯಕ / ವಸ್ತುಗಳು (೦ಆಖಔ)' ಯೋಜನೆಯಡಿಯಲ್ಲಿ ನೀಡಲಾಗುತ್ತದೆ. ಕೇವಲ ಶ್ರವಣೋಪಕರಣದ ನೆರವು ಸಾಕಾಗದೇ ಇರುವ ಸಂದರ್ಭಗಳಲ್ಲಿ ಹೆಚ್ಚುವರಿ ಮಾಹಿತಿ ಪಡೆಯಲು ಶ್ರವಣ ನ್ಯೂನತೆಯುಳ್ಳ ವ್ಯಕ್ತಿಗಳಿಗೆ ಉಪಯೋಗಿ ಎನಿಸುತ್ತವೆ. ಈ ಸಾಧನಗಳು ವ್ಯಕ್ತಿಗಳ ಶ್ರವಣ ಗ್ರಹಿಕ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಉದಾಹರಣೆಗೆ: ಬಾಗಿಲ/ ದೂರವಾಣಿ ಕರೆಗಂಟೆ, ದೂರವಾಣಿ ಸಂಭಾಷಣೆಯಲ್ಲಿ ನೆರವು ಮತ್ತು ದೂರದರ್ಶನವನ್ನು ನೋಡುವುದು ಇತರೆ.

ಶ್ರವಣ ನ್ಯೂನತೆಯುಳ್ಳ ವ್ಯಕ್ತಿಗೆ ಕಾಕ್ಲಿಯಾರ್ ಇಂಪ್ಲಾಂಟ್ ಸಾಧನದ ಅಗತ್ಯವಿದೆಯೋ ಎಂಬುದನ್ನು ನಿರ್ಧರಿಸಲು ಹಲವು ಪರೀಕ್ಷೆಗಳನ್ನು ಸಹ ನಡೆಸಲಾಗುತ್ತದೆ. ಕೊಕ್ಲಿಯಾರ್ ಇಂಪ್ಲಾಂಟ್ನ ಮಾತಿನ ಸಂಸ್ಕಾರಕಗಳನ್ನು (processor) ಪ್ರೋಗ್ರಾಮಿಂಗ್ ಮಾಡಲು ಮತ್ತು ಕಾಕ್ಲಿಯರ್ ಇಂಪ್ಲಾಂಟ್ನಿಂದ ಆಗಬಹುದಾದ ಲಾಭದ ಪರೀಕ್ಷೆಗಳನ್ನು ಅಳೆಯಲು ಸಹ ಸೌಲಭ್ಯಗಳು ಲಭ್ಯವಿವೆ.

ಶ್ರವಣೋಪಕರಣ ವಿತರಿಸುವ ಯೋಜನೆ: ಶ್ರವಣವಿಜ್ಞಾನ ವಿಭಾಗವು ಶ್ರವಣೋಪಕರಣ ವಿತರಣಾ ಯೋಜನೆಯನ್ನು ೨೦೦೬ ರಲ್ಲಿ ಯಶಸ್ವಿಯಾಗಿ ಚಾಲನೆ ಮಾಡಿದೆ. ಈ ಯೋಜನೆಯ ಮೂಲಕ ಗ್ರಾಹಕರಿಗೆ ರಿಯಾಯಿತಿ ದರದಲ್ಲಿ ನಿಗದಿತ ಶ್ರವಣೋಪಕರಣಗಳನ್ನು ವಿತರಿಸಲಾಗುತ್ತದೆ. ಈ ಸಾಧನಗಳು (ADIP) ಯೋಜನೆಯಡಿ ದೊರಕದಂತಹ (ಭಾರತ ಸರಕಾರದಿಂದ) ಇತರ ಸಾಧನಗಳನ್ನು ಒಳಗೊಂಡಿವೆ.

ಕಿವಿ ಅಚ್ಚುಗಳು: ಬಳಕೆದಾರರು ಕಿವಿಗೆ ನಿರ್ದಿಷ್ಟ ರೀತಿಯ ಶ್ರವಣೋಪಕರಣಗಳಿಗೆ ಕಿವಿ ಅಚ್ಚು ಬಳಸಬೇಕಾಗುತ್ತದೆ. ವ್ಯಕ್ತಿಗತ ಕಿವಿ ಅಚ್ಚು, ಮೃದುವಾದ ಅಚ್ಚು ಮತ್ತು ಕಸ್ಟಮ್ ಕಿವಿಯೊಳಗಿನ ಮತ್ತು ಕಿವಿಯ ಕಾಲುವೆಯಲ್ಲಿ ಇರಿಸುವಂತಹ ಶ್ರವಣೋಪಕರಣಗಳನ್ನು ಒದಗಿಸಲು ವಿಭಾಗದಲ್ಲಿ ಸೌಕರ್ಯವಿದೆ. ೧೧ ನೇ ಪಂಚವಾರ್ಷಿಕ ಯೋಜನೆಯ ಭಾಗವಾಗಿ ಕೇಂದ್ರ ಅಚ್ಚು ಪ್ರಯೋಗಾಲಯವನ್ನು ವಿಭಾಗದಲ್ಲಿ ಸ್ಥಾಪಿಸಲಾಗಿದೆ. ಈ ಪ್ರಯೋಗಾಲಯದಲ್ಲಿ ಕಿವಿ ಅಳತೆಗಳನ್ನು (ಅಚ್ಚುಗಳನ್ನು ತಯಾರಿಸುವ ಸೌಲಭ್ಯಗಳು ಲಭ್ಯವಿಲ್ಲದ ವಿವಿಧ ಕೇಂದ್ರಗಳಿಂದ) ಸಂಸ್ಕರಿಸಲಾಗುತ್ತದೆ ಮತ್ತು ಕಸ್ಟಮ್ ಅಚ್ಚುಗಳನ್ನು ತಯಾರಿಸಿ ಆ ಕೇಂದ್ರಗಳಿಗೆ ಕಳುಹಿಸಲಾಗುತ್ತದೆ. ಕಸ್ಟಮ್ ಅಚ್ಚುಗಳ ಬಳಕೆಯನ್ನು ಪ್ರೋತ್ಸಾಹಿಸುವ ಸಲುವಾಗಿ, ವಿವಿಧ ಪುನರ್ವಸತಿ ಗುಂಪುಗಳ ವ್ಯಕ್ತಿಗಳಿಗೆ ತರಬೇತಿ ನೀಡಲಾಗುತ್ತದೆ, ಇದರಿಂದಾಗಿ ಅವರು ಕಿವಿ ಅಳತೆ ಪಡೆದು ಅಚ್ಚು ಮಾಡುವುದಕ್ಕಾಗಿ ಪ್ರಯೋಗಾಲಯಕ್ಕೆ ಕಳುಹಿಸಬಹುದು.

ಸಮಾಲೋಚನೆ: ಕೇವಲ ಶ್ರವಣೋಪಕರಣಗಳನ್ನು ಧರಿಸಿದ ಮಾತ್ರಕ್ಕೆ ಶ್ರವಣ ಶಕ್ತಿಯ ನಿರ್ವಹಣೆ ಸಾಧ್ಯವಿಲ್ಲ. ಬದಲಾಗಿ, ಗ್ರಾಹಕರು ತಮ್ಮ ಸಮಸ್ಯೆಯ ನಿರ್ವಹಣೆಯ ಕುರಿತು ತರಬೇತಿ ಪಡೆಯಬೇಕಾಗುತ್ತದೆ. ಶ್ರವಣ ಸಾಧನ, ಅದರ ರಕ್ಷಣೆ, ಬಳಕೆಯ ಬಗ್ಗೆ ಅರಿವು ಅಗತ್ಯವಾಗಿವೆ. ಸಾಧನದಿಂದ ಗರಿಷ್ಟ ಪ್ರಯೋಜನವನ್ನು ಹೇಗೆ ಪಡೆದುಕೊಳ್ಳುವುದು, ಮತ್ತು ಶ್ರವಣ ಸಾಧನಕ್ಕೆ ಹೊಂದಿಕೊಳ್ಳುವುದು ಹೇಗೆ ಎಂಬ ಮಾಹಿತಿಯನ್ನು ಕೂಡಾ ಒದಗಿಸಲಾಗುತ್ತದೆ. ಶ್ರವಣ ಕೌಶಲ್ಯಗಳು, ತುಟಿಗಳ ಚಲನೆಯಿಂದ ಮಾತು ಗ್ರಹಿಸುವುದು ಮತ್ತು ಸಂವಹನ ತಂತ್ರಗಳನ್ನು ಹೆಚ್ಚಿಸಲು ಮಾರ್ಗದರ್ಶನಗಳನ್ನು ನೀಡಲಾಗುತ್ತದೆ. ಈ ಅಂಶಗಳ ಕುರಿತು ಕರಪತ್ರಗಳನ್ನು ಗ್ರಾಹಕರಿಗೆ ನೀಡಲಾಗುತ್ತದೆ.

ಆಲಿಸುವ ತರಬೇತಿ: ಶ್ರವಣೋಪಕರಣಗಳನ್ನು ಪಡೆದಂತಹ ಗ್ರಾಹಕರು ಕೇಳಿಸಿಕೊಳ್ಳುವುದರಲ್ಲಿ ಇನ್ನೂ ತೊಂದರೆ ಅನುಭವಿಸುತ್ತಿದ್ದರೆ ಅದರೊಂದಿಗೆ ಶ್ರವಣ ಕೌಶಲ್ಯಾಭಿವೃದ್ಧಿಗಾಗಿ ತರಬೇತಿ ನೀಡಲಾಗುತ್ತದೆ. ಇದರ ಜೊತೆಯಲ್ಲಿ, ಕೆಲವು ಗ್ರಾಹಕರಿಗೆ ತುಟಿ ಚಲನೆಯ ಮೂಲಕ ಮಾತು ಗ್ರಹಿಸುವ ತರಬೇತಿ ನೀಡಲಾಗುತ್ತದೆ ಮತ್ತು ಸಂವಹನ ತಂತ್ರಗಳನ್ನು ಬಳಸಲು ಕಲಿಸಲಾಗುತ್ತದೆ. (ಆಡಿಟರಿ ಪ್ರೊಸೆಸಿಂಗ್ ಡಿಸಾರ್ಡರ್ಸ್, ಆಡಿಟರಿ ಡಿಸ್–ಸಿಂಕ್ರೋನಿ, ಟಿನ್ನೈಟಸ್, ಮತ್ತು ಹೈಪರಾಕುಸಿಸ್ನಂತಹ) ವಿಶೇಷ ಶ್ರವಣೇಂದ್ರಿಯ ಅಗತ್ಯತೆಗಳ ಗ್ರಾಹಕರ ನಿರ್ವಹಣೆ ಕೂಡ ಸಾಧ್ಯವಿದೆ. ಚಿಕಿತ್ಸೆಯ ಅವಧಿಯು ವ್ಯಕ್ತಿಯ ವಯಸ್ಸು ಮತ್ತು ಅವರು ಎದುರಿಸುವ ಸಮಸ್ಯೆಯ ಪ್ರಮಾಣವನ್ನು ಅವಲಂಬಿಸಿರುತ್ತದೆ. ಹೊರ ಊರಿನ ಗ್ರಾಹಕರಿಗೆ, ಅಲ್ಪಾವಧಿ, ಚಿಕಿತ್ಸೆಯನ್ನು ನೀಡಲಾಗುತ್ತದೆ. ಎಲ್ಲಾ ಗ್ರಾಹಕರಿಗೆ ಮನೆ ತರಬೇತಿ ಕಾರ್ಯಕ್ರಮಗಳ ವಿವರಣೆ ನೀಡಲಾಗುತ್ತದೆ.

**ವಿಸ್ತರಣಾ ಸೇವೆಗಳು**

ಗ್ರಾಮ ಮತ್ತು ಬುಡಕಟ್ಟು ಪ್ರದೇಶಗಳಲ್ಲಿ ಶಿಬಿರಗಳನ್ನು ನಡೆಸಿ ಅರ್ಹರಿಗೆ' ವಿಶೇಷ ಚೇತನ' ಪ್ರಮಾಣಪತ್ರಗಳು ಮತ್ತು ಶ್ರವಣೋಪಕರಣಗಳನ್ನು ವಿತರಿಸಲಾಗುತ್ತದೆ.

**ಸಾರ್ವಜನಿಕ ಶಿಕ್ಷಣ**

ಶ್ರವಣದೋಷ ತಡೆಗಟ್ಟುವುದು, ಗುರುತಿಸುವುದು ಮತ್ತು ಶ್ರವಣ ದೋಷದ ಪುನರ್ವಸತಿ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗಿದೆ. ಕರಪತ್ರಗಳು, ಪೋಸ್ಟರ್ಗಳು, ಸ್ಲೈಡ್ಗಳು, ವೀಡಿಯೊಗಳು ಮತ್ತು ಮಾದರಿಗಳು ಮುಂತಾದ ಮುದ್ರಣ ಮತ್ತು ಶ್ರವಣದೃಶ್ಯ ವಸ್ತುಗಳನ್ನು ತಯಾರಿಸಲಾಗುತ್ತದೆ ಮತ್ತು ಸಾರ್ವಜನಿಕ ಶಿಕ್ಷಣ ಚಟುವಟಿಕೆಗಳಲ್ಲಿ ಸಹ ಬಳಸಲಾಗುತ್ತದೆ.

**ಸಂಶೋಧನೆ**

ವಿಭಾಗದ ಸಿಬ್ಬಂದಿ ಸಂಶೋಧನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಅವರ ಸಂಶೋಧನಾ ವಿಷಯಗಳನ್ನು ವಿವಿಧ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವೇದಿಕೆಯಲ್ಲಿ ಪ್ರಸ್ತುತಪಡಿಸಲಾಗುತ್ತದೆ ಮತ್ತು ಅವರ ಸಂಶೋಧನಾ ಪತ್ರಿಕೆಗಳು ವಿವಿಧ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ನಿಯತಕಾಲಿಕಗಳಲ್ಲಿ ಪ್ರಕಟವಾಗುತ್ತವೆ. ರಾಷ್ಟ್ರೀಯ ಸಮ್ಮೇಳನಗಳಲ್ಲಿ ಪ್ರಸ್ತುತಗೊಂಡ ಹಲವು ಉತ್ತಮ ಸಂಶೋಧನೆಗಳಿಗೆ ಪ್ರಸ್ತುತ ಪ್ರಶಸ್ತಿ ದೊರಕಿದೆ. ಶ್ರವಣ ವಿಜ್ಞಾನದಲ್ಲಿ ತಮ್ಮ ಪ್ರಬಂಧಗಳನ್ನು ಮಂಡಿಸಲು ವಿಭಾಗದ ಬೋಧಕ ಸಿಬ್ಬಂದಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಾರೆ. ನಿರ್ದಿಷ್ಟ ಮತ್ತು ಕೇಂದ್ರೀಕೃತ ಸಂಶೋಧನಾ ಕಾರ್ಯವನ್ನು ಸಂಶೋಧನೆ ಮತ್ತು ಪೋಸ್ಟ್–

ಡಾಕ್ಟೊರಲ್ ಫೆಲೋಶಿಪ್ ಮಟ್ಟದಲ್ಲಿ ನಡೆಸಲಾಗುತ್ತದೆ. ಸಂಸ್ಥೆಯ ಸಂಶೋಧನಾ ನಿಧಿ ಮತ್ತು ಎಕ್ಸ್ಟ್ರಾಮ್ಯೂರಲ್ ನಿಧಿಗಳನ್ನು ಬಳಸಿಕೊಂಡು ಸಂಶೋಧನಾ ಅಧ್ಯಯನಗಳನ್ನು ನಡೆಸಲಾಗುತ್ತದೆ.

**ಸಂಪರ್ಕ**

ಡಾ. ಪ್ರವೀಣ್ ಕುಮಾರ್
ಸಹಾಯಕ ಪ್ರಾಧ್ಯಾಪಕರು, ಮತ್ತು ಮುಖ್ಯಸ್ಥರು
ಶ್ರವಣ ವಿಜ್ಞಾನ ವಿಭಾಗ
ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ,
ಮಾನಸಗಂಗೋತ್ರಿ, ಮೈಸೂರು
ಕರ್ನಾಟಕ, ಭಾರತ
ದೂರವಾಣಿ: 2502582
ಈ–ಮೇಲ್: audiologystaff@gmail.com
ಕಾರ್ಯನಿರ್ವಹಿಸುವ ಅವಧಿ: 09.00 ರಿಂದ ಸಂಜೆ 05.30 ರವರೆಗೆ
ಕಾರ್ಯ ನಿರ್ವಹಿಸುವ ದಿನಗಳು: ಸೋಮವಾರದಿಂದ ಶುಕ್ರವಾರದವರೆಗೆ (ಕೇಂದ್ರ ಸರ್ಕಾರದ ರಜಾ ದಿನಗಳನ್ನು ಹೊರತುಪಡಿಸಿ)

## ನೈದಾನಿಕ ಮನೋವಿಜ್ಞಾನ

ನೈದಾನಿಕ ಮನೋಶಾಸ್ತ್ರ ವಿಭಾಗವು ಸಂಸ್ಥೆಯ ಹಳೆಯ ಒಂದು ವಿಭಾಗಗಳಲ್ಲೊಂದು. ಸಾಮಾನ್ಯವಾಗಿ ಸಂವಹನ ನ್ಯೂನತೆಯುಳ್ಳ ವ್ಯಕ್ತಿಗಳು ಮಾನಸಿಕ ಆಯಾಮದಲ್ಲಿಯೂ ಸಮಸ್ಯೆಗಳನ್ನು ಹೊಂದಿರುವರೆಂದು ಸಾಬೀತಾಗಿದೆ. ಇವು ಸಂಬಂಧಿತ ಸಮಸ್ಯೆಗಳು ಅಥವಾ ಅವರ ಪ್ರಾಥಮಿಕ ಸಂವಹನ ಸಮಸ್ಯೆಗಳ ಪರಿಣಾಮವಾಗಿ ಪ್ರಕಟವಾಗುತ್ತವೆ. ಸೂಕ್ತ ಚಿಕಿತ್ಸೆಗಳ ಮೂಲಕ ಮಾನಸಿಕ ಆಯಾಮಗಳಲ್ಲಿ ಸುಧಾರಣೆ ತರಬಹುದಾಗಿದ್ದು, ಇದಕ್ಕೆ ಅನುಗುಣವಾಗಿ ವಿಭಾಗದ ಚಟುವಟಿಕೆಗಳು ಕೇಂದ್ರಿತವಾಗಿವೆ.

- ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಕ್ರಮಗಳ ಎಲ್ಲಾ ಹಂತದಲ್ಲೂ ಮಾತು, ಶ್ರವಣ, ಭಾಷೆ ಮತ್ತು ಸಂವಹನ ವರ್ತನೆಗಳ ಆಯಾಮಗಳ ಕುರಿತು ಶಿಕ್ಷಣ ನೀಡುವುದು ಮತ್ತು ನ್ಯೂನತೆ ಕುರಿತು ವಿವರಿಸಿ ಮನದಟ್ಟು ಮಾಡುವುದು
- ಭಾಷೆ, ಮಾತು, ಶ್ರವಣ ಮತ್ತು ಸಂವಹನ ವರ್ತನೆ ಹಾಗೂ ಮಾನಸಿಕ ಆಯಾಮಗಳಿಗೆ ಒತ್ತು ನೀಡುವ ಅನ್ವಯಿಕ, ಕ್ರಮಾಧಾರಿತ ಸಂಶೋಧನೆಗಳನ್ನು ನಡೆಸುವುದು.
- ಭಾಷೆ, ಮಾತು, ಶ್ರವಣ ಮತ್ತು ಸಂವಹನ ನ್ಯೂನತೆಯುಳ್ಳವರಿಗೆ ರೋಗ ನಿರ್ಣಯ ಮತ್ತು ಚಿಕಿತ್ಸಕ ಸೇವೆಗಳನ್ನು ವಿಸ್ತರಿಸಿ ಅವರ ಜೀವನದ ಗುಣಮಟ್ಟವನ್ನು ಉತ್ತಮಗೊಳಿಸುವುದು
- ಸಂವಹನ ತೊಂದರೆಗಳನ್ನು ತಡೆಗಟ್ಟುವುದು, ಗುರುತಿಸುವುದು, ನಿಭಾಯಿಸುವುದಕ್ಕೆ ಸಂಬಂಧಿಸಿದ ಮಾನಸಿಕ ಅಂಶಗಳನ್ನು ಕುರಿತು ಅರಿವು ಮೂಡಿಸುವ ಚಟುವಟಿಕೆಗಳನ್ನು ನಡೆಸುವುದು ಹಾಗೂ ಈ ಸಂಬಂಧಿತ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದು.

**ಉದ್ದೇಶಗಳು**

- ಮಾನಸಿಕ ದೌರ್ಬಲ್ಯ ಹಾಗೂ ವರ್ತನಾ ತೊಂದರೆಗಳ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಚಿಕಿತ್ಸೆ ಒದಗಿಸಲು ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಅವರಲ್ಲಿ ಜ್ಞಾನ ಮತ್ತು ಕೌಶಲ್ಯಗಳನ್ನು ಬೆಳೆಸುವುದು

- ಶೈಕ್ಷಣಿಕ ಕೌಶಲ್ಯ, ಚಿಕಿತ್ಸಕ ಕೌಶಲ್ಯಗಳ ತರಬೇತಿ ಒದಗಿಸಿ ವೃತ್ತಿಪರತೆ ಹೆಚ್ಚಿಸುವುದು
- ನ್ಯೂನತೆಗಳನ್ನು ಪತ್ತೆ ಹಚ್ಚಿ, ಅವರ ಬೆಳವಣಿಗೆ ಕೌಶಲ್ಯಗಳನ್ನು ತಿಳಿದು ಚಿಕಿತ್ಸೆ ಮತ್ತು ಸೇವೆಯ ರೂಪವನ್ನು ಯೋಜಿಸುವುದು
- ಭಾವನಾತ್ಮಕ ತೊಂದರೆಗಳನ್ನು ನಿವಾರಿಸುವುದು, ಅಸಹಜ ವರ್ತನೆ ಬದಲಾಯಿಸುವುದು, ಸಂವಹನ ತೊಂದರೆಗಳಿಂದ ಬಳಲುವ ವ್ಯಕ್ತಿಯ ಹಾಗೂ ಕುಟುಂಬದ ವೈಯಕ್ತಿಕ ಬೆಳವಣಿಗೆಯನ್ನು ಉತ್ತೇಜಿಸುವುದು

**ಚಟುವಟಿಕೆಗಳು**

- ಮಕ್ಕಳ ಮಾನಸಿಕ–ಶೈಕ್ಷಣಿಕ ವಿವರಗಳನ್ನು ಕಲೆಹಾಕಿ ರೋಗ ನಿರ್ಣಯ, ವಿವಿಧ ರೀತಿಯ ಸಂವಹನ ತೊಂದರೆಗಳಿಂದ ಬಳಲುವ, ಬುದ್ಧಿಮಾಂದ್ಯತೆ, ತಂತನತೆ, ನಿಧಾನಗತಿಯ ಮಾತಿನ ಬೆಳವಣಿಗೆ, ಕಲಿಕೆಯಲ್ಲಿನ ಅಸಮರ್ಥತೆಗಳು ಮತ್ತು ಬೆಳವಣಿಗೆಯಲ್ಲಿ ಕಂಡು ಬರುವ ಅನೇಕ ತೊಂದರೆಗಳನ್ನು ಹೊಂದಿರುವ ಮಕ್ಕಳ/ವ್ಯಕ್ತಿಗಳ ಸೇವೆಯಲ್ಲಿ ವಿಭಾಗವು ತೊಡಗಿದೆ.
- ಸಂವಹನ ತೊಂದರೆಗಳಿಂದ ಬಳಲುವ ವ್ಯಕ್ತಿಗಳು ಮತ್ತು ಅವರ ಕುಟುಂಬದ ಸದಸ್ಯರಿಗೆ ನಿಯಮಿತವಾಗಿ ವೈಯಕ್ತಿಕ ಹಾಗೂ ಗುಂಪಿನ ಸಮಾಲೋಚನಾ ಸೇವೆಗಳು ಮತ್ತು ವಯಸ್ಕರ ಜೀವನಕ್ಕಾಗಿ ವೃತ್ತಿ ಮಾರ್ಗದರ್ಶನ ಮತ್ತು ತರಬೇತಿ ಮಾರ್ಗದರ್ಶನ ನೀಡಲಾಗುವುದು
- ಕೇಂದ್ರ/ರಾಜ್ಯ ಸರ್ಕಾರದಿಂದ ಸಿಗುವ ವಿವಿಧ ಪ್ರಯೋಜನಗಳನ್ನು ಅಥವಾ ರಿಯಾಯ್ತಿಗಳನ್ನು ಪಡೆದುಕೊಳ್ಳಲು ಅಥವಾ ವೈದ್ಯಕೀಯ ನ್ಯಾಯಶಾಸ್ತ್ರ ಕಾನೂನು ಪ್ರಕರಣಗಳಲ್ಲಿ ಸಾಕ್ಷಿ ಹೇಳುವುದು ಮತ್ತು ಪ್ರಮಾಣ ಪತ್ರ ನೀಡುವುದು
- ಬೆಳವಣಿಗೆ ಸಂಬಂಧಿತ ತೊಂದರೆಗಳಿಂದ ಬಳಲುವ ಮಕ್ಕಳ ಪೋಷಕರಿಗೆ ಪ್ರಮಾಣಪತ್ರ ನೀಡುವ C4D2 ಶಿಕ್ಷಣ ನೀಡುವುದು/ ಪೋಷಕರಿಗೆ ಸ್ವಯಂ ಸಹಾಯ ಹಾಗೂ ಸರ್ಕಾರೇತರ ಸ್ವಸಹಾಯ ಗುಂಪುಗಳಿಗೆ ವಕಾಲತ್ತು ಮತ್ತು ಸಬಲೀಕರಣ ಕಾರ್ಯಕ್ರಮಗಳನ್ನು ಆಯೋಜಿಸುವುದು. ಮೈಸೂರು ವಿಶ್ವವಿದ್ಯಾನಿಲಯದ ಮನೋವಿಜ್ಞಾನದಲ್ಲಿ ಡಾಕ್ಟರೇಟ್/ ಪೂರ್ವ ಡಾಕ್ಟರೇಟ್ ಕಾರ್ಯಕ್ರಮಕ್ಕೆ ಸೀಮಿತ ಸಂಖ್ಯೆಯ ವಿದ್ಯಾರ್ಥಿಗಳಿಗೆ ವಿಭಾಗದ ಬೋಧಕ ವರ್ಗದಿಂದ ಮಾರ್ಗದರ್ಶನ ಲಭ್ಯವಿದೆ.
- ಸಂಸ್ಥೆಯು ಎಸ್.ಎಸ್.ಎ ಸಹಕಾರದೊಂದಿಗೆ ಕರ್ನಾಟಕದ ಶಾಲಾ ಮಕ್ಕಳಲ್ಲಿನ ಶೈಕ್ಷಣಿಕ ಸಮಸ್ಯೆಗಳ ಕುರಿತು ಶಿಕ್ಷಕರಿಗೆ ಸೂಕ್ಷ್ಮ ಮಟ್ಟದಲ್ಲಿ ತರಬೇತಿ ನೀಡುವ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿದೆ. ಇದರಲ್ಲಿ ವಿಭಾಗವು ಮಹತ್ವದ ಕಾರ್ಯ ನಿರ್ವಹಿಸಿದೆ. ಇದಲ್ಲದೆ, ವಿದ್ಯಾರ್ಥಿಗಳಿಗೆ ಸಲಹೆ ನೀಡುವುದು, ಮತ್ತು ಬೆಳವಣಿಗೆಯಲ್ಲಿ ನ್ಯೂನತೆಗಳನ್ನು ಹೊಂದಿರುವ ಮಕ್ಕಳ ಆರೈಕೆದಾರರಿಗೆ ಪ್ರಮಾಣಪತ್ರ ಶಿಕ್ಷಣ ನೀಡುವುದು.

**ನರಶಾಸ್ತ್ರೀಯ ಸಂಶೋಧನೆ ಮತ್ತು ಪುನರ್ವಸತಿ ಕೇಂದ್ರ**

ಗೌರವಾನ್ವಿತ ಜಸ್ಟೀಸ್, ಡಾ|| ಸಂತೋಷ್ ಹೆಗ್ಡೆ, ಮಾಜಿ ಲೋಕಾಯುಕ್ತ, ಕರ್ನಾಟಕ ರಾಜ್ಯ, ಆಗಸ್ಟ್ ೯, ೨೦೧೩ರಂದು, ನರಶಾಸ್ತ್ರೀಯ ಸಂಶೋಧನೆ ಮತ್ತು ಪುನರ್ವಸತಿ ಕೇಂದ್ರವನ್ನು ಉದ್ಘಾಟಿಸಿದರು. ಕೇಂದ್ರದ ಕಾರ್ಯ ಪರಿಮಿತಿಯಲ್ಲಿ ನರ–ಅರಿವಿನ ಸಂಶೋಧನೆ, ವಾಕ್ ಸ್ತಂಭನ (ಅಫೇಸಿಯಾ) ಮಿದುಳಿನ ರಕ್ತಸಂಚಾರದಲ್ಲಿನ ಅಪಘಾತಗಳು, ಕಲಿಕೆಯ ವೈಫಲ್ಯ, ಮಿದುಳಿನ ಆಘಾತ, ಪಾರ್ಕಿನ್ಸನ್, ಸ್ಮೃತಿಯಲ್ಲಿನ ತೊಂದರೆ ಮತ್ತು ಇನ್ನಿತರ ಪ್ರಗತಿಪರ ಹಾಗೂ ಪ್ರಗತಿಪರವಲ್ಲದಂತಹ ನರವೈಜ್ಞಾನಿಕ ನ್ಯೂನತೆಗಳ ಕುರಿತು ಸಂಶೋಧನೆ ಮತ್ತು ಚಿಕಿತ್ಸೆ ನೀಡಲಾಗುತ್ತದೆ.

**ಕೇಂದ್ರದ ಸೇವೆಗಳು ಈ ಕೆಳಕಂಡಂತಿವೆ**

- ಪ್ರಮಾಣಿತ ವ್ಯಕ್ತಿಗತ ಪರೀಕ್ಷೆಯ ಮೂಲಕ ಮಿದುಳಿನ ನಿರ್ದಿಷ್ಟ ಕ್ರಿಯೆಯ ಪರೀಕ್ಷೆ
- ಪ್ರಮಾಣೀಕೃತ, ವಿವರವಾದಂತಹ ಪರೀಕ್ಷೆಗಳ ಮೂಲಕ ಮಿದುಳಿನ ಭಾಗಗಳ ಪರೀಕ್ಷೆ
- ಕಾಗದ/ ಪೆನ್ಸಿಲ್ ಮೂಲಕ ಅಥವಾ ಕಂಪ್ಯೂಟರ್ ಸಹಾಯಕ ಕಾರ್ಯಕ್ರಮಗಳೊಂದಿಗೆ ಚಿಕಿತ್ಸೆ ನೀಡುವುದು

**ಸಂಪರ್ಕಿಸಿ**
**ಡಾ.ಎಸ್. ವೆಂಕಟೇಸನ್**
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು ನೈದಾನಿಕ ಮನೋಶಾಸ್ತ್ರ ವಿಭಾಗ
ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
ಕರ್ನಾಟಕ, ಭಾರತ
ದೂರವಾಣಿ – 2502142
ಈ–ಮೇಲ್ – clinicalpsychologyaiish@gmail.com
ಕೆಲಸದ ಅವಧಿ – 9.00 ರಿಂದ 5.30 ರವರೆಗೆ
ಕೆಲಸದ ದಿನಗಳು – ಸೋಮವಾರದಿಂದ ಶುಕ್ರವಾರದವರೆಗೆ

# ಚಿಕಿತ್ಸಾ ಸೇವಾ ವಿಭಾಗ

## ಉದ್ದೇಶಗಳು

ವಿದ್ಯಾರ್ಥಿಗಳಿಗೆ ಸಂವಹನ ತೊಂದರೆಗಳ ಬಗ್ಗೆ ಪ್ರಾಯೋಗಿಕ ತರಬೇತಿಯನ್ನು ನೀಡುವುದು ಮತ್ತು ಸಂವಹನ ತೊಂದರೆ ಹೊಂದಿರುವ ವ್ಯಕ್ತಿಗಳಿಗೆ ನೈದಾನಿಕ ಸೇವೆಗಳನ್ನು ಒದಗಿಸುವುದು. ಈ ಗುರಿ ಸಾಧಿಸಲು, ಕೆಳಗಿನ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತದೆ.

- ವಿವಿಧ ಸಂವಹನ ತೊಂದರೆ ಹೊಂದಿರುವ ವ್ಯಕ್ತಿಗಳ ಪರೀಕ್ಷೆ ಮತ್ತು ನಿರ್ವಹಣೆ ಕುರಿತು ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ತರಬೇತಿ.
- ಸಂವಹನ ತೊಂದರೆ ಹೊಂದಿರುವ ವ್ಯಕ್ತಿಗಳಿಗೆ/ ಪಾಲಕರಿಗೆ ಪರೀಕ್ಷೆ, ಚಿಕಿತ್ಸಕ ಸೇವೆಗಳನ್ನು ಒದಗಿಸುವುದು, ಮಾರ್ಗದರ್ಶನ ಮತ್ತು ಸಮಾಲೋಚನೆ
- ರಾಜ್ಯ ಮತ್ತು ಕೇಂದ್ರ ಸರ್ಕಾರವು ಒದಗಿಸುವ ಹಕ್ಕುಗಳು, ಸವಲತ್ತುಗಳು ಮತ್ತು ರಿಯಾಯಿತಿಗಳ ಬಗ್ಗೆ ಗ್ರಾಹಕರಿಗೆ ಶಿಕ್ಷಣ ನೀಡುವುದು
- ಸಂಬಂಧಿತ ಆರೋಗ್ಯ ರಕ್ಷಣಾ ವೃತ್ತಿಪರರಿಗೆ ಅಲ್ಪಾವಧಿಯ ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದು.
- ವೃತ್ತಿಪರರಿಗೆ ಹಾಗೂ ಸಂಬಂಧಿಸಿದ ಇತರ ವೃತ್ತಿಪರರಿಗೆ ವಿಚಾರಗೋಷ್ಠಿಗಳು, ಕಾರ್ಯಾಗಾರಗಳು, ಸಮಾವೇಶಗಳು ಮತ್ತು ಅತಿಥಿ–ಉಪನ್ಯಾಸಗಳನ್ನು ನಡೆಸುವುದು.
- ಪ್ರಾಯೋಗಿಕ/ ನೈದಾನಿಕ ಸಂಶೋಧನೆ ನಡೆಸುವುದು ಮತ್ತು ಪುರಾವೆ ಆಧಾರಿತ ಅಭ್ಯಾಸವನ್ನು ಉತ್ತೇಜಿಸುವುದು.

- ಶಿಕ್ಷಕರು, ಪೋಷಕರು / ಆರೈಕೆ ಮಾಡುವವರು ಮತ್ತು ಸಂವಹನ ತೊಂದರೆ ಇರುವ ವ್ಯಕ್ತಿಗಳಿಗೆ ಸಂವೇದನಾಶೀಲ ಕಾರ್ಯಕ್ರಮಗಳನ್ನು ನಡೆಸುವುದು.
- ನೈತಿಕವಾದ ಅಭ್ಯಾಸಗಳ ಮಾನದಂಡವನ್ನು ಪ್ರಾಯೋಗಿಕ ಸೇವೆಗಳಿಗೆ ನಿಗದಿಪಡಿಸುವುದು.
- ಸಂವಹನ ತೊಂದರೆಗಳುಳ್ಳ ವ್ಯಕ್ತಿಗಳಿಗೆ ಸಂಬಂಧಿಸಿದ ಹಲವಾರು ವೈದ್ಯಕೀಯ ಕಾನೂನು ಸಮಸ್ಯೆಗಳಿಗೆ ನ್ಯಾಯಾಲಯದಲ್ಲಿ ಸಾಕ್ಷಿಯಾಗಿ ಸೇವೆ ಸಲ್ಲಿಸುವುದು
- ಮಾತು, ಭಾಷೆ, ಶ್ರವಣ ಸಂಬಂಧಿತ ತೊಂದರೆಗಳ ಕ್ಷೇತ್ರದಲ್ಲಿ ಪ್ರಾಯೋಗಿಕ ಸೇವೆಗಳಿಗಾಗಿ ರಾಷ್ಟ್ರೀಯ ಮಟ್ಟದಲ್ಲಿ ಒಂದು ಮಾದರಿ ಕೇಂದ್ರವಾಗಿ ಸೇವೆ ಸಲ್ಲಿಸುವುದು

**ತರಬೇತಿ**

ಚಿಕಿತ್ಸಾ ತರಬೇತಿ: ವಿಭಾಗದಲ್ಲಿ ಮಾತು, ಭಾಷೆ ಹಾಗೂ ಶ್ರವಣ ತೊಂದರೆ ಹೊಂದಿರುವವರಿಗೆ ಪ್ರಾಯೋಗಿಕ ಸೇವೆಗಳನ್ನು ನೀಡಲಾಗುತ್ತದೆ. ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿ ಹಾಗೂ ಡಾಕ್ಟರೇಟ್ ವಿದ್ಯಾರ್ಥಿಗಳಿಗೆ ನಿಗದಿತ ನಿರ್ದಿಷ್ಟ ಪರೀಕ್ಷೆಗಳು ಮತ್ತು ಅತ್ಯಾಧುನಿಕ ಸಲಕರಣೆಗಳ ಮೂಲಕ ತರಬೇತಿ ನೀಡಲಾಗುತ್ತದೆ. ಇದಲ್ಲದೆ, ವಿದ್ಯಾರ್ಥಿಗಳಿಗೆ ಬೋಧನಾ ಸಾಮಗ್ರಿಗಳ ತಯಾರಿಕೆ, ಸಾರ್ವಜನಿಕ ಶಿಕ್ಷಣ, ಪ್ರಾಯೋಗಿಕ ವರದಿ ಸಿದ್ಧಪಡಿಸುವಿಕೆ, ನಿವಾರಣಾ ಯೋಜನೆಗಳನ್ನು ತಯಾರು ಮಾಡಲು ಹಾಗೂ ಮನೆಯಲ್ಲಿಯೇ ತರಬೇತಿ ನೀಡಲು ಬೇಕಾದ ಕೌಶಲ್ಯಗಳನ್ನು ಕಲಿಸಲಾಗುತ್ತದೆ.

ಪ್ರಾಯೋಗಿಕ ಚಿಕಿತ್ಸಾ ತರಗತಿಗಳು: ಈ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಹಾಗೂ ಪ್ರಾಯೋಗಿಕ ಅಭ್ಯಾಸದಲ್ಲಿನ ನಡುವಿನ ಅಂತರವನ್ನು ಕಡಿಮೆಗೊಳಿಸಲು ವಾರಕ್ಕೊಮ್ಮೆ ಶಿಕ್ಷಣ ನೀಡಲಾಗುತ್ತದೆ. ಈ ತರಬೇತಿಯ ಮೂಲಕ ಹೆಚ್ಚಿನ ಗುಣಮಟ್ಟದ ಪ್ರಾಯೋಗಿಕ ತರಬೇತಿಯನ್ನು ನಿಗದಿತ ವೇಳಾಪಟ್ಟಿಯಲ್ಲಿ ಪೂರ್ಣಗೊಳಿಸಬಹುದಾಗಿದೆ.

ಪ್ರಾಥಮಿಕ ಆರೋಗ್ಯ ಸಿಬ್ಬಂದಿಗೆ ಅಲ್ಪಾವಧಿ ತರಬೇತಿ: ಸಂವಹನ ತೊಂದರೆಗಳಿಂದ ಬಳಲುವ ವ್ಯಕ್ತಿಗಳ ಪುನರ್ವಸತಿಯು ಬಹುಸಿಬ್ಬಂದಿಗಳಿಂದ ಕೂಡಿರುವ ತಂಡದ ಕೆಲಸವಾಗಿದೆ. ಇದಕ್ಕಾಗಿ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಇದನ್ನು ವೃತ್ತಿಪರರು ಹಾಗೂ ಸಂಬಂಧಿತ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸುವ ವೃತ್ತಿಪರರಿಗಾಗಿ ನಡೆಸಲಾಗುತ್ತದೆ. ಸಂವೇದನಾಶೀಲ ಕಾರ್ಯಕ್ರಮ, ಮಾರ್ಗದರ್ಶನ ಮತ್ತು ಪ್ರದರ್ಶನ ಮುಂತಾದ ಮಾರ್ಗಗಳ ಮೂಲಕ ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ವಿದ್ಯಾರ್ಥಿಗಳು, ಕಿವಿ, ಮೂಗು ಮತ್ತು ಗಂಟಲು ಸ್ನಾತಕೋತ್ತರ ವಿದ್ಯಾರ್ಥಿಗಳು, ವೈದ್ಯಕೀಯ ಅಧಿಕಾರಿಗಳು, ವಿಶೇಷ ಶಿಕ್ಷಣ ಶಿಕ್ಷಕರು, ಸಾಮಾನ್ಯ ಹಾಗೂ ವಿಶೇಷ ಶಾಲೆಗಳ ಶಿಕ್ಷಕರು ಹಾಗೂ ಪೋಷಕರು ಹಾಗೂ ಆರೈಕೆದಾರರು, ದಾದಿ ಹಾಗೂ ಆರೋಗ್ಯ ಇಲಾಖೆಯ ಮೂಲಭೂತ ಸಿಬ್ಬಂದಿಗಳಿಗೆ ನೀಡಲಾಗುತ್ತದೆ.

**ಚಿಕಿತ್ಸಾ ಸೇವೆಗಳು**

**ರೋಗನಿರ್ಣಯ ಸೇವೆಗಳು**

- ಮಾತು ಭಾಷಾ ತಜ್ಞರು ಹಾಗೂ ಶ್ರವಣತಜ್ಞರು ನಿಗದಿತ ನಿರ್ದಿಷ್ಟ ಸಮಗ್ರ ತಪಾಸಣೆ ಮೂಲಕ ಎಲ್ಲಾ ವಯಸ್ಸಿನ ಹಾಗೂ ವಿವಿಧ ಭಾಷೆಗಳ ಹಿನ್ನಲೆಯಿಂದ ಬಂದವರಿಗೆ ಪರೀಕ್ಷೆಗಳನ್ನು ನಡೆಸುತ್ತಾರೆ
- ಕಿವಿ, ಮೂಗು ಮತ್ತು ಗಂಟಲು ತಜ್ಞರು, ಮನೋಶಾಸ್ತ್ರ ತಜ್ಞರು ಹಾಗೂ ಭೌತಚಿಕಿತ್ಸಕರು ಮನೋವಿಜ್ಞಾನಿ ಮತ್ತು ಔದ್ಯೋಗಿಕ ಚಿಕಿತ್ಸಕರ ಪೂರ್ಣಾವಧಿ ಸೇವೆ ಲಭ್ಯವಿದೆ.
- ಸಲಹಾ ಸೌಲಭ್ಯಗಳು ಶಿಶುತಜ್ಞ, ನರತಜ್ಞ, ಪ್ಲಾಸ್ಟಿಕ್ ಶಸ್ತ್ರ ವೈದ್ಯ, ದಂತವೈದ್ಯರಿಂದಲೂ ಲಭ್ಯವಿದೆ.
- ಸಂವಹನ ನ್ಯೂನತೆಯುಳ್ಳವರಿಗೆ ಮತ್ತು ಅವರ ರಕ್ಷಕರಿಗೆ ಮಾರ್ಗದರ್ಶನ ಮತ್ತು ಸಲಹಾ ಸೇವೆಗಳು ದೊರೆಯುತ್ತದೆ.

**ಚಿಕಿತ್ಸಾ ಸೇವೆಗಳು:**

ಅಲ್ಪ / ದೀರ್ಘ ಅವಧಿಗೆ ವೈಯಕ್ತಿಕ ಮತ್ತು / ಅಥವಾ ಗುಂಪಿನ ಆಧಾರದಲ್ಲಿ ಚಿಕಿತ್ಸಾ ಸೇವೆಗಳನ್ನು ಒದಗಿಸಲಾಗುತ್ತದೆ. ಅವುಗಳ ವಿವರ ಇಂತಿದೆ.

- ಶ್ರವಣ ದೋಷ ಹೊಂದಿದವರಿಗೆ, ನಿರ್ದಿಷ್ಟ ಭಾಷಾ ಸಮಸ್ಯೆಯುಳ್ಳವರಿಗೆ, ಬುದ್ಧಿಮಾಂದ್ಯತೆ, ತಂತನತೆ ಹಾಗೂ ಭಾಷಾ ತೊಂದರೆ ಹೊಂದಿರುವ ವ್ಯಕ್ತಿಗಳಿಗೆ ಭಾಷಾ ತರಬೇತಿ
- ಕಲಿಕಾ ನ್ಯೂನತೆಯುಳ್ಳವರಿಗೆ ಓದುವಿಕೆ ಮತ್ತು ಬರೆಯುವಿಕೆಯಲ್ಲಿ ತರಬೇತಿ ಕಾರ್ಯಕ್ರಮ
- ಸ್ಪಷ್ಟ ಶಬ್ದ ಉಚ್ಚಾರ ಮಾಡಲು ತೊಂದರೆಯುಳ್ಳವರಿಗೆ, ಸೀಳು ತುಟಿ/ ಅಂಗುಳಿನ ತೊಂದರೆ ಹೊಂದಿದವರಿಗೆ ಮಾತಿನ ಚಿಕಿತ್ಸೆ
- ಧ್ವನಿ ತೊಂದರೆಯುಳ್ಳವರಿಗೆ ಧ್ವನಿ ಚಿಕಿತ್ಸೆ
- ಮಾತಿನಲ್ಲಿ ತೊದಲಿಕೆ ಹೊಂದಿರುವವರಿಗೆ ನಿರರ್ಗಳವಾಗಿ ಮಾತನಾಡಲು ತರಬೇತಿ
- ನ್ಯೂರೋಮೋಟರ್ ಸಮಸ್ಯೆಗಳ ವ್ಯಕ್ತಿಗಳಿಗೆ ಫಿಸಿಯೋಥೆರಪಿ.
- ಔದ್ಯೋಗಿಕ ಚಿಕಿತ್ಸಾ ತರಬೇತಿ ಹಾಗೂ ಇಂದ್ರೀಯಾನುಭವ ಮತ್ತು ನರಜನ್ಯ ಚಲನಾ ತೊಂದರೆಗಳಿಗೆ ಚಿಕಿತ್ಸೆ
- ಮಾತನ್ನು ಸಮರ್ಥವಾಗಿ ಬಳಸಲಾಗದ ವ್ಯಕ್ತಿಗಳಿಗೆ ಪರ್ಯಾಯ ಮತ್ತು ಸಂವರ್ಧನ ಚಿಕಿತ್ಸಾ ತರಬೇತಿ
- ಅವಶ್ಯಕತೆ ಉಳ್ಳವರಿಗೆ ಮಾರ್ಗದರ್ಶನ ಚಿಕಿತ್ಸೆ

**ವಿಶೇಷ ಕ್ಲಿನಿಕ್ / ಘಟಕಗಳು:**

ಸಂವಹನ ನ್ಯೂನತೆಗಳು ಮತ್ತು ಅವುಗಳು ಉಂಟುಮಾಡುವ ಸ್ಥಿತಿಗಳನ್ನು ಪ್ರಾಥಮಿಕ ಹಂತದಲ್ಲಿ ಗುರುತಿಸಿ ಪುನಶ್ಚೇತನ ಚಿಕಿತ್ಸೆಗಳನ್ನು ನೀಡುವ ಸಲುವಾಗಿ ಸಂಸ್ಥೆಯು ಹಲವಾರು ಚಿಕಿತ್ಸಾಲಯಗಳು ಮತ್ತು ಪರಿಣಿತ ತಜ್ಞರ ತಂಡಗಳನ್ನು (ವಾಕ್–ಭಾಷಾ ತಜ್ಞರು, ಶ್ರವಣ ತಜ್ಞರು, ಚಿಕಿತ್ಸಾ ಮನೋವಿಜ್ಞಾನಿಗಳು, ವಿಶೇಷ ಶಿಕ್ಷಕರು, ಔದ್ಯೋಗಿಕ ಚಿಕಿತ್ಸಕರು, ಕಿವಿ, ಮೂಗು ಮತ್ತು ಗಂಟಲು ಚಿಕಿತ್ಸಕರು, ಸುರೂಪಿ ಶಸ್ತ್ರಚಿಕಿತ್ಸಕರು, ಮತ್ತಿತರರು) ಹೊಂದಿದ್ದು, ಅದರ ಪಟ್ಟಿ ಹೀಗಿದೆ.

- ಮಾತಿನ ಹೊರತಾದ ಇತರ ಸಂವಹನ ವಿಧಾನ ಕಲಿಸುವ ಘಟಕ
- ಆಟಿಸಂ (ಸ್ವಲೀನತೆ) ಸ್ಪೆಕ್ಟ್ರಮ್ ನ್ಯೂನತೆಗಳ ಘಟಕ

- ಶ್ರವಣ ತರಬೇತಿ ಘಟಕ
- ಶ್ರವಣ ಸಾಧನ ಅಳವಡಿಕೆ ಘಟಕ
- ನಿರ್ರ್ಗಳ ಮಾತಿನ ಘಟಕ
- ವೃತ್ತಿಪರ ಧ್ವನಿ ಸುರಕ್ಷಾ ಕೇಂದ್ರ
- ಮಾತಿನ ಅಂಗರಚನಾ ನ್ಯೂನತೆಗಳ ಚಿಕಿತ್ಸಾ ಘಟಕ:
- ನರಜನ್ಯ ವಾಕ್ ದೋಷಗಳ ಚಿಕಿತ್ಸಾಲಯ
- ಧ್ವನಿ ಚಿಕಿತ್ಸಾಲಯ
- ಭಾಷಾ ದೌರ್ಬಲ್ಯವಿರುವ ವಯಸ್ಕರ ಮತ್ತು ವೃದ್ಧರ ಚಿಕಿತ್ಸಾ ಕೇಂದ್ರ
- ವರ್ಟಿಗೋ (ತಲೆಸುತ್ತು) ಚಿಕಿತ್ಸಾಲಯ
- ಕಲಿಕಾ ನ್ಯೂನತೆಯ ಚಿಕಿತ್ಸಾಲಯ

**ಸಂಚಾರೀ ಮಾತಿನ ಚಿಕಿತ್ಸಕ ಸೇವೆಗಳು**

ದಿನನಿತ್ಯದ ವಾತಾವರಣದಲ್ಲಿ ನೀಡುವಂತಹ ಸೇವೆಗಳನ್ನು ಇದು ಸೂಚಿಸುತ್ತದೆ. ಮುಖ್ಯವಾಗಿ ಶಾಲೆಯಲ್ಲಿ ಕಲಿಯುತ್ತಿರುವ ಮಗುವು ಅನುಭವಿಸುವ ತೊಂದರೆಗಳ ಕುರಿತು (ಪೋಷಕವರದಿ/ ಚಿಕಿತ್ಸಕ ವರದಿ/ ಸೂಪರ್ ವೈಸರ್ ವರದಿ ಆಧಾರದ ಮೇಲೆ) ಯಾದಿ ತಯಾರಿಸಿ, ಮುಂದಿನ ಶಾಲಾ ಭೇಟಿಯ ಸಮಯದಲ್ಲಿ ಅದನ್ನು ಶಾಲೆಯಲ್ಲಿ ಚರ್ಚಿಸಿ, ಮಾರ್ಗದರ್ಶನ ನೀಡಲಾಗುತ್ತದೆ.

- ಪಾಲಕರಿಗೆ/ ಪೋಷಕರಿಗೆ ಯಾವ ರೀತಿಯ ಶಾಲೆಯಲ್ಲಿ ಪ್ರವೇಶಾತಿ ಪಡೆಯಬೇಕೆಂಬುದರ ಬಗ್ಗೆ ಸಲಹೆ-ಸೂಚನೆಗಳನ್ನು ನೀಡಲಾಗುತ್ತದೆ,
- ಮಾತು-ಭಾಷಾ ಚಿಕಿತ್ಸೆಯನ್ನು ಮಧ್ಯದಲ್ಲೇ ನಿಲ್ಲಿಸಿದವರಿಗೆ ದೂರವಾಣಿ ಕರೆಯ ಮೂಲಕ ಮತ್ತೆ ಚಿಕಿತ್ಸೆಯನ್ನು ಮುಂದುವರೆಸುವ ಪ್ರಾಮುಖ್ಯತೆ ಮತ್ತು ಅನುಸರಿಸಬೇಕಾದ ಕ್ರಮಗಳ ಬಗ್ಗೆ ತಿಳಿಸಲಾಗುತ್ತದೆ.
- ವಿಭಾಗಕ್ಕೆ ಭೇಟಿ ನೀಡುವವರಿಗೆ ವಿಭಾಗದ ಉದ್ಧೇಶ ಮತ್ತು ಸೇವೆಗಳ ಬಗ್ಗೆ ತಿಳಿಸಲಾಗುತ್ತದೆ.
- ಸಂಸ್ಥೆಯಲ್ಲಿ ದೊರೆಯುವ ಸೇವೆಗಳ ಬಗ್ಗೆ ಪತ್ರ ಮುಖೇನ, ಈ-ಮೇಲ್ ಮುಖೇನ ಉತ್ತರಿಸಲಾಗುತ್ತದೆ

**ಇತರೆ ಸೌಲಭ್ಯಗಳು**

- ಪರೀಕ್ಷೆಗಳ ವರದಿ ವಿತರಣೆ
- ಶಾಲಾ ಪ್ರವೇಶಾತಿ ಮತ್ತು ಹಾಜರಾತಿ ಪ್ರಮಾಣ ಪತ್ರಗಳ ವಿತರಣೆ

# ಎಲೆಕ್ಟ್ರಾನಿಕ್ಸ್

ಎಲೆಕ್ಟ್ರಾನಿಕ್ಸ್ ವಿಭಾಗವು ಸಂಸ್ಥೆಯ ತಾಂತ್ರಿಕ ಬೆನ್ನೆಲುಬಾಗಿ ಕಾರ್ಯ ನಿರ್ವಹಿಸುತ್ತದೆ. ವಿಭಾಗದಲ್ಲಿನ ಇಂಜಿನೀಯರುಗಳು ಮಾತು–ಭಾಷಾ ಕ್ಷೇತ್ರ ಹಾಗೂ ಸಂವಹನ ಕ್ಷೇತ್ರದಲ್ಲಿ ಬಳಸುವ ಉಪಕರಣಗಳು/ ಸಾಧನಗಳು ಹಾಗೂ ಬಯೋಮೆಡಿಕಲ್ ಉಪಕರಣಗಳ ತಂತ್ರಜ್ಞಾನದಲ್ಲಿ ಪರಿಣಿತರಾಗಿರುತ್ತಾರೆ. ವಾತಾವರಣದಲ್ಲಿನ ಶಬ್ದದ ಮಾಹಿತಿ ಸಂಗ್ರಹಿಸಿ ಅದರ ಬಗ್ಗೆ ಪ್ರಮಾಣ ಪತ್ರ ನೀಡುವ ಕೆಲಸ ನಿರ್ವಹಿಸುತ್ತಾರೆ. ಶ್ರವಣೋಪಕರಣ ಹಾಗೂ ಸಹಾಯಕ ಶ್ರವಣ ಸಾಧನಗಳ ಬಳಕೆದಾರರು, ವಿಶೇಷ ಶಾಲೆಗಳು, ಕಾರ್ಖಾನೆಗಳು, ಇತರೆ ಶ್ರವಣ ಮತ್ತು ವಾಕ್ ಸಂಸ್ಥೆಗಳು ಮತ್ತು ಸಾರ್ವಜನಿಕರು ಈ ವಿಭಾಗದ ಫಲಾನುಭವಿಗಳು.

**ಉದ್ದೇಶಗಳು**

ವಿಭಾಗದ ಮುಖ್ಯ ಉದ್ದೇಶವು ತಂತ್ರಜ್ಞಾನದ ಬಳಕೆಯ ಮೂಲಕ ಸಮರ್ಥ ಮತ್ತು ಗುಣಮಟ್ಟದ ಸೇವೆಗಳನ್ನು ನೀಡುವುದು. ತಂತ್ರಜ್ಞಾನ ಯೋಜನೆ, ತಂತ್ರಜ್ಞಾನ ಅಳವಡಿಕೆ ಹಾಗೂ ಉನ್ನತ ಹಂತದ ಬಳಕೆ ಮುಂತಾದ ಕಾರ್ಯಗಳ ಮೂಲಕ ವಿಭಾಗವು ಇದನ್ನು ಕಾರ್ಯಸಾಧ್ಯವಾಗಿಸುತ್ತಲಿದೆ.

**ಚಟುವಟಿಕೆಗಳು**

**ಬೋಧನೆ ಮತ್ತು ತರಬೇತಿ**

- ವೆಲ್ಲೂರು ತಾಂತ್ರಿಕ ವಿಶ್ವವಿದ್ಯಾಲಯ, ವೆಲ್ಲೂರು, ಮಣಿಪಾಲ್ ವಿಶ್ವವಿದ್ಯಾಲಯ, ಮಣಿಪಾಲ್, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾಂ ವಿದ್ಯಾರ್ಥಿಗಳ ಬಿ.ಟೆಕ್ ಸಂಶೋಧನಾ ಕಾರ್ಯಗಳಿಗೆ ವಿಭಾಗವನ್ನು ಗುರುತಿಸಲಾಗಿದೆ.
- ಡಿಪ್ಲೊಮಾ ಅಪ್ರೆಂಟಿಸ್ ತರಬೇತಿಗೆ, ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಿಲ್ ಮತ್ತು ಕಮ್ಯೂನಿಕೇಷನ್ ಪದವೀಧರರ ತರಬೇತಿಗೆ ವಿಭಾಗವನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಗುರುತಿಸಿದೆ
- ಹಿಯರಿಂಗ್ ಮತ್ತು ಇಯರ್ ಮೌಲ್ಡ್ ಟೆಕ್ನಾಲಜಿಯಲ್ಲಿ ಡಿಪ್ಲೋಮ ತರಬೇತಿ

**ಸಂಸ್ಥೆಯೊಳಗಿನ ಚಟುವಟಿಕೆಗಳು**

- ದೂರಶಿಕ್ಷಣಕ್ಕಾಗಿ ವಿಡಿಯೋ ಕಾನ್ಫರೆನ್ಸ್ ವ್ಯವಸ್ಥೆ, ಅನುಷ್ಠಾನ ಮತ್ತು ನಿರ್ವಹಣೆ
- ಶ್ರವಣವಿಜ್ಞಾನ ವಿಭಾಗದಲ್ಲಿರುವ ಉಪಕರಣಗಳ ಮಾಪನಾತ್ಮಕ ನಿರ್ಣಯ
- ವಾಕ್ ಮತ್ತು ಶ್ರವಣ ತಂತ್ರಜ್ಞಾನದಲ್ಲಿ ಬಳಸುವ ಎಲ್ಲಾ ಉಪಕರಣಗಳ ದುರಸ್ತಿ, ನಿರ್ವಹಣೆ ಮತ್ತು ಸೇವೆ
- ಕಂಪ್ಯೂಟರ್ ಜಾಲಗಳು, ವಿದ್ಯುತ್ ವ್ಯವಸ್ಥೆ, ವಿದ್ಯುತ್ ವಿತರಣಾ ವ್ಯವಸ್ಥೆ ಮತ್ತು ಡೇಟಾ ಮತ್ತು ಧ್ವನಿ ಸಂವಹನಾ ವ್ಯವಸ್ಥೆಗಳ ನಿರ್ವಹಣೆ
- ಎಲ್ಲಾ ಮಾದರಿಯ ಶ್ರವಣೋಪಕರಣಗಳ ದುರಸ್ತಿ, ಸೇವೆ
- ಶಬ್ದದ ವಾತಾವರಣದಲ್ಲಿನ ಮಾಪನ
- ವಾಕ್ ಮತ್ತು ಶ್ರವಣ ಕ್ಷೇತ್ರದಲ್ಲಿನ ಉಪಕರಣಗಳನ್ನು ಸ್ಥಳೀಯವಾಗಿ ಅಭಿವೃದ್ಧಿಪಡಿಸಲು ತಂತ್ರಜ್ಞಾನ ಬಳಕೆ
- ಮಾನವ ಸಂಪನ್ಮೂಲ ಅಭಿವೃದ್ಧಿ
- ADIP ಯೋಜನೆಯಲ್ಲಿ ಶ್ರವಣೋಪಕರಣಗಳ ವಿತರಣೆ
- ಎಲ್ಲಾ ರೀತಿಯ ಶ್ರವಣೋಪಕರಣಗಳ ಪರೀಕ್ಷೆ ಮತ್ತು ಕಡಿಮೆ ದರದಲ್ಲಿ ವಿತರಣೆ

**ಬಾಹ್ಯ ಸಲಹಾ ಸೇವೆಗಳು**

- ಸಂವಹನ ತೊಂದರೆಗಳಿಂದ ಬಳಲುವ ವ್ಯಕ್ತಿಗಳ ಅವಶ್ಯಕತೆಗಳಿಗೆ ಅನುಕೂಲವಾಗುವಂತಹ ಸಾಧನ ಮತ್ತು ಉಪಕರಣಗಳ ಬೆಳವಣಿಗೆ ಕೇಂದ್ರ
- ಕೈಗಾರಿಕಾ ಘಟಕಗಳು, ಯಂತ್ರಗಳು, ಕಛೇರಿ ಉಪಕರಣಗಳು, ಟ್ರಾಫಿಕ್ ಶಬ್ದ, ಪರಿಸರ ಶಬ್ದ ಮುಂತಾದ ಶಬ್ದಗಳ ಮಾಪನ ಮತ್ತು ಪ್ರಮಾಣಪತ್ರಗಳ ವಿತರಣೆ
- ಶ್ರವಣ ವಿಭಾಗದಲ್ಲಿನ ಶ್ರವಣಶಕ್ತಿ ನಿರ್ಣಯಿಸುವ ಉಪಕರಣಗಳ ಮಾಪನಾಂಕ ನಿರ್ಣಯ ಮತ್ತು ದುರಸ್ತಿ
- ಶ್ರವಣ ಪರೀಕ್ಷೆಗಾಗಿ ಧ್ವನಿ ಪುರಾವೆ ಹೊಂದಿದ ಕೊಠಡಿಗಳ ನಿರ್ಮಾಣಕ್ಕಾಗಿ ಮಾರ್ಗದರ್ಶನ
- ಶ್ರವಣ ಪರೀಕ್ಷೆಗೆ ಬಳಸುವ ಇತರ ಉಪಕರಣಗಳು ಶ್ರವಣೋಪಕರಣಗಳ ಗುಣಮಟ್ಟ ನಿರ್ಧರಿಸುವುದಕ್ಕಾಗಿ ಮಾಪನಾಂಕ ಮತ್ತು ಪರೀಕ್ಷೆ
- ಶ್ರವಣಶಕ್ತಿ ಪರೀಕ್ಷೆಗಾಗಿ ಕೊಠಡಿಗಳ ಶಬ್ದಮಟ್ಟ ಪರೀಕ್ಷೆ ಮತ್ತು ಪ್ರಮಾಣಪತ್ರ ವಿತರಣೆ
- ಕಟ್ಟಡಗಳಲ್ಲಿನ ಶಬ್ದಮಟ್ಟ ಮಾಪನ

**ಸಂಪರ್ಕಿಸಿ**
**ಶ್ರೀ.ಎನ್ ಮನೋಹರ್**
ಪ್ರವಾಚಕರು ಮತ್ತು ವಿಭಾಗದ ಮುಖ್ಯಸ್ಥರು
ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು, ಕರ್ನಾಟಕ ರಾಜ್ಯ, ಭಾರತ
ದೂರವಾಣಿ– 91-0821-2502200
ಫ್ಯಾಕ್ಸ್– 91-0821-2510515
ಇ–ಮೇಲ್ ? manohar@aiishmysore.in
ಕಾರ್ಯನಿರ್ವಹಿಸುವ ಅವಧಿ: ೦೯.೦೦ ರಿಂದ ಸಂಜೆ ೦೫.೩೦ ರವರೆಗೆ
ಕಾರ್ಯ ನಿರ್ವಹಿಸುವ ದಿನಗಳು: ಸೋಮವಾರದಿಂದ ಶುಕ್ರವಾರದವರೆಗೆ (ಕೇಂದ್ರ ಸರ್ಕಾರದ ರಜಾ ದಿನಗಳನ್ನು ಹೊರತುಪಡಿಸಿ)

# ಸಾಮಗ್ರಿ ವಿಕಸನ ವಿಭಾಗ

ಸಾಮಗ್ರಿ ವಿಕಸನ ವಿಭಾಗವು ೨೦೦೩ ಮಾರ್ಚ್‌ನಲ್ಲಿ, ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆಯ ಒಂದು ಪ್ರಮುಖ ವಿಭಾಗವಾಗಿ ಪ್ರಾರಂಭವಾಯಿತು. ಸಂವಹನ ನ್ಯೂನತೆಗಳನ್ನು ಗುರುತಿಸುವುದು, ತಡೆಗಟ್ಟುವುದು ಮತ್ತು ಅದರ ನಿಭಾಯಿಸುವಿಕೆಗೆ ಸಂಬಂಧಿಸಿದಂತೆ ವೃತ್ತಿಪರರಿಗೆ ಮತ್ತು ಸಾರ್ವಜನಿಕರಿಗೆ ಶಿಕ್ಷಣ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಪ್ರಾರಂಭಗೊಂಡ ಈ ವಿಭಾಗವು, ಸಂವಹನ ನ್ಯೂನತೆಯುಳ್ಳ ವ್ಯಕ್ತಿಗಳ ಹಕ್ಕುಗಳು ಮತ್ತು ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದಂತೆಯೂ ಸಹ ಸಾರ್ವಜನಿಕರಿಗೆ ಅರಿವು ಮೂಡಿಸುವ ಸಲುವಾಗಿ (ಶಿಕ್ಷಣ) ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುತ್ತದೆ. ವಿವಿಧ ಭಾಷಾ ಹಿನ್ನಲೆಯುಳ್ಳವರಿಗೂ ಮಾಹಿತಿ ಒದಗಿಸುವ ಉದ್ದೇಶದಿಂದ, ವಿಭಾಗವು ಆಂಗ್ಲ ಮತ್ತು ವಿವಿಧ ಭಾರತೀಯ ಭಾಷೆಗಳಲ್ಲಿ ಶಿಕ್ಷಣ ಸಾಮಗ್ರಿಗಳನ್ನು ಅಭಿವೃದ್ಧಿಗೊಳಿಸುವುದರಲ್ಲಿ ಕಾರ್ಯನಿರತವಾಗಿದೆ. ವಿಭಾಗವು ಇತರೆ ವಿಭಾಗಗಳಿಂದ ಮಾಹಿತಿ ಸಂಗ್ರಹಿಸುವ ಮೂಲಕ ಮತ್ತು ಕಾರ್ಯಾಗಾರಗಳು ಅಥವಾ ಇತರ ಮೂಲಗಳ ಮೂಲಕ ಸಾರ್ವಜನಿಕ ಶಿಕ್ಷಣ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುತ್ತದೆ. ಬೀದಿನಾಟಕ, ಕರಪತ್ರಗಳು, ಪುಸ್ತಕಗಳು, ಭಿತ್ತಿಚಿತ್ರಗಳು, ವಿಕಸನ ತರಬೇತಿ, ವೀಡಿಯೋ, ಬಾನುಲಿ (ರೇಡಿಯೋ) ಮತ್ತು ನಾಟಕಗಳು – ಹೀಗೆ ವಿವಿಧ ಮಾಧ್ಯಮಗಳ ಮೂಲಕ ಜನರಲ್ಲಿ ಸಂವಹನ ನ್ಯೂನತೆ ಕುರಿತು ಅರಿವು ಮೂಡಿಸಲು ಸಾಮಗ್ರಿಗಳನ್ನು ತಯಾರಿಸುತ್ತಾ, ಸಂಸ್ಥೆಯ ಸಾರ್ವಜನಿಕ ಶಿಕ್ಷಣ ಉದ್ದೇಶಕ್ಕೆ ಬದ್ದವಾಗಿದೆ. ಈ ಚಟುವಟಿಕೆಗಳಲ್ಲದೆ,

ಸಂವಹನ ನ್ಯೂನತೆಯುಳ್ಳ ವ್ಯಕ್ತಿಗಳು ಹಾಗೂ ಇತರರಿಗಾಗಿ ಚಿಕಿತ್ಸೆ/ ತರಬೇತಿ ಮತ್ತು ಪರೀಕ್ಷಾ ಸಾಮಗ್ರಿಗಳ ನಕಲು ಮತ್ತು ವಿಡಿಯೋ ರೂಪದಲ್ಲಿ ಮುದ್ರಿಸುವ ಕಾರ್ಯದಲ್ಲಿ ವಿಭಾಗವು ಕಾರ್ಯನಿರತವಾಗಿದೆ.

**ವಿಭಾಗದ ಚಟುವಟಿಕೆಗಳು**

- ಶೈಕ್ಷಣಿಕ ಸಾಮಗ್ರಿಗಳ ಮುದ್ರಣ
- ಸಂಸ್ಥೆಯ ಕಾರ್ಯಚಟುವಟಿಕೆಗಳು ಮತ್ತು ಚಿಕಿತ್ಸಾ ತರಬೇತಿಯ ಛಾಯಾಗ್ರಹಣ/ ವೀಡಿಯೋ ಚಿತ್ರೀಕರಣ
- ಸಂವಹನ ನ್ಯೂನತೆ ಕುರಿತು ಅರಿವು ಮೂಡಿಸಲು ಸಾರ್ವಜನಿಕ ಶಿಕ್ಷಣ ಸಾಮಗ್ರಿಗಳ ವಿನ್ಯಾಸ
- ಸಂಸ್ಥೆಯು ಆಯೋಜಿಸುವ ವಿವಿಧ ಸಮಾವೇಶ, ವಿಚಾರ ಸಂಕಿರಣ ಮತ್ತು ಇತರೆ ಕಾರ್ಯಾಗಾರಗಳಿಗಾಗಿ ಪ್ರಕಟಣಾ ಸಾಮಗ್ರಿಗಳು (ಕೈಪಿಡಿಗಳು, ಭಿತ್ತಿಪತ್ರಗಳು, ಕಿರುಹೊತ್ತಿಗೆ/ ಪುಸ್ತಕಗಳು, ಆಮಂತ್ರಣ ಪತ್ರಿಕೆಗಳು, ಪ್ರಮಾಣಪತ್ರಗಳು, ವಾರ್ಷಿಕ ವರದಿಗಳು, ಸಿಡಿ ಸ್ಟಿಕ್ಕರ್‌ಗಳು, ಕರಪತ್ರಗಳು) ಮತ್ತು ಇತರೆ ಶೈಕ್ಷಣಿಕ ಸಾಮಗ್ರಿಗಳ ವಿನ್ಯಾಸ
- ಪರಿಣಾಮಕಾರಿ ಮತ್ತು ಸೃಜನಶೀಲ ಬರಹಗಳ ಮೂಲಕ ಪರಿಣಿತರು ಮತ್ತು ಉದ್ದೇಶಿತ ಸಮೂಹ ಮತ್ತು ಸಾರ್ವಜನಿಕರ ನಡುವೆ ಸಂಪರ್ಕ ಕಲ್ಪಿಸುವುದು
- ಸಂವಹನ ನ್ಯೂನತೆಗಳನ್ನು ಪ್ರಾಥಮಿಕ ಹಂತದಲ್ಲೇ ಗುರುತಿಸಿ ತಡೆಗಟ್ಟುವುದು ಮತ್ತು ಅದರ ನಿವಾರಣೆಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ವಿವಿಧ ಭಾಷೆಗಳಲ್ಲಿ ಶಿಕ್ಷಣ ಸಾಮಗ್ರಿಗಳ ಅಭಿವೃದ್ಧಿ
- ಸಂವಹನ ನ್ಯೂನತೆಯುಳ್ಳ ವ್ಯಕ್ತಿಗಳಿಗಾಗಿ ತರಬೇತಿ ಸಾಮಗ್ರಿಗಳನ್ನು ಅಭಿವೃದ್ಧಿಗೊಳಿಸುವುದು
- ಪ್ರಸ್ತುತ ಇರುವ ಸಾರ್ವಜನಿಕ ಶಿಕ್ಷಣ ಮತ್ತು ಕಲಿಕಾ ಸಾಮಗ್ರಿಗಳನ್ನು ವಿವಿಧ ಭಾಷೆಗಳಿಗೆ ಅನುವಾದಿಸುವುದು
- ಈ. ವಿಭಾಗದಲ್ಲಿರುವ ಸೌಲಭ್ಯಗಳು ಮತ್ತು ಸಂಪನ್ಮೂಲಗಳು
- ಕೈಪಿಡಿಗಳು, ಕರಪತ್ರಗಳು, ಭಿತ್ತಿಪತ್ರಗಳು ಇತ್ಯಾದಿಗಳನ್ನು ವಿನ್ಯಾಸಗೊಳಿಸಲು ತಂತ್ರಾಂಶಗಳು (ಖಚಿಣತಿಚಿಡಿಜ)
- ಚಿಕಿತ್ಸೆ/ ತರಬೇತಿ/ ಪರೀಕ್ಷಾ ಸಾಮಾಗ್ರಿಗಳ ಮುದ್ರಣ ಮತ್ತು ನಕಲು ಪ್ರತಿ ತಯಾರಿಸಲು ಉಪಕರಣಗಳು
- ಧ್ವನಿಮುದ್ರಣ ಸ್ಟುಡಿಯೋ ಸೌಲಭ್ಯ
- ಛಾಯಾಗ್ರಹಣ ಮತ್ತು ವಿಡಿಯೋ ಚಿತ್ರೀಕರಣದ ಉಪಕರಣಗಳು

**ಮುಂಬರುವ ಯೋಜನೆಗಳು**

- ಸಂಸ್ಥೆಯ ಚಟುವಟಿಕೆಗಳು ಹಾಗೂ ಮೈಲಿಗಲ್ಲುಗಳ (೧೯೬೫ರಿಂದ ಪ್ರಾರಂಭಿಸಿ) ಛಾಯಾಚಿತ್ರಗಳನ್ನು ಡಿಜಿಟಲ್ ರೂಪದಲ್ಲಿ ದಾಖಲಿಸಿಡುವುದು (ಆರ್ಕೈವ್)
- ವಿಭಾಗದ ಚಟುವಟಿಕೆಗಳಿಗಾಗಿ 'ಇ' ಕಾರ್ಯ ಆದೇಶ ಪತ್ರ
- ಸಂವಹನ ನ್ಯೂನತೆಗಳನ್ನು ಕುರಿತು ವಿವಿಧ ಉದ್ದೇಶಿತ ಗುಂಪುಗಳಲ್ಲಿ ಅರಿವು ಮೂಡಿಸಲು ಸಾರ್ವಜನಿಕ ಶಿಕ್ಷಣ ಸಾಮಗ್ರಿಗಳ ವಿಕಸನ

- ಸಾರ್ವಜನಿಕರಲ್ಲಿ ಸಂವಹನ ನ್ಯೂನತೆಗಳ ಬಗ್ಗೆ ಅರಿವು ಮೂಡಿಸಲು ಸಾರ್ವಜನಿಕ ಹಿತಾಸಕ್ತಿಯ ಆಕಾಶವಾಣಿ ಕಾರ್ಯಕ್ರಮಗಳು, ಜಾಹೀರಾತುಗಳ ನಿರ್ಮಾಣ


**ಸಂಪರ್ಕಿಸಿ**

**ಡಾ. ಕೆ. ಯಶೋಧಾ**
ಸಹ ಪ್ರಾಧ್ಯಾಪಕರು, ಮುಖ್ಯಸ್ಥರು, ಸಾಮಗ್ರಿ ವಿಕಸನ ವಿಭಾಗ
ಅಖಿಲ ಭಾರತ ವಾಕ್-ಶ್ರವಣ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು 570 006
ದೂರವಾಣಿ: 91-0821-2502269/2255
ಫ್ಯಾಕ್ಸ್ : 91-0821-2510515
ಗ್ರಾಮ್ಸ್: Speechearing
ಇಮೇಲ್: aiishdmd@gmail.com

**ಡಾ. ಅಮೃತಾ ಕಂಚನ್**
ಸಹಾಯಕ ಪ್ರಾಧ್ಯಾಪಕರು, ಮನೋವಿಜ್ಞಾನ
ಉಸ್ತುವಾರಿ ವಿಭಾಗಾಧ್ಯಕ್ಷರು, ಸಾಮಗ್ರಿ ವಿಕಸನ ವಿಭಾಗ
ಅಖಿಲ ಭಾರತ ವಾಕ್-ಶ್ರವಣ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು 570 006
ದೂರವಾಣಿ; 2502140
ಇಮೇಲ್: amrita.kanchan@rediffmail.com


ಕೆಲಸದ ಅವಧಿ: ಬೆಳಿಗ್ಗೆ ೯.೦೦ರಿಂದ ಸಂಜೆ ೫.೩೦ರವರೆಗೆ
ಕೆಲಸದ ದಿನಗಳು: ಸೋಮವಾರದಿಂದ ಶುಕ್ರವಾರವರದವರೆಗೆ (ಕೇಂದ್ರ ಸರ್ಕಾರದ ರಜಾ ದಿನಗಳನ್ನು ಹೊರತುಪಡಿಸಿ)

## ಕಿವಿ, ಮೂಗು ಮತ್ತು ಗಂಟಲು ವಿಭಾಗ

ಕಿವಿ, ಮೂಗು ಮತ್ತು ಗಂಟಲು ವಿಭಾಗವು ಸಂವಹನ ತೊಂದರೆಗಳಿಂದ ಬಳಲುವ ಜನರ ಅಗತ್ಯಗಳನ್ನು ಪೂರೈಸುವ ವೈದ್ಯಕೀಯ ವಿಶೇಷ ವಿಭಾಗ. ಇದು ಬಿ.ಎಸ್ಸಿ ಎಂ.ಎಸ್ಸಿ ವಿದ್ಯಾರ್ಥಿಗಳ ತರಬೇತಿ, ಸಂಶೋಧನಾ ಯೋಜನೆಗಳನ್ನು ಕೈಗೊಳ್ಳುವುದು ವಿಭಾಗದ ಒಂದು ಪ್ರಮುಖ ಚಟುವಟಿಕೆ. ವಿಶೇಷವಾಗಿ ವಾಕ್-ಶ್ರವಣ ತೊಂದರೆಗಳ ಸಂಬಂಧಿತ ಕಿವಿ-ಮೂಗು-ಗಂಟಲು ವೈದ್ಯಕೀಯ ಶಸ್ತ್ರಚಿಕಿತ್ಸೆಯನ್ನು ಮೈಸೂರು ವೈದ್ಯಕೀಯ ಕಾಲೇಜಿಗೆ ಸಂಬಂಧಿಸಿದ ಕೆ.ಆರ್. ಆಸ್ಪತ್ರೆಯಲ್ಲಿ ನಡೆಸಲಾಗುತ್ತದೆ. ವಿಭಾಗದ ಸಿಬ್ಬಂದಿ ಸರ್ಕಾರೇತರ ಸಂಸ್ಥೆಗಳು ನಡೆಸುವ ಶಿಬಿರಗಳಲ್ಲಿ ಪಾಲ್ಗೊಳ್ಳುತ್ತಾರೆ. ವಾಕ್ ಮತ್ತು ಭಾಷಾ ತೊಂದರೆಗಳಿಗೆ ಸಂಬಂಧಿಸಿದ ಪುನರ್ವಸತಿ ಕಾರ್ಯವನ್ನು ಕೈಗೊಳ್ಳಲಾಗುತ್ತದೆ.

**ಬೋಧನೆ ಮತ್ತು ತರಬೇತಿ**

- ಕಿವಿ, ಮೂಗು, ಗಂಟಲಿಗೆ ಸಂಬಂಧಿಸಿದ ವಾಕ್ ಮತ್ತು ಶ್ರವಣ ತೊಂದರೆಗಳ ಕುರಿತು ಬಿ.ಎ.ಎಸ್.ಎಲ್.ಪಿ ಮತ್ತು ಎಂಎಸ್ಸಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವುದು
- ಕಿವಿ, ಮೂಗು, ಗಂಟಲು ಸಂಬಂಧಿತ ವಾಕ್–ಶ್ರವಣ ಭಾಷಾ ತೊಂದರೆಗಳಿಗೆ ವೈದ್ಯಕೀಯ ರೋಗ ನಿರ್ಣಯ ಹಾಗೂ ಶಸ್ತ್ರಚಿಕಿತ್ಸೆ ಮಾಡುವುದು
- ಕಿವಿ, ಮೂಗು, ಗಂಟಲಿಗೆ ಸಂಬಂಧಿಸಿದ ಸಂವಹನ ತೊಂದರೆಗಳಿಗೆ ಅವಶ್ಯಕತೆ ಆಧಾರಿತ ಸಂಶೋಧನಾ ಕಾರ್ಯಗಳನ್ನು ಕೈಗೊಳ್ಳುವುದು
- ಸಾರ್ವಜನಿಕರಿಗೆ ಕಿವಿ, ಮೂಗು, ಗಂಟಲಿಗೆ ಸಂಬಂಧಿಸಿದ ಸಂವಹನ ತೊಂದರೆಗಳ ಬಗ್ಗೆ ತಿಳುವಳಿಕೆ ನೀಡುವುದು

**ವೈದ್ಯಕೀಯ ಸೇವೆಗಳು**

**ಸಂಸ್ಥೆಯಲ್ಲಿ ಚಿಕಿತ್ಸಾ ಸೇವೆಗಳು**

- ರೋಗನಿರ್ಣಯ
- ಕಿವಿ, ಮೂಗು, ಗಂಟಲು ಪರೀಕ್ಷೆ
- ಕಾರ್ಯವಿಧಾನಗಳು
- ವೈದ್ಯಕೀಯ ನಿರ್ವಹಣೆ
- ವಿಶೇಷ ಚಿಕಿತ್ಸಾ ಘಟಕ

**ಸಂಸ್ಥೆಯ ರೋಗಿಗಳಿಗಾಗಿ ಕೆ.ಆರ್.ಆಸ್ಪತ್ರೆಯಲ್ಲಿ ಸೇವೆಗಳು**

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ವಿಭಾಗವು ಒಂದು (ಡಿ) ಘಟಕವನ್ನು ನಡೆಸುತ್ತದೆ. ಸುಮಾರು ೧೦ ಹಾಸಿಗೆಗಳು (ಪ್ರತಿ ಪುರುಷ ಮತ್ತು ಸ್ತ್ರೀ ವಾರ್ಡ್ ಎಂದು) ಒಳರೋಗಿಗಳಿಗೆ ಸೌಲಭ್ಯ ಒದಗಿಸಲಾಗಿದೆ. ದೊಡ್ಡ ಮತ್ತು ಸಣ್ಣ ಶಸ್ತ್ರಕ್ರಿಯೆಯನ್ನು ಮಾಡಲಾಗುತ್ತದೆ.

## ವಿಶೇಷ ಚಿಕಿತ್ಸಾಲಯಗಳು

**ವರ್ಟಿಗೋ (ತಲೆ ಸುತ್ತುವಿಕೆ) ಚಿಕಿತ್ಸಾಲಯ**

- ನರಸಂಬಂಧಿತ/ ಕಿವಿ ಸಂಬಂಧಿತ (ವಿವಿಧ ರೀತಿಯ) ತಲೆಸುತ್ತಿನ ತೊಂದರೆಗಳಿಗಾಗಿ ವೈದ್ಯಕೀಯ ಕ್ಷೇತ್ರದ ವಿವಿಧ ತಜ್ಞರನ್ನೊಳಗೊಂಡ ತಂಡದ ಮೂಲಕ ರೋಗನಿರ್ಣಾಯಕ ಪರೀಕ್ಷೆಗಳ ನಿಯಾಮವಳಿಗಳನ್ನು ಅಭಿವೃದ್ಧಿಪಡಿಸುವುದು
- ಪ್ರತಿಯೊಂದು ರೀತಿಯ ತಲೆಸುತ್ತಿನ ತೊಂದರೆಗಳಿಗೆ ಚಿಕಿತ್ಸಾ ವಿಧಾನಗಳನ್ನು ಅಭಿವೃದ್ಧಿಪಡಿಸುವುದು
- ರೋಗನಿರ್ಣಯ, ತಪಾಸಣೆ ಮತ್ತು ತೊಡಕುಗಳನ್ನು ತಡೆಗಟ್ಟಲು ಕ್ರಮಗಳನ್ನು ಕೈಗೊಳ್ಳುವುದು
- ಪರ್ಯಾಯ ಚಿಕಿತ್ಸಾ ಮಾದರಿಗಳನ್ನು ಗಮನಿಸುವುದು.
- ಅಪಾಯಕಾರಿ ಅಂಶಗಳ ಯಾದಿಯನ್ನು ಅಭಿವೃದ್ಧಿಗೊಳಿಸುವುದು

**ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳು**

ಇತರೆ ವೈದ್ಯಕೀಯ ಕಾಲೇಜುಗಳಿಂದ ಬರುವ ಕಿವಿ, ಮೂಗು, ಗಂಟಲು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮೈಕ್ರೋಸ್ಕೋಪಿ, ಎಂಡೋಸ್ಕೋಪಿ, ಸ್ಟ್ರೋಬೋಸ್ಕೋಪಿ ಮತ್ತು ತಲೆಸುತ್ತಿನ ಪರೀಕ್ಷೆಗಳ ಬಗ್ಗೆ ಹೆಚ್ಚಿನ ತರಬೇತಿ ನೀಡುವುದು

ಮೂಲಭೂತ ಸೌಕರ್ಯಗಳು

- ಸುಸಜ್ಜಿತವಾದ ಐದು ಸಮಾಲೋಚನಾ ಕೊಠಡಿಗಳು
- ಸೂಕ್ಷ್ಮದರ್ಶಕ
- ಆರೋಗ್ಯ ಗಮನ ಕೇಂದ್ರ
- ಟೆಂಪರೊಲ್ ಬೋನ್ ಡಿಸೆಕ್ಷನ್ ಪ್ರಯೋಗಾಲಯ
- ಎಂಡೋಸ್ಕೋಪಿ, ಸ್ಟ್ರೋಬೋಸ್ಕೋಪಿ ಕೊಠಡಿ
- ತಲೆಸುತ್ತು ಪರೀಕ್ಷಾ ಪ್ರಯೋಗಾಲಯ

**ಸಾರ್ವಜನಿಕ ಶಿಕ್ಷಣ ಮತ್ತು ವಿಸ್ತರಣಾ ಸೇವೆಗಳು**

- ಮಾಸಿಕ ಸಾರ್ವಜನಿಕ ಉಪನ್ಯಾಸಗಳು
- ಶಿಬಿರಗಳು
- ಎಸ್ ಎಸ್ ಎ ಕಾರ್ಯಕ್ರಮಗಳು
- ದೂರದರ್ಶನ ಕಾರ್ಯಕ್ರಮಗಳು

**ಸಂಪರ್ಕಿಸಿ**
**ಡಾ. ಜಿ. ರಾಜೇಶ್ವರಿ**
ಪ್ರವಾಚಕರು ಮತ್ತು ಮುಖ್ಯಸ್ಥರು, ಕಿವಿ, ಮೂಗು ಮತ್ತು ಗಂಟಲು ವಿಭಾಗ
ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮಾನಸಗಂಗೋತ್ರಿ
ಮೈಸೂರು – 570 006
ಕರ್ನಾಟಕ
ದೂರವಾಣಿ: 91-0821-2502240
ಫ್ಯಾಕ್ಸ್: 91-0821-2510515
ಗ್ರಾಂ: Speechearing
ಇಮೇಲ್: rajeshwarigovindaswamy18@gmail.com
ಕಾರ್ಯ ನಿರ್ವಹಿಸುವ ಅವಧಿ: 09:00AM-5:30PM
ಕಾರ್ಯ ನಿರ್ವಹಿಸುವ ದಿನಗಳು: ಸೋಮವಾರದಿಂದ ಶುಕ್ರವಾರ (ಕೇಂದ್ರ ಸರ್ಕಾರದ ರಜಾ ದಿನಗಳನ್ನು ಹೊರತುಪಡಿಸಿ)

# ವಿಶೇಷ ಶಿಕ್ಷಣ ವಿಭಾಗ

ಅಖಿಲ ಭಾರತ ವಾಕ್‌ಶ್ರವಣ ಸಂಸ್ಥೆಯಲ್ಲಿ ವಿಶೇಷ ಶಿಕ್ಷಣ ವಿಭಾಗವು ಏಪ್ರಿಲ್ ೨೦೦೫ರಂದು ಚಾಲನೆಗೊಂಡಿತು. ವಿಶೇಷ ಶಿಕ್ಷಣ ಕ್ಷೇತ್ರದಲ್ಲಿನ ಪ್ರಗತಿಯು ವಿಭಾಗದ ಕಾರ್ಯಪಡೆಯು ಅತ್ಯುತ್ತಮವಾದ ಶೈಕ್ಷಣಿಕ ಸೇವೆಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ನೀಡಲು ಸಜ್ಜಾಗುವಂತೆ ಮಾಡಿದೆ. ವಿಭಾಗದಲ್ಲಿನ ಸಿಬ್ಬಂದಿಯು ಡಿಪ್ಲೊಮೋ ವಿದ್ಯಾರ್ಥಿಗಳಿಗೆ, ಪದವಿ ಪೂರ್ವ ವಿದ್ಯಾರ್ಥಿಗಳಿಗೆ, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ವಿಶೇಷ ಶಿಕ್ಷಣ ಕೋರ್ಸ್‌ಗಳನ್ನು ನೀಡುತ್ತಿದ್ದು ಸಾಂಸ್ಥಿಕ ಹಾಗೂ ಸಹಯೋಗ ಸಂಶೋಧನೆಗಳಿಗೆ ಅವಕಾಶ ಒದಗಿಸಿ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ವಿಶೇಷ ಶೈಕ್ಷಣಿಕ ಸೇವೆಗಳನ್ನು ಒದಗಿಸುತ್ತಾ ವಿಶೇಷ ಮಕ್ಕಳ ಪೋಷಕರಿಗೆ ಸಲಹೆ ಮತ್ತು ಮಾರ್ಗದರ್ಶನ ನೀಡುತ್ತಿದೆ. ಮಾತ್ರವಲ್ಲದೆ, ಅವರನ್ನು ಸಬಲೀಕರಣಗೊಳಿಸುತ್ತಾ ಇತರೆ ವೃತ್ತಿಪರರಿಗೆ ಮಾಹಿತಿ ಮತ್ತು ಸಂಪನ್ಮೂಲಗಳನ್ನು ಸಂಯೋಜಿಸುತ್ತಾ ಬಂದಿದೆ.

**ವಿಶೇಷ ಶಿಕ್ಷಣ– ಧ್ಯೇಯಗಳು ಮತ್ತು ಉದ್ದೇಶಗಳು**

ವಿಶೇಷ ಶಿಕ್ಷಣ ವಿಭಾಗವು ಸಂವಹನ ದೋಷವುಳ್ಳ ಮಕ್ಕಳನ್ನು ಸಮನ್ವಯ ಶಿಕ್ಷಣದ ಮೂಲಕ ಶಿಕ್ಷಣದ ಮುಖ್ಯವಾಹಿನಿಗೆ ತರುವ ಮುಖ್ಯ ಗುರಿಯೊಂದಿಗೆ ಕಾರ್ಯನಿರ್ವಹಿಸುತ್ತಿದೆ. ವಿಶೇಷ ಶಿಕ್ಷಣ ವಿಭಾಗವು ಈ ಮೂಲ ಗುರಿಯ ಸಾಧನೆಗಾಗಿ ಕೆಳಗಿನ ಉದ್ದೇಶಗಳನ್ನು ಹೊಂದಿದೆ.

- ಸಂವಹನ ದೋಷವುಳ್ಳ ಮಕ್ಕಳ ವಿಶೇಷ ಶಿಕ್ಷಣಕ್ಕಾಗಿ ಮಾನವ ಸಂಪನ್ಮೂಲ ಅಭಿವೃದ್ಧಿಗೊಳಿಸುವುದು.
- ಸಂವಹನ ದೋಷವುಳ್ಳ ಮಕ್ಕಳಿಗೆ ಗುಣಮಟ್ಟದ ವಿಶೇಷ ಶಿಕ್ಷಣ ಸೇವೆಯನ್ನು ಒದಗಿಸುವುದು.
- ವಿಶೇಷ ಶಿಕ್ಷಣ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಉತ್ತೇಜಿಸುವುದು.
- ದೇಶದಾದ್ಯಂತ ಹಲವಾರು ವಿವಿಧ ನಿಗದಿತ ಗುಂಪುಗಳಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ, ಸಂವೇದನಾ ಕಾರ್ಯಕ್ರಮ, ಅಲ್ಪಾವಧಿ ತರಬೇತಿ ಕಾರ್ಯಕ್ರಮ ಮತ್ತು ಕಾರ್ಯಾಗಾರಗಳ ಮೂಲಕ ವಿಶೇಷ ಶೈಕ್ಷಣಿಕ ಸೇವೆಗಳ ದೃಷ್ಠಿಕೋನ ಮತ್ತು ಸೂಕ್ಷ್ಮತೆಯ ಬಗ್ಗೆ ಮಾಹಿತಿಗಳನ್ನು ಪ್ರಚಾರಗೊಳಿಸುವುದು.

**ವಿಶೇಷ ಶಿಕ್ಷಣ ಚಟುವಟಿಕೆಗಳು**
**ಮಾನವ ಸಂಪನ್ಮೂಲ ಅಭಿವೃದ್ಧಿ**

ವಿಭಾಗವು ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿದ್ದು, ಶಾಲಾ ಪೂರ್ವ ಮಟ್ಟದಲ್ಲಿ ಸಮನ್ವಯ ಶಾಲೆಗಳಲ್ಲಿ ಮತ್ತು ವಿಶೇಷ ಶಾಲೆಗಳಲ್ಲಿ ಶ್ರವಣ ದೋಷವುಳ್ಳ ಮಕ್ಕಳಿಗೆ ಬೋಧನೆ ಮಾಡುತ್ತಿದೆ. ಹಾಗೂ ವಿಭಾಗವು ಸೂಕ್ತ ತರಬೇತಿ ಕಾರ್ಯಕ್ರಮ ಮತ್ತು ಅಗತ್ಯಾನುಸಾರ ಸಂಶೋಧನೆಗಳನ್ನು ಕೈಗೊಳ್ಳುತ್ತದೆ.

**ದೀರ್ಘಾವಧಿಯ ತರಬೇತಿ ಕಾರ್ಯಕ್ರಮಗಳು:**

- ಡಿ.ಇ.ಸಿ.ಎಸ್.ಇ–ಹೆಚ್.ಐ: ಆರಂಭಿಕ ಬಾಲ್ಯದ ವಿಶೇಷ ಶಿಕ್ಷಣದಲ್ಲಿ ಡಿಪ್ಲೊಮಾ: (ಶ್ರವಣದೋಷ)
- ಬಿ.ಇಡಿ.ಎಸ್‌ಪಿಎಲ್.ಇಡಿ(ಹೆಚ್.ಐ): ವಿಶೇಷ ಶಿಕ್ಷಣದಲ್ಲಿ ಶಿಕ್ಷಣ ಪದವಿ (ಶ್ರವಣ ದೋಷ)
- ಎಂ.ಇಡಿ.ಎಸ್‌ಪಿಎಲ್.ಇಡಿ(ಹೆಚ್.ಐ): ವಿಶೇಷ ಶಿಕ್ಷಣದಲ್ಲಿ ಸ್ನಾತಕ ಶಿಕ್ಷಣ ಪದವಿ (ಶ್ರವಣ ದೋಷ)

**ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳು:**

- ಆರಂಭಿಕ ಬಾಲ್ಯದ ಪ್ರಶಿಕ್ಷಕರು ಮತ್ತು ಸೇವಾವಧಿ ಮತ್ತು ಪೂರ್ವ ಸೇವಾವಧಿ ಶಾಲಾ ಶಿಕ್ಷಕರಿಗೆ ಸಂವೇದನಾ ಕಾರ್ಯಕ್ರಮ.
- ಸಿಬ್ಬಂದಿಗಳಿಗೆ ಸಂವರ್ಧನಾ ಕಾರ್ಯಕ್ರಮ (ಎಸ್.ಇ.ಪಿ)
- ಪೋಷಕರಿಗೆ ಸಂವರ್ಧನಾ ಕಾರ್ಯಕ್ರಮ (ಪಿ.ಇ.ಪಿ)
- ಪೋಷಕರಿಂದ ಪೋಷಕರಿಗೆ ಸಹಾಯಕ ಕಾರ್ಯಕ್ರಮ (ಪಿ.ಹೆಚ್.ಪಿ.ಪಿ)

**ಸಂವಹನ ದೋಷವುಳ್ಳ ಮಕ್ಕಳಿಗಾಗಿ ವಿಶೇಷ ಶೈಕ್ಷಣಿಕ ಸೇವೆಗಳು:–**

ವಿಶೇಷ ಶೈಕ್ಷಣಿಕ ಮಾಪನ ಘಟಕ (ಎಸ್.ಇ.ಎ–ಯು), ಪೋಷಕ ಶಿಶು ಕಾರ್ಯಕ್ರಮ (ಪಿ.ಐ.ಪಿ), ಪ್ರೀ–ಸ್ಕೂಲ್ ಪೋಷಕರ ಸಬಲೀಕರಣ ಕಾರ್ಯಕ್ರಮ (ಪಿ.ಪಿ.ಇ.ಪಿ), ಪ್ರಿ–ಸ್ಕೂಲ್ ತರಬೇತಿ, ಪ್ರಿ–ಸ್ಕೂಲ್ ಪೂರಕ ಸೇವೆಗಳು (ಪಿ.ಎಸ್.ಎಸ್), ಗುಂಪು ಶೈಕ್ಷಣಿಕ ಮಾರ್ಗದರ್ಶನ ಸೇವೆ (ಜಿ.ಇ.ಜಿ.ಎಸ್), ವೈಯಕ್ತಿಕ ಶಿಕ್ಷಣ ಕಾರ್ಯಕ್ರಮ (ಐ.ಇ.ಪಿ), ಪಠ್ಯಕ್ರಮ ಸಹಾಯಕ ಸೇವೆಗಳು (ಸಿ.ಎಸ್.ಎಸ್), ಅನೌಪಚಾರಿಕ ಶಿಕ್ಷಣ (ಎನ್.ಎಫ್.ಇ), ಪ್ರಾಥ್ಯಕ್ಷಿಕ ಶೈಕ್ಷಣಿಕ ತರಬೇತಿ (ಡಿ.ಇ.ಟಿ) ಮತ್ತು ಮಾರ್ಗದರ್ಶನ ಮತ್ತು ಸಲಹೆ. ಕ್ರಮವಾಗಿ ಈ ಎಲ್ಲಾ ಸೇವೆಗಳನ್ನು ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ಸಂಸ್ಥೆಯ ಮೂಲ ಉದ್ದೇಶದ ಸಾಧನೆಗಾಗಿ ಸಂವಹನ ದೋಷುವಳ್ಳ ಮಕ್ಕಳಿಗೆ ಮತ್ತು ಅವರ ಪೋಷಕರಿಗೆ ನೀಡಲಾಗುತ್ತಿದೆ.

ಪೋಷಕರು / ತಂದೆ ತಾಯಿಗಳು ಶಾಲಾ–ಪೂರ್ವ ಬೋಧನೆಯ ಜೊತೆಗೆ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ನಿಭಾಯಿಸಲು ಮತ್ತು ತರಬೇತಿಗೊಳಿಸಲು ಸಬಲರಾಗುವಂತೆ ಮಾಡಲಾಗುತ್ತದೆ.ಸಂವಹನ ದೋಷವುಳ್ಳ ಮಕ್ಕಳ ಕಲಿಕೆಗಾಗಿ ಬೋಧನಾ ಕಲಿಕಾ ಸಾಮಗ್ರಿಗಳನ್ನು ಅಭಿವೃದ್ಧಿ ಪಡಿಸಲು ಅವರಿಗೆ ತರಬೇತಿ ನೀಡಲಾಗುತ್ತದೆ.ಜೊತೆಗೆ ಮೂಲ ಸಾಕ್ಷರತಾ ಮತ್ತು ಗಣಕಯಂತ್ರ ಸಾಕ್ಷರತಾ ಕಾರ್ಯಕ್ರಮಗಳನ್ನು ನೀಡಲಾಗುತ್ತದೆ. ಈ ಎಲ್ಲಾ ಬಗೆಯ ಸೇವೆಗಳ ವಿವರಗಳನ್ನು ಚಿತ್ರ.೧ ರಲ್ಲಿ ತೋರಿಸಲಾಗಿದೆ.

**ಸಂಪರ್ಕಿಸಿ**


**ಡಾ|| ಅಲೋಕ್ ಕುಮಾರ್ ಉಪಾಧ್ಯಾಯ್**
ಸಹಾಯಕ ಪ್ರಾಧ್ಯಾಪಕರು, ವಿಶೇಷ ಶಿಕ್ಷಣ
ಮುಖ್ಯಸ್ಥರು– ವಿಶೇಷ ಶಿಕ್ಷಣ ವಿಭಾಗ
ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು-570006
ಕರ್ನಾಟಕ ರಾಜ್ಯ
ಭಾರತ
ದೂರವಾಣಿ: 0821-2502000, 2502566, ಎಕ್ಸ್ಟೆನ್ಷನ್: 2570
ಫ್ಯಾಕ್ಸ್: 0821-2510515
ಉಚಿತ ಕರೆಗಾಗಿ: 1800 4255218
ಇ–ಮೇಲ್ ವಿಳಾಸ: spledn_aiish@aiishmysore.in, spledn.rep@gmail.com

ಕೆಲಸದ ವೇಳೆ: ಬೆಳಿಗ್ಗೆ ೯.೦೦ ರಿಂದ ಸಂಜೆ ೫.೩೦ ಗಂಟೆ (ಭಾರತೀಯ ಕಾಲಮಾನದ ಪ್ರಕಾರ)
ಕೆಲಸದ ದಿನಗಳು: ಸೋಮವಾರ ದಿಂದ ಶುಕ್ರವಾರ

## ವಾಕ್–ಭಾಷಾ ವಿಜ್ಞಾನ ವಿಭಾಗ

**ಚಟುವಟಿಕೆಗಳು**

ವಿಭಾಗವು ಸಂವಹನ ನ್ಯೂನತೆ ಕ್ಷೇತ್ರದಲ್ಲಿ ಡಿಪ್ಲೋಮಾ, ಸ್ನಾತಕಪೂರ್ವ, ಸ್ನಾತಕೋತ್ತರ, ಡಾಕ್ಟರೇಟ್ ಮತ್ತು ಡಾಕ್ಟರೇಟ್ ನಂತರದ ಮಟ್ಟದಲ್ಲಿ ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು, ಸಾಂಸ್ಥಿಕ ಮತ್ತು ಸಹಕಾರಿ ಸಂಶೋಧನೆ ನಡೆಸುವುದು, ಸಂವಹನ ನ್ಯೂನತೆ ಹೊಂದಿರುವ ವ್ಯಕ್ತಿಗಳಿಗೆ ಚಿಕಿತ್ಸಾ ಸೇವೆಗಳನ್ನು ಒದಗಿಸುವುದು, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದು,

ವೃತ್ತಿಪರರಿಗೆ ಮಾಹಿತಿ ಮತ್ತು ಸಂಪನ್ಮೂಲಗಳನ್ನು ಒದಗಿಸುವುದು ಸೇರಿದಂತೆ ಬಹುಮುಖ ಚಟುವಟಿಕೆಗಳಲ್ಲಿ ತೊಡಗಿದೆ. ಮಾತು ಮತ್ತು ಭಾಷೆಯ ಕಾರ್ಯವಿಧಾನಗಳು ಮತ್ತು ಅದರ ಕಾರ್ಯಗಳ ಬಗ್ಗೆ ಸಂಪೂರ್ಣ ತಿಳುವಳಿಕೆಯೊಂದಿಗೆ ಭಾರತದ ವಿವಿಧ ಜನಸಂಖ್ಯೆಗೆ ಸೇವೆಗಳನ್ನು ಒದಗಿಸುವುದು ವಿಭಾಗದ ಮತ್ತೊಂದು ಪ್ರಮುಖ ಉದ್ದೇಶವಾಗಿದೆ. ಮಾತು ಮತ್ತು ಭಾಷಾ ವಿಜ್ಞಾನ ಕ್ಷೇತ್ರದಲ್ಲಿನ ಪ್ರಗತಿಯಿಂದಾಗಿ, ವಿಭಾಗವು ತನ್ನ ತರಬೇತಿ ಮತ್ತು ಪ್ರಾಯೋಗಿಕ ಕಾರ್ಯಕ್ರಮಗಳಿಗೆ ಅತ್ಯುತ್ತಮವಾದ ತಾಂತ್ರಿಕ ಜ್ಞಾನ ಮತ್ತು ಸಂಶೋಧನೆ ಆಧಾರಿತ ಸಾಕ್ಷ್ಯಗಳನ್ನು ಒದಗಿಸುತ್ತಿದೆ. ಇದರೊಂದಿಗೆ, ಮಕ್ಕಳು ಮತ್ತು ವಯಸ್ಕರಲ್ಲಿ ಕಂಡು ಬರುವ ಮಾತು ಮತ್ತು ಭಾಷಾ ತೊಂದರೆಗಳನ್ನು ಸಾಮಾಜಿಕ-ಸಾಂಸ್ಕೃತಿಕ ಹಾಗೂ ಬಹುವಿಧದ ಭಾಷಾ ಹಿನ್ನಲೆಯೊಂದಿಗೆ ಸಂಪೂರ್ಣವಾಗಿ ತಿಳುವಳಿಕೆ ನೀಡುವುದು ವಿಭಾಗದ ಗುರಿಯಾಗಿದೆ.

**ವಿಭಾಗದ ಉದ್ದೇಶಗಳು**

- ಮಾತು ಮತ್ತು ಭಾಷಾ ವಿಜ್ಞಾನದಲ್ಲಿ ಮೂಲಭೂತ ಸಂಶೋಧನೆ ಕೈಗೊಳ್ಳುವುದು
- ಮಾತು ಮತ್ತು ಭಾಷಾ ವಿಜ್ಞಾನಗಳಲ್ಲಿ ಅಂತರಶಿಕ್ಷಣ ಸಂಶೋಧನೆ ನಡೆಸಲು ತರಬೇತಿ ಪಡೆದ ಮಾನವ ಸಂಪನ್ಮೂಲ ಅಭಿವೃದ್ಧಿಪಡಿಸುವುದು
- ಮಾತು ಮತ್ತು ಭಾಷೆಯ ಪರೀಕ್ಷೆಗಳಿಗಾಗಿ ಏಕರೂಪ ಮಾರ್ಗದರ್ಶನಗಳು, ಕಾರ್ಯವಿಧಾನಗಳು, ಮೂಲ ಪ್ರತಿಕರಡುಗಳನ್ನು ಸ್ಥಾಪಿಸುವುದು
- ವಾಕ್-ಭಾಷಾ ವಿಜ್ಞಾನದಲ್ಲಿ ರಾಷ್ಟ್ರೀಯ ಮತ್ತು ಅಥವಾ ಅಂತರಾಷ್ಟ್ರೀಯ ವಿಶ್ವವಿದ್ಯಾಲಯಗಳೊಂದಿಗೆ ಸಂಶೋಧನಾ ಸಹಜಾಲವನ್ನು ಉತ್ತೇಜಿಸುವುದು
- ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಸಂಸ್ಥೆಗಳಲ್ಲಿ ಜಾಲದ ಮೂಲಕ ಮಾತು ಮತ್ತು ಭಾಷಾ ವಿಜ್ಞಾನದಲ್ಲಿ ಸಂಶೋಧನೆಗೆ ಉತ್ತೇಜಿಸುವುದು
- ಮಾತು ಮತ್ತು ಭಾಷಾ ವಿಜ್ಞಾನಗಳಲ್ಲಿ ಸಂಶೋಧನೆಗೆ ರಾಷ್ಟ್ರೀಯ ಉನ್ನತ ಕೇಂದ್ರವಾಗಿ ಸೇವೆ ಸಲ್ಲಿಸುವುದು
- ಇತರ ಸಂಸ್ಥೆಗಳಿಗೆ ಸಲಹಾ ಸೇವೆಗಳನ್ನು ನೀಡುವುದು, ಮಾತು ಮತ್ತು ಭಾಷಾ ವಿಜ್ಞಾನಗಳಲ್ಲಿ ಮೂಲಭೂತ ಮತ್ತು ಮುಂದುವರಿದ ವಿಧಾನಗಳ ಸಂಶೋಧನೆ ಕೈಗೊಳ್ಳುವುದು
- ವೈಜ್ಞಾನಿಕ ಸಮುದಾಯಕ್ಕೆ, ಮಾತು ಮತ್ತು ಭಾಷಾ ವಿಜ್ಞಾನಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಪ್ರಕಟಣೆಗಳ ಮೂಲಕ ಮಾಹಿತಿ ಒದಗಿಸುವುದು

**ಬೋಧನೆ ಮತ್ತು ತರಬೇತಿ**

- ಡಿಪ್ಲೊಮಾ ಕೋರ್ಸುಗಳು
- ಪದವಿ ಬಿ.ಎಸ್.ಸಿ / ಬಿಎಎಸ್ಎಲ್ ಪಿ
- ಮಾತು ಮತ್ತು ಭಾಷಾ ದೋಷದಲ್ಲಿ ಸ್ನಾತಕೋತ್ತರ ಪದವಿ ಎಂ.ಎಸ್ಸಿ (ಸ್ಪೀಚ್-ಲ್ಯಾಂಗ್ವೇಜ್ ಪೆಥಾಲಜಿ)
- ಶ್ರವಣ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ
- ಧ್ವನಿ ಸಂಬಂಧಿತ ವೈದ್ಯಕೀಯ ನ್ಯಾಯಶಾಸ್ತ್ರದಲ್ಲಿ ಡಿಪ್ಲೊಮಾ
- ಸಂಶೋಧನೆ ಮತ್ತು ಸಂಶೋಧನಾ ನಂತರದ ಶಿಕ್ಷಣ

- ಅಲ್ಪಾವಧಿಯ ತರಬೇತಿ ಶಿಕ್ಷಣ
- ಪುನಶ್ಚೇತನ ಶಿಕ್ಷಣ

**ಚಿಕಿತ್ಸಾ ಸೇವೆಗಳು**

- ರೋಗನಿರ್ಣಯ ಮತ್ತು ಪುನರ್ವಸತಿ ಸೇವೆಗಳು
- ವೃತ್ತಿಪರ ಧ್ವನಿ ಚಿಕಿತ್ಸಾ ಸೇವೆಗಳು
- ತಂತನತೆ ಹೊಂದಿರುವ ಮಕ್ಕಳಿಗೆ ಶ್ರವಣಾಧಾರಿತ ಚಿಕಿತ್ಸೆ
- ಸಂವಹನ ತೊಂದರೆಗಳನ್ನು ತಡೆಗಟ್ಟುವುದಕ್ಕಾಗಿ ಸೇವೆಗಳು

**ಸಂಶೋಧನೆ – ಎಕ್ಸ್ಟ್ರಾಮ್ಯೂರಲ್ ಯೋಜನೆಗಳು**

- ಸಂಸ್ಥೆಯ ಸಂಶೋಧನಾ ನಿಧಿಯಿಂದ ಬೆಂಬಲಿತ ಯೋಜನೆಗಳು
- ಡಾಕ್ಟರೇಟ್ ಪ್ರಬಂಧಕ್ಕಾಗಿ ಡಾಕ್ಟರೇಟ್ ಮತ್ತು ಡಾಕ್ಟರೇಟ್ ನಂತರದ ಅಭ್ಯರ್ಥಿಗಳಿಗೆ ಮಾರ್ಗದರ್ಶನ
- ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ರಬಂಧಗಳಿಗೆ ಮಾರ್ಗದರ್ಶನ
- ಯೋಜನೆಗಳಿಗಾಗಿ ಪಿಜಿಡಿಎಫ್ಎಸ್ಎಸ್ ಟಿ ಗಾಗಿ ಮಾರ್ಗದರ್ಶನ

**ಸಾರ್ವಜನಿಕ ಶಿಕ್ಷಣ**

- ಧ್ವನಿ ಸಂರಕ್ಷಣೆ ಕುರಿತು ಅರಿವಿನ ಕಾರ್ಯಕ್ರಮಗಳು
- ಸಂವಹನ ತೊಂದರೆಗಳ ಬಗ್ಗೆ ಅರಿವಿನ ಕಾರ್ಯಕ್ರಮಗಳು
- ಸಾರ್ವಜನಿಕ ಶಿಕ್ಷಣ ಕರಪತ್ರಗಳನ್ನು ಅಭಿವೃದ್ಧಿಪಡಿಸುವುದು
- ರೇಡಿಯೋ ಚರ್ಚೆ

**ಅತ್ಯಾಧುನಿಕ ಉಪಕರಣಗಳು/ ಸಾಫ್ಟ್ ವೇರಗಳನ್ನು ಒಳಗೊಂಡ ಮೂಲಭೂತ ಸೌಕರ್ಯ ಹೊಂದಿದ ಸುಸಜ್ಜಿತ ಪ್ರಯೋಗಾಲಯಗಳು ವಿಭಾಗದಲ್ಲಿವೆ**

- ವಾಕ್ –ವಿಜ್ಞಾನ
- ಭಾಷಾ ವಿಜ್ಞಾನ
- ವೃತ್ತಿಪರ ಧ್ವನಿ ಸಂರಕ್ಷಣೆ
- ವೈದ್ಯಕೀಯ ನ್ಯಾಯಶಾಸ್ತ್ರಬದ್ಧ ಮಾತಿನ ಗುರುತಿಸುವಿಕೆ
- ಮಾತಿನ ಅಂಗಕ್ರಿಯೆಗಳು
- ನರದ ಅಂಗಕ್ರಿಯೆಗಳು
- ಧ್ವನಿಶಾಸ್ತ್ರ
- ಛಂದಶಾಸ್ತ್ರ

ದೇಶದಲ್ಲಿ ವಿವಿಧ ರಾಜ್ಯಗಳ ನ್ಯಾಯಾಂಗ ಮತ್ತು ಪೊಲೀಸ್ ಇಲಾಖೆಗಳಿಗೆ ವೈದ್ಯಕೀಯ ನ್ಯಾಯಶಾಸ್ತ್ರಬದ್ಧ ಗುರುತಿಸುವಿಕೆ/ ಮಾತುಗಾರರ ಪರಿಶೀಲನೆ

**ಸಂಪರ್ಕಿಸಿ**

**ಡಾ. ಟಿ. ಜಯಕುಮಾರ್**
ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆ
ಮೈಸೂರು – 570 006

ಕರ್ನಾಟಕ ರಾಜ್ಯ, ಭಾರತ
ದೂರವಾಣಿ 91-0821-2502253
ಇಮೇಲ್: sls.aiish@gmail.com
ಫ್ಯಾಕ್ಸ್: 91-0821-2510515
ಗ್ರಾಮ್ಸ್: speechhearing
ಕಾರ್ಯ ನಿರ್ವಹಿಸುವ ಅವಧಿ: ೦೯.೦೦ ರಿಂದ ಸಂಜೆ ೦೫.೩೦ ರವರೆಗೆ
ಕಾರ್ಯ ನಿರ್ವಹಿಸುವ ದಿನಗಳು: ಸೋಮವಾರದಿಂದ ಶುಕ್ರವಾರದವರೆಗೆ (ಕೇಂದ್ರ ಸರ್ಕಾರದ ರಜಾ ದಿನಗಳನ್ನು ಹೊರತುಪಡಿಸಿ)

# ವಾಕ್–ಭಾಷಾ ದೋಷ ವಿಭಾಗ

**ವಿಭಾಗದ ಚುಟವಟಿಕೆಗಳು**

**ಬೋಧನೆ ಮತ್ತು ತರಬೇತಿ**

ವಿಭಾಗದ ಬೋಧಕವರ್ಗವು ಕೆಳಗಿನ ಶೈಕ್ಷಣಿಕ ವಿಷಯಗಳನ್ನು ಬೋಧಿಸುವದರಲ್ಲಿ ಕಾರ್ಯನಿರತವಾಗಿದೆ.

- ಮಾತು ಮತ್ತು ಭಾಷಾ ದೋಷದಲ್ಲಿ ಸ್ನಾತಕೋತ್ತರ ಪದವಿ (ಎಮ್.ಎಸ್.ಸಿ ಎಸ್ ಎಲ್ ಪಿ)
- ಶ್ರವಣ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ
- ಎಮ್.ಎಸ್.ಎಡ್ – ಹಿಯರಿಂಗ್ ಇಂಪೇರ್ಡ್ (ಎಮ್.ಎಸ್.ಎಡ್, ಎಚ್.ಐ)
- ಪದವಿ – ಶ್ರವಣ ವಿಜ್ಞಾನ, ಮಾತು ಮತ್ತು ಭಾಷೆ
- ಬಿ.ಎಸ್. ಎಡ್ – ಹಿಯರಿಂಗ್ ಇಂಪೇರ್ಡ್ (BSED (HI)
- ಸ್ನಾತಕೋತ್ತರ ಡಿಪ್ಲೋಮಾ – ಕ್ಲಿನಿಕಲ್ ಲಿಂಗ್ವಿಸ್ಟಿಕ್ಸ್ ಫಾರ್ ಸ್ಪೀಚ್ ಲಾಂಗ್ವೇಜ್ ಪೆಥಾಲಜಿಸ್ಟ್ಸ್ (ಪಿ.ಜಿ.ಡಿ.ಸಿ.ಎಲ್ ಎಸ್.ಎಲ್.ಪಿ) (PGDCL)
- ಸ್ನಾತಕೋತ್ತರ ಡಿಪ್ಲೋಮಾ – ಆಗ್ಮೆಂಟೇಟಿವ್ ಮತ್ತು ಆಳ್ಟರ್ನೇಟಿವ್ ಕಮ್ಯುನಿಕೇಶನ್ (ಪಿ.ಜಿ.ಡಿ.ಎ.ಎ.ಸಿ – PGDAAC)
- ಡಿಪ್ಲೊಮ – ಹಿಯರಿಂಗ್ , ಲಾಂಗ್ವೇಜ್ ಮತ್ತು ಸ್ಪೀಚ್ (ದೂರಶಿಕ್ಷಣದ ಮೂಲಕ) (ಡಿ.ಎಚ್.ಎಲ್.ಎಸ್ –DHLS)
- ಡಿಪ್ಲೋಮಾ – ಟ್ರೈನಿಂಗ್ ಯಂಗ್ ಡೆಫ್ ಅಂಡ್ ಹಾರ್ಡ್ ಆಫ್ ಹಿಯರಿಂಗ್ (ಡಿ.ಟಿ.ವೈ.ಡಿ.ಎಚ್.ಎಚ್ – DTYDHH)
- ಸರ್ಟಿಫಿಕೇಟ್ ಕೋರ್ಸ್ ಫಾರ್ ಕೇರ್ ಗಿವರ್ಸ್ ಆಫ್ ಚಿಲ್ಡ್ರನ್ಸ್ ವಿತ್ ಡೆವಲಪ್ ಮೆಂಟಲ್ ಡಿಸ್ ಎಬಿಲಿಟಿಸ್ (CCFCWDD)

ಪದವೀಧರ ಮತ್ತು ಸ್ನಾತಕೋತ್ತರ ಪದವಿಗಳ ಬೋಧನೆಯ ಅಂಗವಾಗಿ ಶೈಕ್ಷಣಿಕ ಚಟುವಟಿಕೆಯಡಿ ನಡೆಸುವ ಜರ್ನಲ್ ಕ್ಲಬ್ಬುಗಳು ಮತ್ತು ಚಿಕಿತ್ಸಾ ಸಮ್ಮೇಳನಗಳಿಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವಲ್ಲಿ ಕೂಡ ಸಿಬ್ಬಂದಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವೃತ್ತಿಪರರ ಜ್ಞಾನವನ್ನು ಹೆಚ್ಚಿಸಲು ಹಲವಾರು ವಿಚಾರಸಂಕಿರಣಗಳು, ಕಾರ್ಯಾಗಾರಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಪ್ರತಿವರ್ಷ ಆಯೋಜಿಸಲಾಗುತ್ತದೆ. ನಿರ್ದೇಶಕರ ಅನುಮೋದನೆಯೊಂದಿಗೆ ಈ ಕೆಳಗಿನ ಆರೋಗ್ಯ ಮತ್ತು ಪುನರ್ವಸತಿ ವೃತ್ತಿಪರರಿಗೆ ಅಲ್ಪಾವಧಿಯ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ:

- ವಿವಿಧ ವೈದ್ಯಕೀಯ ಸ್ನಾತಕೋತ್ತರ ಪದವೀಧರರು ಮತ್ತು ಕಿವಿ, ಮೂಗು ಮತ್ತು ಗಂಟಲಿನ ವಿಷಯದ ಪದವೀಧರ ವಿದ್ಯಾರ್ಥಿಗಳಿಗೆ ತರಬೇತಿ

- ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಕೀಯ ಅಧಿಕಾರಿಗಳು ಮತ್ತು ಇತರ ಆರೋಗ್ಯ ಕಾರ್ಯಕರ್ತರಿಗೆ ತರಬೇತಿ
- ವಿಶೇಷ ಶಿಕ್ಷಕರಿಗೆ ತರಬೇತಿ
- ಶ್ರವಣದೋಷವುಳ್ಳ ಮಕ್ಕಳಿಗೆ ಬೋಧಿಸುವ ಶಿಕ್ಷಕರಿಗೆ ತರಬೇತಿ
- ವಿಶೇಷ ಅಗತ್ಯವಿರುವ ಮಕ್ಕಳ ಪಾಲಕರಿಗೆ ತರಬೇತಿ
- ನಿಯಮಿತ ಶಾಲೆಗಳ ಶಿಕ್ಷಕರಿಗೆ ತರಬೇತಿ
- ದಾದಿಯರು ಮತ್ತು ಮೂಲಭೂತ ಆರೋಗ್ಯ ಕಾರ್ಯಕರ್ತರಿಗೆ ತರಬೇತಿ

ಈ ತರಬೇತಿಯ ಕಾರ್ಯಕ್ರಮಗಳ ವ್ಯಾಪ್ತಿಯು ಆರಂಭಿಕ ಹಂತದಲ್ಲಿ ಸಂವಹನ ನ್ಯೂನತೆಯನ್ನು ಗುರುತಿಸುವುದು ಮತ್ತು ತಡೆಗಟ್ಟುವುದು, ಸಂವಹನ ನ್ಯೂನತೆಯುಳ್ಳವರಿಗೆ ಲಭ್ಯವಿರುವ ಸೌಲಭ್ಯಗಳು, ಭಾಷೆಯ ಸಾಮಾನ್ಯ ಬೆಳವಣಿಗೆ, ಭಾಷೆ ಮತ್ತು ಸಂವಹನ ಕೌಶಲ್ಯಗಳು, ಸಂವಹನ ನ್ಯೂನತೆಯುಳ್ಳ ವ್ಯಕ್ತಿಯ ಕುಟುಂಬದೊಂದಿಗೆ ಸಮಾಲೋಚನೆ, ಮತ್ತು ವಾಕ್-ಭಾಷಾ ತೊಂದರೆಗಳಿಗೆ ಮನೆಯಲ್ಲಿ ನೀಡಬಹುದಾದ ತರಬೇತಿಯನ್ನು ಸಹ ಒಳಗೊಂಡಿರುತ್ತದೆ.

**ಚಿಕಿತ್ಸಾ ಚಟುವಟಿಕೆಗಳು ಮತ್ತು ವಿಶೇಷ ಘಟಕಗಳು/ ಕಾರ್ಯ ಚಟುವಟಿಕೆಗಳು**

ವಾಕ್-ಭಾಷಾ ದೋಷ ವಿಭಾಗವು ವಾಕ್ ಮತ್ತು ಶ್ರವಣ ಸಂಸ್ಥೆಯ ಪ್ರಮುಖ ಶಾಖೆಯಾಗಿದೆ. ವಿವಿಧ ರೀತಿಯ ಸಂವಹನ ತೊಂದರೆಗಳುಳ್ಳ ವ್ಯಕ್ತಿಗಳ ಪರೀಕ್ಷೆ/ ತಪಾಸಣೆ, ರೋಗನಿರ್ಣಯ, ಸಮಾಲೋಚನೆ ಮತ್ತು ನಿಭಾಯಿಸುವಿಕೆಯಲ್ಲಿ ವಿಭಾಗವು ಕಾರ್ಯನಿರತವಾಗಿದೆ. ಸಂವಹನ ತೊಂದರೆಗಳ ತಪಾಸಣೆಯು ಮಾತಿನ ಸಮಸ್ಯೆಗಳೊಂದಿಗೆ (ಧ್ವನಿಶಾಸ್ತ್ರ, ದೌರ್ಬಲ್ಯ ಮತ್ತು ಧ್ವನಿ ತೊಂದರೆಗಳು), ಭಾಷಾ ಸಮಸ್ಯೆಗಳು (ನಿಧಾನಗತಿಯ ಮಾತಿನ ಬೆಳವಣಿಗೆ, ಬುದ್ಧಿ ಮಾಂದ್ಯತೆ, ಮೆದುಳಿನ ಪಾರ್ಶ್ವವಾಯು, ನಿರ್ದಿಷ್ಟ ಭಾಷಾ ತೊಂದರೆಗಳು ಮತ್ತು ಅಫೇಸಿಯಾ) ಮತ್ತು ಸಂಬಂಧಿತ ತೊಂದರೆಗಳಿಗೆ ಸಮಗ್ರ ತಪಾಸಣೆಯನ್ನು ಒಳಗೊಂಡಿರುತ್ತದೆ (ಉದಾಹರಣೆಗೆ ನುಂಗಲು ಮತ್ತು ಮಾತಿನ ಅಂಗಾಂಗದಲ್ಲಿನ ತೊಂದರೆಗಳು).ವಿಶೇಷ ಪರೀಕ್ಷೆಗಳ ಮೂಲಕ ವ್ಯಕ್ತಿಯ ವೈದ್ಯಕೀಯ ಚರಿತ್ರೆಯಿಂದ ಪ್ರಾರಂಭವಾಗುವ ತಪಾಸಣೆಯಲ್ಲಿ ಸಮಗ್ರ ಪರೀಕ್ಷಾ ವಿಧಾನಗಳನ್ನು ರೋಗನಿರ್ಣಯ ಮಾಡಲು ಬಳಸಲಾಗುತ್ತದೆ. ಸಮಾಲೋಚನಾ ಮತ್ತು ಮಾರ್ಗದರ್ಶನ ಸೇವೆಗಳನ್ನು ಗ್ರಾಹಕರು ಮತ್ತು ಅವರ ಕುಟುಂಬಗಳಿಗೆ ನಿಯಮಿತವಾಗಿ ಅಲ್ಲದೆ, ಸಂವಹನ ತೊಂದರೆಗಳೊಂದಿಗಿನ ವ್ಯಕ್ತಿಗಳ ತಪಾಸಣೆ ಮತ್ತು ನಿಭಾಯಿಸುವುದಕ್ಕಾಗಿ ಸಂಬಂಧಿಸಿದ ಹಲವಾರು ವಿಷಯಗಳಲ್ಲೂ ಸಹ ಒದಗಿಸಲಾಗುತ್ತದೆ.

ಸಂಬಂಧಪಟ್ಟ ಸಂವಹನ ತೊಂದರೆಗಳಿಗಾಗಿ ವಿಶೇಷ ತಪಾಸಣೆ ಮತ್ತು ನಿಭಾಯಿಸುವುದಕ್ಕಾಗಿ ವಿಭಾಗವು ಏಳು ವಿಶೇಷ ಪ್ರಾಯೋಗಿಕ ಘಟಕಗಳನ್ನು ಹೊಂದಿದೆ. ಸಂಬಂಧಪಟ್ಟ ಬಳಕೆದಾರರಿಗೆ / ವ್ಯಕ್ತಿಗಳಿಗೆ ಪ್ರತಿದಿನ ಪರಿಣಾಮಕಾರಿ ವ್ಯಕ್ತಿಗತ ಆಧಾರದದ ಮೇಲೆ ಸಂವಹನ ತರಬೇತಿ ವಿಶೇಷ ಘಟಕಗಳ ಪ್ರಮುಖ ಗುರಿಯಾಗಿದೆ. ಭಾಷಾ-ದೋಷ ವಿಭಾಗವು ಈ ತೊಂದರೆಗಳಿಗೆ ಸಂಬಂಧಿಸಿದ ನಿರ್ದಿಷ್ಟ ವಿಷಯಗಳ ಮೇಲೆ ಸಂಪನ್ಮೂಲ ಮತ್ತು ಸಾರ್ವಜನಿಕ ಶಿಕ್ಷಣ ಸಾಮಗ್ರಿಗಳ ಅಭಿವೃದ್ಧಿಪಡಿಸುವುದನ್ನು ಮುಖ್ಯ ಗುರಿಯಾಗಿಸಿಕೊಂಡಿದೆ. ವಿಭಾಗವು ನಡೆಸುತ್ತಿರುವ ವಿಶೇಷ ವೈದ್ಯಕೀಯ ಘಟಕಗಳು ಇಂತಿವೆ.

**ತಂತನತೆ ಸಂಬಂಧಿತ ತೊಂದರೆಗಳ (ಎಎಸ್ಡಿ) ಘಟಕ:** ಈ ಘಟಕವನ್ನು ತಂತನತೆ ಮತ್ತು ಸಂಶೋಧನೆ, ದಾಖಲಾತಿ, ವಿವಿಧ ಬಗೆಯ ರೋಗನಿರ್ಣಯ ಮತ್ತು ತಪಾಸಣೆ ಮತ್ತು ವಿಶೇಷ ವ್ಯಾಪಕ ಬೆಳವಣಿಗೆಯ ತೊಂದರೆಗಳ (ಪಿಡಿಡಿ) ನಿರ್ಣಯದ ಜೊತೆಗೆ ಗ್ರಾಹಕರ ಅವಶ್ಯಕತೆಗಳನ್ನು ಗಮನದಲ್ಲಿರಿಸಿಕೊಂಡು ಸ್ಥಾಪಿಸಲಾಗಿದೆ. ಮಾತು–ಭಾಷಾ ಚಿಕಿತ್ಸೆ, ಸಂವಹನ ಚಿಕಿತ್ಸೆ, ಔದ್ಯೋಗಿಕ ಚಿಕಿತ್ಸೆ ಮತ್ತು ಸಂವೇದನಾ ಸಮನ್ವಯ ತರಬೇತಿಯನ್ನು ಒಳಗೊಂಡಿರುವ ತಂಡದಲ್ಲಿ ಎಎಸ್ಡಿ / ಪಿಡಿಡಿಯೊಂದಿಗೆ ಗ್ರಾಹಕರಿಗೆ ಸಮಗ್ರ ಸೇವೆಗಳನ್ನು ನೀಡುತ್ತದೆ.

**ಭಾಷಾ ತೊಂದರೆಗಳಿಂದ ಬಳಲುವ ವಯಸ್ಕರ ಮತ್ತು ಹಿರಿಯ ವ್ಯಕ್ತಿಗಳಿಗೆ ಘಟಕ (CAEPLD):** ಅಫೇಸಿಯಾ ಆಘಾತಕಾರಿ ಮಿದುಳಿನ ಆಘಾತ, ಬುದ್ಧಿಮಾಂದ್ಯತೆ ಮತ್ತು ಇತರ ಭಾಷೆಯ ತೊಂದರೆಗಳಿಂದ ಬಳಲುವ ವಯಸ್ಕರ ಮತ್ತು ವಯಸ್ಸಾದ ವ್ಯಕ್ತಿಗಳ ತಪಾಸಣೆ, ಪುನರ್ವಸತಿ ಮತ್ತು ಸುಧಾರಣೆಗೆ ಈ ವಿಶೇಷ ಪ್ರಯೋಗಾಲಯ ಗಮನಹರಿಸುತ್ತದೆ.

**ಡಿಸ್ಫೇಜಿಯಾ ಘಟಕ:** ಆಹಾರ ಮತ್ತು ದ್ರವಗಳನ್ನು ನುಂಗುವ ಕ್ರಿಯೆಯಲ್ಲಿ ಸಮಸ್ಯೆ ಹೊಂದಿರುವ ಸ್ಥಿತಿಗೆ ಡಿಸ್ಫೇಜಿಯ ಎನ್ನಲಾಗುತ್ತದೆ. ಡಿಸ್ಫೇಜಿಯಾ ಘಟಕವು ನುಂಗುವಿಕೆಯಲ್ಲಿನ ತೊಂದರೆಗಳನ್ನು ನಿವಾರಿಸಲು ಬೇಕಾಗಿರುವ ನುರಿತ ತರಬೇತಿ ಪಡೆದ ವೃತ್ತಿಪರರ ಸೇವಾ–ಸೌಲಭ್ಯ ಹೊಂದಿದೆ. ಇದಲ್ಲದೆ, ವ್ಯಕ್ತಿಗಳ ನುಂಗುವಿಕೆಯ ತೊಂದರೆ, ಅದರ ಗುರುತಿಸುವಿಕೆ, ತಪಾಸಣೆ, ಮತ್ತು ಚಿಕಿತ್ಸೆ ಲಭ್ಯವಿದೆ. ವಿಶೇಷವಾದ ಅತ್ಯಾಧುನಿಕ ಉಪಕರಣಗಳು ಮತ್ತು ತರಬೇತಿ ಪಡೆದ ವೃತ್ತಿಪರರು ಇದ್ದಾರೆ. ವ್ಯಕ್ತಿಗಳ ತೊಂದರೆಗಳ ಗುರುತಿಸುವಿಕೆ, ತಪಾಸಣೆ, ಮತ್ತು ಪುನರ್ವಸತಿ ಸೇವೆಗಳನ್ನು ನುಂಗುವಿಕೆಯ ತೊಂದರೆಗಳಿಂದ ಬಳಲುವವರ ಸೌಕರ್ಯಕ್ಕಾಗಿ ಒದಗಿಸಲಾಗುತ್ತದೆ.

**ಮೋಟಾರ್ ಸ್ಪೀಚ್ ಡಿಸಾರ್ಡರ್ಸ್ (MSD) ಗಾಗಿ ವಿಶೇಷ ಕ್ಲಿನಿಕ್:** ಎಂಎಸ್ಡಿ ಕ್ಲಿನಿಕ್ನ ಪ್ರಾಥಮಿಕ ಉದ್ದೇಶವು ಸ್ಟ್ರೋಕ್, ಗಾಯ, ಸೋಂಕು, ಗೆಡ್ಡೆ ಅಥವಾ ಸೆರೆಬ್ರಲ್ ಪಾಲ್ಸಿಗಳಿಂದ ಉಂಟಾಗುವ ನರಮಂಡಲದ ಹಾನಿಗಳಿಂದಾಗಿ ಮಾತನಾಡಲು ಸಾಧ್ಯವಾಗದವರಿಗೆ) ಅಗತ್ಯ ಸೇವೆಗಳನ್ನು ಪೂರೈಸುವುದು.

**ಸೀಳು ತುಟಿ ಸೀಳು ಅಂಗುಳಿಗೆ ಚಿಕಿತ್ಸಾ ಘಟಕ:** ಈ ಘಟಕವು ಸೀಳು ತುಟಿ ಮತ್ತು ಅಂಗುಳು ಮತ್ತು ಇತರ ಬಾಯಿ–ಮುಖದಲ್ಲಿನ ವೈಪರೀತ್ಯಗಳೊಂದಿಗೆ ಬಳಲುವ ಗ್ರಾಹಕರಿಗೆ ಸಮಗ್ರ ನಿರ್ವಹಣಾ ಸೇವೆಗಳನ್ನು ಒದಗಿಸುತ್ತದೆ. ಈ ಘಟಕದ ತಂಡದ ಸದಸ್ಯರು ಪ್ಲಾಸ್ಟಿಕ್ ಶಸ್ತ್ರವೈದ್ಯ, ಮಾತು–ಭಾಷಾ ತಜ್ಞ, ಮತ್ತು ದಂತವೈದ್ಯರನ್ನು ಒಳಗೊಂಡಿದೆ. ಬಾಯಿ ಮತ್ತು ಮುಖದ ವೈಪರೀತ್ಯಗಳೊಂದಿಗೆ ಬಳಲುವ ವ್ಯಕ್ತಿಗಳಿಗೆ ವ್ಯಕ್ತಿಗತವಾಗಿ ತಪಾಸಣೆ ನಡೆಸಿ ತರಬೇತಿ ನೀಡಲಾಗುತ್ತದೆ. ಸೀಳು ತುಟಿ ಮತ್ತು / ಅಥವಾ ಅಂಗುಳಿನ ಶಸ್ತ್ರಚಿಕಿತ್ಸೆಗೆ ಮುನ್ನ ಗ್ರಾಹಕರ ಅಗತ್ಯತೆಗಳನ್ನು ಪೂರೈಸಲು ಹಲವಾರು ರೀತಿಯ ವಿಶೇಷ ಉಪಕರಣಗಳನ್ನು ತಯಾರಿಸಲಾಗುತ್ತದೆ.

**ಕಲಿಕಾ ನ್ಯೂನತೆ ಘಟಕ:** ಕಲಿಕಾ ನ್ಯೂನತೆಯುಳ್ಳ ಮಕ್ಕಳಿಗೆ ಸಮಗ್ರ ತಪಾಸಣೆ ಮತ್ತು ನಿಭಾಯಿಸುವ ಮಾರ್ಗಗಳನ್ನು ಸೂಚಿಸುವುದು ಈ ಘಟಕದ ಉದ್ದೇಶವಾಗಿದೆ. ಕಲಿಕಾ ನ್ಯೂನತೆಯ ಲಕ್ಷಣಗಳನ್ನು ಹೊಂದಿರುವ ಪ್ರತಿ ಮಗುವಿಗೆ ಪರೀಕ್ಷಾ ಬ್ಯಾಟರಿಯ ಶ್ರೇಣಿಯ ಮೂಲಕ ಅವರ ಸಾಮರ್ಥ್ಯಗಳನ್ನು ನಿರ್ಧರಿಸಲಾಗುತ್ತದೆ. ಈ ಘಟಕವು ಮಾತು–ಭಾಷಾ ತಜ್ಞರು, ಮನೋವಿಜ್ಞಾನಿಗಳು, ಮತ್ತು ವಿಶೇಷ ಶಿಕ್ಷಕರನ್ನು ಒಳಗೊಂಡಿದೆ.

**ಸಂಶೋಧನ ಚಟುವಟಿಕೆಗಳು**

ಸಂಶೋಧನೆಯು ಮಾತು–ಭಾಷಾ ದೋಷ ವಿಭಾಗದ ಚಟುವಟಿಕೆಗಳಲ್ಲಿ ಒಂದು ಅವಿಭಾಜ್ಯ ಅಂಗವಾಗಿದೆ. ಇಲಾಖೆಯ ಬೋಧಕ ವರ್ಗ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಾರೆ. ವೈಜ್ಞಾನಿಕ ಪತ್ರಿಕೆಗಳ ಪ್ರಕಟಣೆ ಹಾಗೂ ಪ್ರಸ್ತುತಿಗಾಗಿ ಸಂಶೋಧನೆ ನಡೆಸಲು ಇಲಾಖೆಯ ಬೋಧಕವರ್ಗ ನಿರಂತರವಾಗಿ ತೊಡಗಿಸಿಕೊಂಡಿದೆ. ತಮ್ಮ ಸ್ನಾತಕೋತ್ತರ ಪದವಿಯ ಭಾಗವಾಗಿ ಸ್ನಾತಕೋತ್ತರ ವಿದ್ಯಾರ್ಥಿಗಳು ಸಿದ್ಧಪಡಿಸುವ ಪ್ರಬಂಧಗಳಿಗೆ ಬೋಧಕವರ್ಗದ ಸಿಬ್ಬಂದಿ ಮಾರ್ಗದರ್ಶನ ನೀಡುತ್ತಾರೆ.

**ಬೋಧನಾ ಸಂಶೋಧನಾ ಪ್ರಯೋಗಾಲಯಗಳು**

ವಿಭಾಗವು ಐದು ವಿಶೇಷ ಪ್ರಯೋಗಾಲಯಗಳನ್ನು ಹೊಂದಿದ್ದು, ಇದರಲ್ಲಿ ಮಕ್ಕಳ ಮತ್ತು ವಯಸ್ಕರಲ್ಲಿ ಕಾಣಬರುವ, ಭಾಷೆ, ಸಂವಹನ ಮತ್ತು ನುಂಗುವಿಕೆಯಲ್ಲಿನ ತೊಂದರೆಗಳು ಸೇರಿದಂತೆ ವಿವಿಧ ವಿಷಯಗಳ ಮೇಲೆ ಸಂಶೋಧನಾ ಚಟುವಟಿಕೆಗಳನ್ನು ಬೋಧಕವರ್ಗ, ಸಂಶೋಧನಾ ವಿದ್ಯಾರ್ಥಿಗಳು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು (ಬೋಧನಾ ಸಿಬ್ಬಂದಿಗಳ ಮಾರ್ಗದರ್ಶನದಲ್ಲಿ) ನಡೆಸುತ್ತಾರೆ. ಬಹು ವಿಧದ ಸಂಶೋಧನೆಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ. ಹಲವಾರು ಸಂಶೋಧನಾ ವಿದ್ಯಾರ್ಥಿಗಳಿಗೆ ಡಾಕ್ಟರೇಟ್ ಪ್ರಬಂಧಕ್ಕಾಗಿ ಮಾರ್ಗದರ್ಶನ ನೀಡಲಾಗುತ್ತದೆ.

**ವಿಭಾಗದ ಪ್ರಯೋಗಾಲಯಗಳು**

**ವಾಕ್ – ಭಾಷಾ ದೋಷ ಪ್ರಯೋಗಾಲಯ:**

ಈ ಪ್ರಯೋಗಾಲಯದಲ್ಲಿ ವರ್ತನೆಯ ಮತ್ತು ಎಲೆಕ್ಟ್ರೋಫಿಸಿಯಾಲಾಜಿಕಲ್ ವಿಧಾನಗಳನ್ನು ಬಳಸಿಕೊಂಡು ಭಾಷಾ ಸಂಸ್ಕರಣಾ ಪ್ರಯೋಗಗಳನ್ನು ನಡೆಸುವ ಸೌಲಭ್ಯಗಳು ಇವೆ. ಮೌಖಿಕ ಮತ್ತು ಅಮೌಖಿಕ ಭಾಷಾ ಗ್ರಹಿಕೆಯ ಪರೀಕ್ಷೆಗಳು ಇತರ ಸಂಶೋಧನೆಗಳಿಗೆ ಮತ್ತು ಪರಾಮರ್ಶನೆಗಾಗಿ ಲಭ್ಯವಿದೆ.

**ಮಾತಿನ ದೋಷ ಪ್ರಯೋಗಾಲಯ:**

ಈ ಪ್ರಯೋಗಾಲಯದಲ್ಲಿ ಧ್ವನಿ ಮತ್ತು ಭಾಷೆಯ ತೊಂದರೆಗಳ ವಿವಿಧ ಶಬ್ಧ ಮತ್ತು ಚಲನಶಾಸ್ತ್ರದ ಅಂಶಗಳನ್ನು ವಿಶ್ಲೇಷಿಸಲು ಉಪಕರಣಗಳು ಮತ್ತು ಸಾಫ್ಟ್ ವೇರ್ ಗಳು ಇವೆ. ಇವುಗಳನ್ನು ಸಂಶೋಧನೆ ಮತ್ತು ತರಬೇತಿ ಉದ್ದೇಶಗಳಿಗಾಗಿ ಬಳಸಲಾಗುತ್ತದೆ.

**ಆರ್ಟಿಕುಲೋಗ್ರಾಫ್ ಪ್ರಯೋಗಾಲಯ**

ಈ ಪ್ರಯೋಗಾಲಯವು ಆರ್ಟಿಕ್ಲೋಗ್ರಾಫ್ ಎಜಿ ೫೦೦ ಮತ್ತು ಆರ್ಟಿಕ್ಲೋಗ್ರಾಫ್ ಎಜಿ 501 ರೊಂದಿಗೆ ಮಾತನಾಡುವ ಸಮಯದಲ್ಲಿ ಆಗುವಂತಹ ಅಭಿವರ್ಧಕರ ಚಲನೆಯನ್ನು ಪತ್ತೆಹಚ್ಚಲು ಸಹಕಾರಿಯಾಗಿದೆ. ಈ ಸಲಕರಣೆಗಳನ್ನು ಚಲನಶಾಸ್ತ್ರ ಸಂಶೋಧನಾ ಅಧ್ಯಯನಗಳಿಗೆ ವ್ಯಾಪಕವಾಗಿ ಬಳಸಲಾಗುತ್ತದೆ.

**ನುಂಗುವ ತೊಂದರೆಗಳನ್ನ ಪರೀಕ್ಷಿಸುವ ಪ್ರಯೋಗಾಲಯ**

ಆಹಾರ ಮತ್ತು ದ್ರವ್ಯ ಪದಾರ್ಥ ನುಂಗುವುದರಲ್ಲಿ ತೊಂದರೆ ಅನುಭವಿಸುವ ವ್ಯಕ್ತಿಗಳಿಗೆ ಪರೀಕ್ಷೆ ಹಾಗೂ ಪುನರ್ವಸತಿ ಕಲ್ಪಿಸುವ ಸಲುವಾಗಿ ಈ ಪ್ರಯೋಗಾಲಯದಲ್ಲಿ ಸುಸಜ್ಜಿತ ಉಪಕರಣಗಳು ಲಭ್ಯವಿದೆ. ವಿದ್ಯಾರ್ಥಿಗಳು, ಸಂಶೋಧನಾರ್ಥಿಗಳು ಈ ವಿಷಯದಲ್ಲಿ ಸಂಶೋಧಿಸಲು ಪ್ರೇರೇಪಿಸಲಾಗುತ್ತದೆ. ವಿದ್ಯಾರ್ಥಿಗಳ ಕಲಿಕೆಗಾಗಿ ಶ್ರವಣ–ದೃಶ್ಯ ಸಾಮಾಗ್ರಿಗಳು ಹಾಗೂ ಮಾರ್ಗದರ್ಶಿಗಳು ಲಭ್ಯವಿದೆ.

**ಕಣ್ಣಿನ ಟ್ರ್ಯಾಕಿಂಗ್ ಪ್ರಯೋಗಾಲಯ:**

ವಾಕ್ – ಭಾಷಾ ದೋಷ ವಿಭಾಗದ ಮೂಲಸೌಕರ್ಯಕ್ಕೆ ಇದು ಇತ್ತೀಚಿನ ಸೇರ್ಪಡೆಯಾಗಿದೆ. ಗಮನ ನಕ್ಷೆಗಳು, ಶಾಖ ನಕ್ಷೆಗಳು ಮತ್ತು ಕಣ್ಣಿನ ಹಾದಿಗಳನ್ನು ಉತ್ಪಾದಿಸುವ ಕಣ್ಣಿನ ಚಲನೆಯನ್ನು ಪತ್ತೆಹಚ್ಚುವ ಹೆಚ್ಚಿನ ಪ್ರಯೋಗ ಸಾಧನಗಳನ್ನು ಈ ಪ್ರಯೋಗಾಲಯವು ಹೊಂದಿದೆ. ಓದುವುದು ಮತ್ತು ಅದರ ಸಂಸ್ಕರಣೆಗೆ ಸಂಬಂಧಿಸಿದ ಅನೇಕ ವಿದ್ಯಾರ್ಥಿ ಪ್ರಬಂಧಗಳು ಮತ್ತು ಯೋಜನೆಗಳಿಗೆ ಇದು ಸಂಶೋಧನಾ ತಾಣವಾಗಿದೆ.

**ಸಂಶೋಧನಾ ಯೋಜನೆಗಳು**

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ (ಡಿಎಸ್ ಟಿ), ಯುನಿಸೆಫ್, ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ (ಐಸಿಎಂಆರ್) ಮುಂತಾದ ಎಕ್ಸ್ಟ್ರ್ಯಮ್ಯೂರಲ್ ಫಂಡ್ ಏಜೆನ್ಸಿಗಳಿಂದ ಧನಸಹಾಯ ಪಡೆದ ಸಂಶೋಧನಾ ಯೋಜನೆಗಳನ್ನು ಇಲಾಖೆಯ ಬೋಧಕವರ್ಗ ಕೈಗೊಳ್ಳುತ್ತದೆ.

**ಸಂಶೋಧನಾ ಪ್ರಕಟಣೆಗಳು**

ವಿಭಾಗದ ಸಿಬ್ಬಂದಿಗಳು ತಮ್ಮ ವೈಜ್ಞಾನಿಕ ಸಂಶೋಧನೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಸ್ತುತಿಪಡಿಸಿ ಹಾಗು ಅದನ್ನು ಪ್ರಕಟಿಸುವುದರ ಮೂಲಕ ಸಂಶೋಧನಾ ಪ್ರಸಾರದಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿದ್ದಾರೆ.

- ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ನಿಯತಕಾಲಿಕಗಳಲ್ಲಿ ಪ್ರಕಟವಾದ ವೈಜ್ಞಾನಿಕ ಪತ್ರಿಕೆಗಳು (೨೦೧೭–೧೮)
- ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಮ್ಮೇಳನಗಳಲ್ಲಿ ಮಂಡಿಸಿದ ವೈಜ್ಞಾನಿಕ ಪತ್ರಿಕೆಗಳು (೨೦೧೭–೧೮)
- ಅತ್ಯುತ್ತಮ ಸಂಶೋಧನಾ ಪ್ರಸ್ತುತಿ/ ಪ್ರಕಟಣೆ ಪ್ರಶಸ್ತಿಗಳು (೨೦೧೭–೧೮)

**ಸಂಶೋಧನಾ ಮಾರ್ಗದರ್ಶನ**

ವಿಭಾಗದ ಬೋಧನಾ ಸದಸ್ಯರು ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧನಾ ಮಾರ್ಗದರ್ಶಿಗಳಾಗಿಯು ಸಹ ಗುರುತಿಸಿಕೊಂಡಿರುತ್ತಾರೆ. ವಾಕ್–ಭಾಷಾ ದೋಷ ಕ್ಷೇತ್ರದಲ್ಲಿ ಸಂಶೋಧನೆಯು ಗರಿಷ್ಠ ಸಂಖ್ಯೆಯ ಸಂಶೋಧನೆಗಳನ್ನು ಮಾರ್ಗದರ್ಶಿಸಿರುತ್ತದೆ. ಸಿಬ್ಬಂದಿ ವರ್ಗ ತಮ್ಮ ಸೇವಾ ಸಮಯದಲ್ಲಿ ಸಂಶೋಧನೆಯ ಕಡೆಗೆ ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳಿಗೆ ತಮ್ಮ ಕೆಲಸದ ಅವಧಿಯ ಪೂರಾ ಮಾರ್ಗದರ್ಶನ ನೀಡುತ್ತಿರುತ್ತಾರೆ.

**ವಿದ್ಯಾರ್ಥಿ ಸಂಶೋಧನೆಗಳು (೨೦೧೭–೧೮)**

**ಈ. ವಿಭಾಗದಲ್ಲಿ ಲಭ್ಯವಿರುವ ಉಪಕರಣಗಳು**

**ಉಪಕರಣಗಳು**

- ಉಚ್ಚಾರಣಾ ಸಂಬಂಧಿತ ಗಾಳಿಯ ಒತ್ತಡ ಮಾಪನ ಮಾಡುವ ಯಂತ್ರ (ಎಪಿಎಂ ೩೨೦೦)
- ಕೃತಕ ಧ್ವನಿ ಪೆಟ್ಟಿಗೆ
- ವಿಳಂಬಿತ ಶ್ರವಣ ಪ್ರತಿಕ್ರಿಯೆ ವ್ಯವಸ್ಥೆ (ಡಿಎಎಫ್ – ೧೦೦೦)
- ಮಾತಿಗೆ ಸಂಬಂಧಿತ ಸೌಕರ್ಯಗಾರ (೩೫೦೦)
- ನುಂಗುವುದಕ್ಕೆ ಸಂಬಂಧಿತ ಬದಲಾವಣೆಗಳನ್ನು ಮಾಪನ ಮಾಡುವ ಯಂತ್ರ
- ಮೂಲ ಧ್ವನಿಯ ತರಂಗ ಸೂಚಕ
- ನಾಲಿಗೆ ಸಂಬಂಧಿತ ಒತ್ತಡಗಳನ್ನು ಮಾಪನ ಮಾಡುವ ಯಂತ್ರ (ಖಔಖು)
- ಶ್ವಾಸಕೋಶದಲ್ಲಿನ ಗಾಳಿಯ ಒತ್ತಡ ಮಾಪನ ಮಾಡುವ ಯಂತ್ರ
- ಸೂಚಕ
- ಉಚ್ಚಾರಣಾ ಹಾಗೂ ಉಸಿರಾಟದ ಗಾಳಿಯ ಮಾಪನ

**ಇತರೆ ಉಪಕರಣಗಳು**

- ಸ್ನಾಯುಗಳ ಚಾಲನಾ ಸಾಮರ್ಥ್ಯ ಮಾಪನ (೧೬ ಚಾನಲ್)
- ಗಾಳಿಯ ಚಾಲನಾ ಪ್ರಮುಖ ಸಾಮರ್ಥ್ಯ ಮಾಪನ
- ಮಾತಿನ ಚಾಲನಾ ಚಟುವಟಿಕೆಗಳನ್ನು ಮಾಪನ ಮಾಡುವ ಯಂತ್ರ ೦ಉ೫೦೧
- ಮಾತಿನ ಚಾಲನಾ ಚಟುವಟಿಕೆಗಳನ್ನು ಮಾಪನ ಮಾಡುವ ಯಂತ್ರ ೦ಉ೫೦೦
- ಗಣಕೀಕೃತ ಮಾತಿನ ಲ್ಯಾಬ್
- ನುಂಗುವ ಕ್ರಿಯೆ ಮಾಪನ (ಆಂಖು)
- ನುಂಗುವ ಕ್ರಿಯೆ ಮಾಪನ ಮಾಡುವ ಯಂತ್ರ
- ಉಚ್ಚಾರಣಾ ಸಂಬಂಧಿತ ಗಾಳಿಯ ಒತ್ತಡ ಮಾಪನ ಮಾಡುವ ಉಪಕರಣ
- ಸೀಳು ತುಟಿ / ಅಂಗುಳು ತೊಂದರೆವುಳ್ಳವರಲ್ಲಿ ಅನುನಾಸಿಕತೆ ಮಾಪನ ಮಾಡುವ ಯಂತ್ರ – ೬ಳ೫೦
- ನುಂಗುವ ಕ್ರಿಯೆಯಲ್ಲಿನ ಮಾಂಸಖಂಡಗಳ ಚಲನೆ ಮಾಪನ ಮಾಡುವ ಯಂತ್ರ
- ಉಚ್ಚಾರಣಾ ಸಂಬಂಧಿತ ಗಾಳಿಯ ಮಾಪನ
- ಎಸ್ಎಂ– ಕಣ್ಣುಗಳ ಚಾಲನೆ ಮಾಪನ ಮಾಡುವ ಯಂತ್ರ
- ಸ್ಪೈರೋಮೀಟರ್ – ೭೦೨
- ಕಣ್ಣುಗಳ ಚಾಲನೆ ಮಾಪನ ಮಾಡುವ ಯಂತ್ರ (ಟೋಬಿ ಪಿಜಿ  ಐ ಗೊ)
- ವೇವ್ ಸ್ಪೀಚ್ ರಿಸರ್ಚ್ ಸಿಸ್ಟಮ್

**ಲಭ್ಯವಿರುವ ಸಾಫ್ಟ್ ವೇರ್ ಗಳು**

- ಮೋಟಾರ್ ಸ್ಪೀಚ್ ಪ್ರೊಫೈಲ್ (ಎಂಎಸ್ಪಿ) (೫೧ಳ೧)
- ಮಲ್ಟಿಡೈಮೆನ್ಷನಲ್ ವಾಯ್ಸ್ ಪ್ರೊಫೈಲ್ (ಎಂಡಿವಿಪಿ) (೫೧೦೫)
- ವಾಯ್ಸ್ ರೇಂಜ್ ಪ್ರೊಫೈಲ್ (ವಿಆರ್‌ಪಿ)
- ಎಲೆಕ್ಟ್ರೋಗ್ಲೋಟೋಗ್ರಾಫ್ (ಇಜಿಜಿ)
- ಅಪ್ಲೈಡ್ ಸ್ಪೀಚ್ ಸೈನ್ಸ್ ಫಾರ್ ಡೈಸರ್ಥ್ರಿಯಾಸ್ (೫೧೫೩)
- ಸ್ಟಿಮ್ಯುಲೇಷನ್ ಆಫ್ ರೆಸ್ಪಿರೇಷನ್, ಫೋನೇಷನ್ ಮತ್ತು ಪ್ರೊಸೋಡಿ (೫೧೫೨)
- ಸ್ಪೀಚ್ ಅರ್ಟಿಕ್ಯುಲೇಷನ್: ಅನಿಮೇಷನ್ ಆಫ್ ಮಸಲ್ ವೆಕ್ಟರ್ಸ್ (೫೧೫ಳ)
- ಅಪ್ಲೈಡ್ ಸ್ಪೀಚ್ ಸೈನ್ಸ್  ಫಾರ್ ವಾಯ್ಸ್ ಅಂಡ್ ರೆಸೊನ್ನಾನ್ ಡಿಸಾರ್ಡರ್ಸ್(೫೧೫೬)
- ನ್ಯೂರೋಸೈನ್ಸ್ ಫಾರ್ ಹ್ಯೂಮನ್ ಕಮ್ಯುನಿಕೇಷನ್ (೫೧೫೫)
- ನಾಸಾಲಿಟಿ ವಿಷ್ಯುಲೈಜೇಷನ್ (ಎನ್ವಿಎಸ್)

- ನಸಲ್ ವೀವ್
- ಲಿಂಗ್ ವೇವ್ಸ್ (ಆವೃತ್ತಿ ೪೦೦೦೦)
- ಲೆಕ್ಸಿಕಾನ್ (ಆವೃತ್ತಿ ೩೦೦೦೦)
- ರಿಯಾಕ್ಟ್
- ವೋಕ್ಸ್ ಗೇಮ್ಸ್ (೩೦೫೦೦)
- ಇ–ಪ್ರೈಮ್

**ವಿಭಾಗದಲ್ಲಿ ಲಭ್ಯವಿರುವ ಸೌಲಭ್ಯಗಳು**

**ನುಂಗುವಿಕೆಯ ತೊಂದರೆಗಳ ಪ್ರಯೋಗಾಲಯ:**

ನುಂಗುವ ಕ್ರಿಯೆಯಲ್ಲಿ ಸಮಸ್ಯೆ ಹೊಂದಿರುವ ವ್ಯಕ್ತಿಗಳ ಚಿಕಿತ್ಸೆ ಮತ್ತು ಸಮಸ್ಯೆಯನ್ನು ನಿಭಾಯಿಸಲು "ನುಂಗುವಿಕೆಯ ಪ್ರಯೋಗಾಲಯ'ವನ್ನು ಪ್ರಾರಂಭಿಸಿದೆ. ಈ ಪ್ರಯೋಗಾಲಯದಲ್ಲಿ ಗ್ರಾಹಕರ ಸಮಗ್ರ ಪುನರ್ವಸತಿ ಸೇವೆಗಳಿಗಾಗಿ ಕಿವಿ, ಮೂಗು, ಗಂಟಲು , ವಾಕ್–ಭಾಷಾ ತಜ್ಞರು ಮತ್ತು ನರ್ಸ್ ಮುಂತಾದವರು ಇರುತ್ತಾರೆ. ಪ್ರಯೋಗಾಲಯದಲ್ಲಿ ವಾಕ್–ಭಾಷಾ ದೋಷದ ವಿದ್ಯಾರ್ಥಿಗಳಿಗೆ ಹಲವು ಶ್ರವಣ–ದೃಶ್ಯ ಕಲಿಕೆಯ ಸಾಮಗ್ರಿಗಳು ಲಭ್ಯವಿದೆ.

ನುಂಗುವ ತೊಂದರೆಗಳ ಪ್ರಯೋಗಾಲಯವು ವ್ಯಕ್ತಿಗಳ ತೊಂದರೆಯ ತಪಾಸಣೆ ಮತ್ತು ನಿರ್ವಹಣೆಗಾಗಿ ವಿಶೇಷ ಪರಿಕರಗಳನ್ನು ಹೊಂದಿದೆ. ಈ ಪ್ರಯೋಗಾಲಯವು ನುಂಗುವ ತೊಂದರೆಗಳ ಬಗ್ಗೆ ಸಂಶೋಧನೆ ನಡೆಸಲು ವಿದ್ಯಾರ್ಥಿಗಳನ್ನು ಮತ್ತು ಸಂಶೋಧಕರನ್ನು ಪ್ರೋತ್ಸಾಹಿಸುತ್ತದೆ. ವಿದ್ಯಾರ್ಥಿಗಳಿಗೆ ಕಲಿಕೆ ಮತ್ತು ಅಭ್ಯಾಸಕ್ಕಾಗಿ ವಿವಿಧ ಶಬ್ದ–ದೃಶ್ಯ ಸಾಮಗ್ರಿಗಳು ಮತ್ತು ಪರಾಮರ್ಶನೆಗಾಗಿ ಮಾರ್ಗದರ್ಶಿಗಳು ಲಭ್ಯವಿದೆ.

# ಸಂವಹನ ನ್ಯೂನತೆ ತಡೆಗಟ್ಟುವಿಕೆ ವಿಭಾಗ

ಸಂವಹನ ತೊಂದರೆಗಳ ತಡೆಗಟ್ಟುವಿಕೆ ವಿಭಾಗವು (ಪಿಓಸಿಡಿ) ೨೦೦೮ ರಲ್ಲಿ ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆ, ಮೈಸೂರು ಆವರಣದಲ್ಲಿ ಪ್ರಾರಂಭವಾಯಿತು. ಇದು ಜನರನ್ನು ನೇರವಾಗಿ ತಲುಪಲು ಮತ್ತು ವಿವಿಧ ತೊಂದರೆಗಳ ನಿವಾರಣೆಗೆ ಅನುಕೂಲ ಕಲ್ಪಿಸುತ್ತದೆ. ಸಂವಹನ ತೊಂದರೆಯುಳ್ಳ ವ್ಯಕ್ತಿಗಳ ಸಂವಹನ ತೊಂದರೆಗಳನ್ನು ತಡೆಗಟ್ಟುವುದು, ಶೀಘ್ರವಾಗಿ ಗುರುತಿಸುವುದು ಮತ್ತು ನಿರ್ವಹಿಸುವುದರ ಕುರಿತು ಜಾಗೃತಿ ಮೂಡಿಸುವುದು ವಿಭಾಗದ ಪ್ರಮುಖ ಕಾರ್ಯವಾಗಿದೆ.

**ವಿಭಾಗದ ಉದ್ದೇಶಗಳು**

ಪ್ರಾಥಮಿಕ ಹಂತದ ತಡೆಗಟ್ಟುವಿಕೆ – ಸೂಕ್ಷ್ಮ ಸಂವೇದನಾ ಕಾರ್ಯಕ್ರಮಗಳ ಮೂಲಕ ಸಾರ್ವಜನಿಕರಿಗೆ ಶಿಕ್ಷಣ ನೀಡುವುದು, ವಿವಿಧ ಗುರಿ ಗುಂಪುಗಳ ನಡುವೆ ಸಂವಹನ ತೊಂದರೆಗಳ ಬಗ್ಗೆ ಜಾಗೃತಿ ಮೂಡಿಸುವುದು.

ದ್ವಿತೀಯ ಹಂತದ ತಡೆಗಟ್ಟುವಿಕೆ – ವಿವಿಧ ಆರಂಭಿಕ ತಪಾಸಣೆ ಮತ್ತು ರೋಗನಿರ್ಣಯ ಪ್ರಕ್ರಿಯೆಗಳ ಮೂಲಕ ಸಂವಹನ ತೊಂದರೆಗಳನ್ನು ಆರಂಭದಲ್ಲಿಯೇ ಗುರುತಿಸುವುದು ಮತ್ತು ತಪಾಸಣೆ ನಡೆಸುವುದು

ತೃತೀಯ ಹಂತದ ತಡೆಗಟ್ಟುವಿಕೆ – ಆರಂಭಿಕ ಪುನರ್ವಸತಿ ಮತ್ತು ಸಂವಹನ ತೊಂದರೆಗಳನ್ನು ನಿಭಾಯಿಸುವುದು

ಮಾನವ ಸಂಪನ್ಮೂಲ ಅಭಿವೃದ್ಧಿ – ಸಂವಹನ ತೊಂದರೆಗಳ ತಡೆಗಟ್ಟುವಿಕೆ, ಪ್ರಾರಂಭಿಕ ಗುರುತಿಸುವಿಕೆ ಮತ್ತು ಪುನರ್ವಸತಿ ಕಾರ್ಯದಲ್ಲಿ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಂಸ್ಥೆಯ ಆವರಣದಿಂದಾಚೆ ತರಬೇತಿ ನೀಡುವುದು

**ಮೂಲಭೂತ ಸೌಕರ್ಯಗಳು**

ವಿಭಾಗವು ಸಂವಹನ ತೊಂದರೆಗಳ ತಡೆಗಟ್ಟುವಿಕೆ, ಆರಂಭದಲ್ಲಿಯೇ ಗುರುತಿಸುವ ಮತ್ತು ಪುನರ್ವಸತಿ ಕಾರ್ಯದಲ್ಲಿ ದಕ್ಷ ಮತ್ತು ಗುಣಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸಲು ಅತ್ಯಾಧುನಿಕ ಉಪಕರಣಗಳನ್ನು ಶೋಧನೆ ಮತ್ತು ತಪಾಸಣೆಗೆಂದು ಹೊಂದಿದೆ. ಉಪಕರಣಗಳು ಮತ್ತು ಸಲಕರಣೆಗಳನ್ನು ನವಜಾತ ಶಿಶುಗಳಲ್ಲಿ ತೊಂದರೆಗಳ ಶೋಧನೆ, ಶಾಲೆ, ಕೈಗಾರಿಕೆಗಳಲ್ಲಿ ಕಾರ್ಯ ನಿರ್ವಹಿಸುವ ವ್ಯಕ್ತಿಗಳು ಹಾಗೂ ವೃದ್ಧಾಶ್ರಮಗಳಲ್ಲಿರುವವರ ತೊಂದರೆಗಳ ಪರಿಶೀಲನೆಗಾಗಿ ಬಳಸಲಾಗುತ್ತದೆ.

**ವಿಭಾಗದ ಚಟುವಟಿಕೆಗಳು**

ಚಟುವಟಿಕೆಗಳು ಪ್ರಮುಖವಾಗಿ ಅಖಿಲ ಭಾರತ ವಾಕ್-ಶ್ರವಣ ಸಂಸ್ಥೆ ಮತ್ತು ಅದರ ವಿಸ್ತರಣಾ ಕೇಂದ್ರಗಳಲ್ಲಿ (ಇತರೆ ರಾಜ್ಯಗಳು ಮತ್ತು ಗ್ರಾಮೀಣ ಪ್ರದೇಶಗಳಾದ್ಯಂತ) ಕೇಂದ್ರೀಕೃತವಾಗಿವೆ. ಸಂವಹನ ತೊಂದರೆಗಳ ತಡೆಗಟ್ಟುವಿಕೆ, ಪ್ರಾಥಮಿಕ ಗುರುತಿಸುವಿಕೆ ಮತ್ತು ಪುನರ್ವಸತಿ ಕಾರ್ಯಗಳಿಗೆ ಸೀಮಿತವಾಗಿದೆ.

**ಪ್ರಾಥಮಿಕ ತಡೆಗಟ್ಟುವಿಕೆ – ಸಾರ್ವಜನಿಕ ಶಿಕ್ಷಣ**

ಶ್ರವಣ, ಭಾಷೆ ಮತ್ತು ಮಾತಿನ ತೊಂದರೆಗಳನ್ನು ಹೊಂದಿರುವ ಸಮುದಾಯಕ್ಕೆ ಶಿಕ್ಷಣ ನೀಡುವುದು ಮತ್ತು ಸಮುದಾಯದ ಸಹಾಯವನ್ನು ಇದಕ್ಕೆ ಬಳಸಿಕೊಳ್ಳುವುದು ಪ್ರಮುಖ ಚಟುವಟಿಕೆಗಳಲ್ಲಿ ಒಂದಾಗಿದೆ. ವಿವಿಧ ಸಂವಹನ ತೊಂದರೆಗಳ ಆರಂಭಿಕ ಚಿಹ್ನೆಗಳು ಮತ್ತು ರೋಗಲಕ್ಷಣಗಳ ಬಗ್ಗೆ ಸಾರ್ವಜನಿಕ, ಸಮುದಾಯ, ಆರೋಗ್ಯ ಕಾರ್ಯಕರ್ತರು, ಹೆತ್ತವರು, ಶಿಕ್ಷಕರು ಮತ್ತು ಇತರರಿಗೆ ಶಿಕ್ಷಣ ನೀಡುವ ಮೂಲಕ, ತೊಂದರೆಗಳನ್ನು ಶೀಘ್ರವಾಗಿ ಗುರುತಿಸಿ ಅಥವಾ ಕಾರಣವಾಗುವ ಅಪಾಯಕಾರಿ ಅಂಶಗಳನ್ನು ಗುರುತಿಸಲು ಕೌಶಲಗಳನ್ನು ಅಭಿವೃದ್ಧಿಪಡಿಸುವುದು. ಈ ಎಲ್ಲಾ ಚಟುವಟಿಕೆಗಳು ತೊಂದರೆಗಳನ್ನು ತಡೆಗಟ್ಟುವ ಕಡೆಗೆ ಸಜ್ಜಾಗಿದೆ ಅಥವಾ ತೊಂದರೆಗಳ ಪರಿಣಾಮಗಳನ್ನು ತಡೆಯುತ್ತದೆ ಮತ್ತು ಬೆಳವಣಿಗೆಯನ್ನು ಮತ್ತಷ್ಟು ಹಂತಗಳಲ್ಲಿ ತಡೆಯುತ್ತದೆ. ಸಂವಹನ ತೊಂದರೆಗಳ ತಡೆಗಟ್ಟುವಿಕೆ ಬಗ್ಗೆ ಸಾರ್ವಜನಿಕ ಜಾಗೃತಿಯನ್ನು ಹೆಚ್ಚಿಸಲು ಸಾರ್ವಜನಿಕ ಮತ್ತು ವಿವಿಧ ಉದ್ದೇಶಿತ ಗುಂಪುಗಳ ಶಿಕ್ಷಣಕ್ಕಾಗಿ ಹಲವಾರು ಚಟುವಟಿಕೆಗಳನ್ನು ನಡೆಸಲಾಗುತ್ತದೆ.

ಸಂವಾದಾತ್ಮಕ ಕಾರ್ಯಕ್ರಮಗಳ ಮೂಲಕ ಸಂವಹನ ತೊಂದರೆಗಳು, ಮುಖ್ಯವಾದ ಚಿಹ್ನೆಗಳ ಗುರುತಿಸುವಿಕೆ ಮತ್ತು ತೊಂದರೆಗಳ ರೋಗಲಕ್ಷಣಗಳನ್ನು ತಡೆಗಟ್ಟುವುದು,ಆರೋಗ್ಯಕರ ಜೀವನ ವಿಧಾನಗಳ ಬಗ್ಗೆ ತಿಳುವಳಿಕೆ ನೀಡುವುದು. ಈ ಗುರಿಯನ್ನು ಸಾಧಿಸುವ

ಸಲುವಾಗಿ ಮುದ್ರಣ ಮತ್ತು ಇತರ ರೂಪಗಳಲ್ಲಿ ಶಿಕ್ಷಣ, ದೃಷ್ಟಿಕೋನ ಮತ್ತು ಸಂವೇದನಾ ಕಾರ್ಯಕ್ರಮಗಳನ್ನು ಕೈಗೊಂಡಿದೆ. ವಿವಿಧೋದ್ದೇಶಿತ ಗುಂಪುಗಳಿಗೆ ಉಪನ್ಯಾಸಗಳನ್ನು ಕೈಗೊಳ್ಳಲಾಗುತ್ತದೆ.

**ಚಿಕಿತ್ಸಾ ಸೇವೆಗಳು**

**ದ್ವಿತೀಯಮಟ್ಟದ ತಡೆಗಟ್ಟುವಿಕೆ – ಸಂವಹನ ತೊಂದರೆಗಳಿಗೆ ಸಿಲುಕುವಂತಹ ಅಪಾಯಕಾರಿ ಸಂಗತಿಗಳನ್ನು ಗುರುತಿಸುವುದು**

ನವಜಾತ ಶಿಶುಗಳಲ್ಲಿ ತೊಂದರೆಗಳಿಗಾಗಿ ಶೋಧನೆ ಮಾಡುವುದು, ಮಕ್ಕಳು ಮುಂದೆ ಪರಿಣಾಮಕಾರಿಯಾಗಿ ಸಂವಹಿಸಬಲ್ಲರು ಎಂದು ಖಾತರಿಪಡಿಸುವ ಮೊದಲ ಹಂತವಾಗಿದೆ. ಎಲ್ಲಾ ನವಜಾತ ಶಿಶುಗಳು ಒಂದು ತಿಂಗಳೊಳಗೆ ಸಂವಹನಾ ಶೋಧನಾ ಪರೀಕ್ಷೆಗೆ ಒಳಗಾಗಬೇಕು. ಇದರಿಂದಾಗಿ ಪ್ರಾಥಮಿಕ ಗುರುತಿಸುವಿಕೆ ಮತ್ತು ಪುನರ್ವಸತಿ ಸೇವೆಗಳನ್ನು ಅಪಾಯಕಾರಿ ಅಂಶಗಳ ಗುರುತಿಸುವಿಕೆಯೊಂದಿಗೆ ಕೈಗೊಳ್ಳಬಹುದು. ಇಂತಹ ನವಜಾತ ಶಿಶುಗಳ ಸಂವಹನ ತೊಂದರೆಗಳಿಗಾಗಿ ಶೋಧನ ಪರೀಕ್ಷೆಗಳು ಮೈಸೂರಿನ ೧೯ ಆಸ್ಪತ್ರೆಗಳಲ್ಲಿ, ೬ ವಿಸ್ತರಣಾ ಕೇಂದ್ರಗಳಲ್ಲಿ ೧೨ ನವಜಾತ ಶಿಶು ಪರೀಕ್ಷಾ ಕೇಂದ್ರಗಳಲ್ಲಿ ಲಭ್ಯವಿದೆ.

**ಶಾಲಾ ಮಕ್ಕಳಲ್ಲಿ ಶ್ರವಣಶಕ್ತಿ ಪರೀಕ್ಷೆ:** ಶಾಲಾಪೂರ್ವ, ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಕಲಿಯುವ ಮಕ್ಕಳ ಸಂವಹನ ಶಕ್ತಿ ಬೆಳವಣಿಗೆ ಮತ್ತು ಅವುಗಳ ತೊಂದರೆಗಳನ್ನು ತಡೆಗಟ್ಟುವ ಸಲುವಾಗಿ ಕೈಗೊಳ್ಳಲಾಗಿದೆ. ಶಾಲಾ ಮಕ್ಕಳಲ್ಲಿನ ಜನ್ಮತಃ ಅಥವಾ ನಂತರ ಬಂದಂತಹ ಶ್ರವಣ ದೋಷಗಳು, ಮಾತು–ಭಾಷಾ ದೋಷಗಳು, ಕಲಿಕೆ (ಓದುವ ಮತ್ತು ಬರೆಯುವ) ತೊಂದರೆಗಳು ಹಾಗೂ ಮಾತಿನ ಶಬ್ಧಗಳ ಬೆಳವಣಿಗೆಯಲ್ಲಿ ಉಂಟಾದ ತೊಂದರೆಗಳನ್ನು ಕಂಡು ಹಿಡಿಯುವುದು.

**ಕೈಗಾರಿಕಾ ಕೆಲಸಗಾರರಲ್ಲಿ ಶ್ರವಣಶಕ್ತಿ ಪರೀಕ್ಷೆ:** ನಿಯಮಿತವಾಗಿ ಕೈಗಾರಿಕಾ ಕೆಲಸಗಾರರ ಶ್ರವಣಶಕ್ತಿ ಪರಿಶೀಲನೆ ಮಾಡಲಾಗುತ್ತದೆ. ಶಬ್ದದ ವಾತಾವರಣದಲ್ಲಿ ಕೆಲಸ ಮಾಡುವವರಲ್ಲಿ, ಅತೀಶಬ್ದದ ಕಾರಣ ಶ್ರವಣಶಕ್ತಿ ಕುಂಠಿತವಾಗಬಹುದು. ಅಲ್ಲದೆ, ಶಬ್ದದ ದುಷ್ಪರಿಣಾಮಗಳ ಬಗ್ಗೆ ಕೆಲಸಗಾರರಿಗೂ ಹಾಗೂ ನಿರ್ವಹಣಾ ಸಿಬ್ಬಂದಿಗೂ ಶಿಕ್ಷಣ ನೀಡಬಹುದು. ತಿಳುವಳಿಕೆ ಹಾಗೂ ಸಂವೇದನಾಶೀಲ ಕಾರ್ಯಕ್ರಮಗಳ ಮೂಲಕ ಶ್ರವಣಶಕ್ತಿಯ ಸಂರಕ್ಷಣೆಯ ಬಗ್ಗೆ ಹಾಗೂ ಅದಕ್ಕಾಗಿ ಬಳಸುವ ಸಾಧನಗಳ ಬಗ್ಗೆ, ಶ್ರವಣದೋಷ ಹೊಂದುವ ಅಪಾಯವಿರುವ ಕೆಲಸಗಾರರಿಗೆ ಅನುಸರಣಾ ಪರೀಕ್ಷೆಗಳನ್ನು ನಿಗದಿತ ಸಮಯದಲ್ಲಿ ಮಾಡಬೇಕಾಗುತ್ತದೆ. ಇದಕ್ಕಾಗಿ ವಿಭಾಗದಲ್ಲಿ ಸೇವೆಗಳು ಸದಾ ಲಭ್ಯವಿದೆ.

**ಹಿರಿಯ ನಾಗರೀಕರ ಪರಿಶೀಲನೆ:** ಹಿರಿಯ ನಾಗರೀಕರಲ್ಲಿ ಶ್ರವಣಶಕ್ತಿ, ಆಲೋಚನಾ ಶಕ್ತಿ, ನೆನಪಿನ ಶಕ್ತಿ, ಮಾತು ಮತ್ತು ಭಾಷೆ ವಯಸ್ಸಿನ ಪರಿಣಾಮವಾಗಿ ಕುಂಠಿತಗೊಳ್ಳಬಹುದು. ಇದಲ್ಲದೆ, ಪಾರ್ಶ್ವವಾಯು, ಆಲ್ಜೀಮರ್ ಕಾಯಿಲೆ, ಪಾರ್ಕಿನ್ ಸನ್ ಮುಂತಾದ ಕಾಯಿಲೆಗಳು ಮಾತು, ಭಾಷೆ ಮತ್ತು ಸಂವೇದನಾ ಶಕ್ತಿಯ ಮೇಲೆ ಪರಿಣಾಮ ಬೀರಬಹುದು. ಈ ಕಾರ್ಯಕ್ರಮವನ್ನು ಹಿರಿಯ ನಾಗರೀಕರಿಗೆ ಪರಿಣಾಮಕಾರಿಯಾಗಿ ಕೇಳಿಸಿಕೊಳ್ಳಲು ಮತ್ತು ಸಂಭಾಷಿಸಲು ಕೈಗೊಳ್ಳಲಾಗಿದೆ. ಬಹುವಿಧದ ವೃದ್ಧಾಶ್ರಮಗಳು, ಸಂಘಗಳು ಮತ್ತು ಕ್ಲಬ್ ಗಳನ್ನು ಈ ಸಲುವಾಗಿ ಗುರುತಿಸಲಾಗಿದೆ. ವಿಭಾಗದಿಂದ ಇಂತಹ ಸ್ಥಳಗಳಲ್ಲಿ ಮಾತು ಮತ್ತು ಭಾಷೆಯ ತೊಂದರೆಗಳ ತಪಾಸಣೆ ಮತ್ತು ಚಿಕಿತ್ಸೆ ಅಲ್ಲದೆ ಪಾಕೆಟ್ ಮಾದರಿಯ ಶ್ರವಣೋಪಕರಣಗಳನ್ನು ನೀಡಲಾಗುತ್ತದೆ.

**ಅನುಸರಣಾ ಕಾರ್ಯಕ್ರಮ:** ವಿವಿಧ ಪರಿಶೀಲನಾ ಕಾರ್ಯಕ್ರಮಗಳು ಸತತವಾಗಿ ನಡೆದಾಗ್ಯೂ, ಸಮಗ್ರ ಪರೀಕ್ಷೆಗಳಿಲ್ಲದೆ ರೋಗನಿರ್ಣಯ ಸಾಧ್ಯವಿಲ್ಲ. ಪರಿಶೀಲನೆಗಳ ಮೂಲಕ ಸಂವಹನ ತೊಂದರೆಗಳುಂಟಾಗುವ ಸಂಭವಗಳ ಬಗ್ಗೆ ಅರಿತರೂ, ವಿಭಾಗದ ಉದ್ದೇಶ ಪರಿಪೂರ್ಣವಾಗುವುದಿಲ್ಲ. ಆದಕಾರಣ, ಅಪಾಯಕಾರಿ ಚಿಹ್ನೆಗಳು ಕಂಡುಬರುವ ವ್ಯಕ್ತಿಗಳನ್ನು ಸಂಸ್ಥೆಗೆ ಪೂರ್ಣ ಪರೀಕ್ಷೆಗೆಂದು ಕರೆಯಲಾಗುತ್ತದೆ. ಸೂಚಿತವಾದ ನಿಭಾಯಿಸುವ ವಿಧಾನಗಳ ಬಗ್ಗೆ ಅರಿವು ನೀಡಲಾಗುತ್ತದೆ.

**ಸಂವಹನ ತೊಂದರೆಗಳನ್ನು ಗುರುತಿಸುವ ಶಿಬಿರ:** ಸಂವಹನ ತೊಂದರೆ ಹೊಂದಿರುವ ವ್ಯಕ್ತಿಗಳ ಅಗತ್ಯತೆಗಳನ್ನು ಪೂರೈಸಲು ಕರ್ನಾಟಕ ಮತ್ತು ಇತರ ರಾಜ್ಯಗಳ ವಿವಿಧ ಸ್ಥಳಗಳಲ್ಲಿ ಶಿಬಿರಗಳನ್ನು ನಡೆಸಲಾಗುತ್ತದೆ. ಸರ್ಕಾರೇತರ ಮತ್ತು ರಾಜ್ಯ ಮತ್ತು / ಅಥವಾ ಜಿಲ್ಲೆಯ ಸರ್ಕಾರಿ ಏಜೆನ್ಸಿಗಳು ಪ್ರಾಯೋಜಿಸಿದ ಯಾವುದೇ ಸಂಘಟನೆಯಿಂದ ವಿನಂತಿಯನ್ನು ಗಮನಿಸಿ ಶಿಬಿರಗಳನ್ನು ನಡೆಸಲಾಗುತ್ತದೆ.

**ವಿಸ್ತರಣಾ ಸೇವಾ ಕೇಂದ್ರಗಳು:** ಸಂಸ್ಥೆಯ ಚಟುವಟಿಕೆಗಳು ಮೈಸೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ಸೀಮಿತವಾಗಿಲ್ಲ. ಸಂವಹನ ತೊಂದರೆಗಳಿರುವ ವ್ಯಕ್ತಿಗಳಿಗೆ/ ಪ್ರಾಯೋಗಿಕ ಸೇವೆಗಳ ಸೌಲಭ್ಯಗಳು ಲಭ್ಯವಿರದ ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸಲ್ಪಟ್ಟಿವೆ. ಪ್ರಸಕ್ತ ಸೇವೆಗಳನ್ನು ೦೪ ಗ್ರಾಮೀಣ ಪ್ರದೇಶಗಳಿಗೆ ಪೂರೈಸಲು ಪ್ರಾರಂಭಿಸಲಾಯಿತು. ಸಂವಹನ ತೊಂದರೆ ಇರುವ ವ್ಯಕ್ತಿಗಳಿಗೆ ಪರಿಶೀಲನೆ, ರೋಗನಿರ್ಣಯ ಮತ್ತು ಚಿಕಿತ್ಸಕ ಸೇವೆಗಳಿಗಾಗಿ ಕೇಂದ್ರಗಳು ತಾಲೂಕು ಮಟ್ಟ/ ಪಿ.ಸಿ /ಸಿ.ಸಿಗಳಲ್ಲಿ ಸುಸಜ್ಜಿತವಾದ ಘಟಕವಾಗಿ ಕಾರ್ಯನಿರ್ವಹಿಸುತ್ತಿವೆ. ಇದರ ಮೂಲಕ ಎಲ್ಲಾ ತಪಾಸಣೆ ಮತ್ತು ಶ್ರವಣೋಪಕರಣಗಳ ವಿತರಣೆ ಕಾರ್ಯ ಸಾಗುತ್ತಿದೆ.

**ಮೈಸೂರು ಜಿಲ್ಲೆ ಮಂಡ್ಯ ಜಿಲ್ಲೆ ಶಿವಮೊಗ್ಗ ಜಿಲ್ಲೆ ಹೆಗ್ಗಡದೇವನ ಕೋಟೆ ಜಿಲ್ಲೆ ಗುಲ್ಬರ್ಗಾ ಜಿಲ್ಲೆ**

| **ಮೈಸೂರು ಜಿಲ್ಲೆ** | **ಮಂಡ್ಯ ಜಿಲ್ಲೆ** | **ಶಿವಮೊಗ್ಗ ಜಿಲ್ಲೆ** | **ಹೆಗ್ಗಡದೇವನ ಕೋಟೆ ಜಿಲ್ಲೆ** | **ಗುಲ್ಬರ್ಗಾ ಜಿಲ್ಲೆ** |
|---|---|---|---|---|
| **ಸಮುದಾಯ ಆರೋಗ್ಯ ಕೇಂದ್ರ, ಹುಲ್ಲಹಳ್ಳಿ, ನಂಜನಗೂಡು ತಾಲ್ಲೂಕು, ಮೈಸೂರು – 571314** | **ಪ್ರಾಥಮಿಕ ಆರೋಗ್ಯ ಕೇಂದ್ರ, ಅಕ್ಕಿಹೆಬ್ಬಾಳು, ಕೆ.ಆರ್. ಪೇಟೆ ತಾಲ್ಲೂಕು, ಮಂಡ್ಯ – 571 429** | **ಉಪವಿಭಾಗೀಯ (ತಾಲ್ಲೂಕು) ಆಸ್ಪತ್ರೆ, ಸಾಗರ ತಾಲ್ಲೂಕು, ಶಿವಮೊಗ್ಗ – 577 401** | **ಸ್ವಾಮಿ ವಿವೇಕಾನಂದ ಮೆಮೊರಿಯಲ್ ಆಸ್ಪತ್ರೆ (SVYM), ಸರಗೂರು, ಹೆಚ್.ಡಿ. ಕೋಟೆ ತಾಲ್ಲೂಕು, ಮೈಸೂರು – 571 121** | **ಗುಲ್ಬರ್ಗಾ ವೈದ್ಯಕೀಯ ವಿಜ್ಞಾನ ಸಂಸ್ಥೆ/ ಜಿಲ್ಲಾ ಆಸ್ಪತ್ರೆ. ಸೇಡಂ ರಸ್ತೆ, ಕಲ್ಬುರ್ಗಿ – 585105** |

**ತೃತೀಯ ಹಂತದ ತಡೆಗಟ್ಟುವಿಕೆ –** ಸಂವಹನ ತೊಂದರೆ ಹೊಂದಿರುವ ವ್ಯಕ್ತಿಗಳಿಗೆ ಪುನರ್ವಸತಿಯು ತೃತೀಯ ತಡೆಗಟ್ಟುವಿಕೆಯ ಒಂದು ಅಂಗ. ವಿವಿಧ ಸಂವಹನ ತೊಂದರೆಗಳನ್ನು ಹೊಂದಿರುವ ವ್ಯಕ್ತಿಗಳ ಜೀವನದ ಗುಣಮಟ್ಟವನ್ನು ಸುಧಾರಿಸುವುದು, ತಪಾಸಣೆ ಮತ್ತು ರೋಗನಿರ್ಣಯ ಮಾಡುವುದು, ಸಾಧ್ಯವಿರುವೆಡೆಯಲ್ಲಾ ಕಾರಣವನ್ನು ನಿಯಂತ್ರಣ ಮಾಡುವುದು, ವ್ಯಕ್ತಿಯ ಸಾಮಾಜಿಕ, ಭಾವನಾತ್ಮಕ, ಬೌದ್ಧಿಕ ಸ್ಥಿತಿಯ ಮೇಲೆ ಸಂವಹನ ತೊಂದರೆಗಳ ಪ್ರತಿಕೂಲ ಪರಿಣಾಮವನ್ನು ತಡೆಯಲು ಪುನರ್ವಸತಿ ಸೇವೆಗಳನ್ನು **ಒದಗಿಸುತ್ತದೆ.** ಕೆಳಗಿನ

ಸೇವಾ ಕೇಂದ್ರಗಳಲ್ಲಿ ಪುನರ್ವಸತಿ ಸೇವೆಗಳನ್ನು ಒದಗಿಸಲಾಗಿದೆ. ಕಿವಿ, ಮೂಗು ಮತ್ತು ಗಂಟಲು ಸಂಬಂಧಿತ ತೊಂದರೆ/ ವೈದ್ಯಕೀಯ ಚಿಕಿತ್ಸೆ, ಎಡಿಐಪಿ ಯೋಜನೆಯಡಿ ಉಚಿತ ಶ್ರವಣ ಸಾಧನಗಳ ವಿತರಣೆ, ಮಾತು ಮತ್ತು ಭಾಷಾ ಚಿಕಿತ್ಸೆಗಳನ್ನು ಒದಗಿಸುತ್ತಾರೆ.

**ಮಾನವ ಸಂಪನ್ಮೂಲ ಅಭಿವೃದ್ಧಿ**

ಶ್ರವಣ ಮತ್ತು ವಾಕ್ ಕ್ಷೇತ್ರದಲ್ಲಿ ತಮ್ಮ ಪದವಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳಲ್ಲಿ ಕಲಿಯುವ ವಿದ್ಯಾರ್ಥಿಗಳು ಆಸ್ಪತ್ರೆಗಳು, ಶಾಲೆಗಳು, ಕೈಗಾರಿಕೆಗಳು ಮತ್ತು ವೃದ್ಧಾಶ್ರಮಗಳಲ್ಲಿ ವಿಭಿನ್ನ ವಯೋಮಾನ ವ್ಯಕ್ತಿಗಳಿಗೆ ತಪಾಸಣಾ ಹಾಗೂ ಚಿಕಿತ್ಸಕ ಸೇವೆಗಳನ್ನು ನೀಡುತ್ತಾರೆ. ಇತರ ಸಂಸ್ಥೆಗಳಿಂದ ಬರುವ ವಿದ್ಯಾರ್ಥಿಗಳೂ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಾರೆ.

**ಸಂಶೋಧನೆ**

ವಿಭಾಗದಲ್ಲಿ ಸಾಂಕ್ರಾಮಿಕ ಶಾಸ್ತ್ರ ಘಟಕವಿದೆ. ಸಂವಹನ ತೊಂದರೆಗಳ ಕ್ಷೇತ್ರದಲ್ಲಿ ಸಂಶೋಧನೆ ಉತ್ತೇಜಿಸಲು ಮತ್ತು ವಿವಿಧ ಸಂವಹನ ತೊಂದರೆಗಳ ಕೇಂದ್ರೀಕೃತ ದತ್ತಾಂಶಕೋಶವನ್ನು ಸ್ಥಾಪಿಸಲು ಈ ಘಟಕವನ್ನು ಪ್ರಾರಂಭಿಸಲಾಗಿದೆ

**ಪ್ರಕಟಣೆಗಳು ಮತ್ತು ಪ್ರಸ್ತುತಿಗಳು**

ವೈಜ್ಞಾನಿಕ ಸಂಶೋಧನಾ ಪ್ರಸ್ತುತಿಗಳು ಮತ್ತು ಪ್ರೊಸೀಡಿಂಗ್ಸ್ – ರಾಷ್ಟ್ರೀಯ

ಪ್ರವೀಣ್ ಕೆ, ಸ್ವಪ್ನಾ ಎನ್., ಅರುಣ್ ರಾಜ್ ಕೆ., ದೇವಮಾ ವಿ., ಮುಖೇಶ್ ಕೆ., ವಸಂತ ಲಕ್ಷ್ಮಿ ಎಂ.ಎಸ್. ಮತ್ತು ಸಾವಿತ್ರಿ, ಎಸ್.ಆರ್. (೨೦೧೮)ನವಜಾತಶಿಶುಗಳ ಶ್ರವಣ ಪರಿಶೀಲನೆಯಲ್ಲಿ ಪ್ರಾಥಮಿಕ ಅಂಶಗಳ ಅಪಾಯದ ಅಂಶಗಳ ಪ್ರಾತಿನಿಧ್ಯ. ಬಿಶಾಕಾನ್, ಪಾಟ್ನಾ, ಬಿಹಾರದಲ್ಲಿ ೧೦ ನೇ –೧೧ ನೇ ಮಾರ್ಚ್ ೨೦೧೮ ರಂದು ಪ್ರಸ್ತುತಪಡಿಸಲಾಗಿದೆ.

**ಸಂಪರ್ಕಿಸಿ**

**ಡಾ. ಎನ್. ಶ್ರೀದೇವಿ**
ಪ್ರಾಧ್ಯಾಪಕರು, ಮತ್ತು ಮುಖ್ಯಸ್ಥರು
ಸಂವಹನ ನ್ಯೂನತೆ ತಡೆಗಟ್ಟುವಿಕೆ ವಿಭಾಗ
ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು ಕರ್ನಾಟಕ ರಾಜ್ಯ, ಭಾರತ
ದೂರವಾಣಿ: 91-0821-2502-263 / 312 ಫ್ಯಾಕ್ಸ್: 91-0821-25101515
ಇಮೇಲ್: pocdpocd1@gmail.com
ಕಾರ್ಯನಿರ್ವಹಿಸುವ ಅವಧಿ: 09:00 ರಿಂದ 5:30 ಕ್ಕೆ
ಕಾರ್ಯನಿರ್ವಹಿಸುವ ದಿನಗಳು: ಸೋಮವಾರದಿಂದ ಶುಕ್ರವಾರ (ಕೇಂದ್ರ ಸರ್ಕಾರ ರಜಾದಿನಗಳನ್ನು ಹೊರತುಪಡಿಸಿ)

## ಸಂವಹನ ನ್ಯೂನತೆಯ ವ್ಯಕ್ತಿಗಳಿಗೆ ಟೆಲಿ ಕೇಂದ್ರ

**ಉದ್ದೇಶಗಳು**

ಕೇಂದ್ರವು ಸಂವಹನ ನ್ಯೂನತೆಯುಳ್ಳ ವ್ಯಕ್ತಿಗಳಿಗೆ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ (ಐಸಿಟಿ) ದೂರ ಸಂಪರ್ಕ ಮಾಧ್ಯಮವನ್ನು ಬಳಸಿಕೊಂಡು ನ್ಯೂನತೆಯ ತಪಾಸಣೆ ನಡೆಸಿ ಪುನರ್ವಸತಿ ಸೇವೆಗಳನ್ನು ಒದಗಿಸುವ ಕಾರ್ಯದಲ್ಲಿ ನಿರತವಾಗಿದೆ.

## ಕೇಂದ್ರದ ಉದ್ದೇಶ/ಗುರಿಗಳು

- ಸಂವಹನ ನ್ಯೂನತೆಯುಳ್ಳವರಿಗೆ ದೂರಸಂಪರ್ಕದ ಮಾಧ್ಯಮದಲ್ಲಿ ನ್ಯೂನತೆಯ ತಪಾಸಣೆ ಮತ್ತು ಚಿಕಿತ್ಸೆ ತರಬೇತಿ, ಸಮಾಲೋಚನೆ, ಸೇವೆ, ತಿಳುವಳಿಕೆ ನೀಡುವುದು, ಪೋಷಕರಿಗೆ ಮಾರ್ಗದರ್ಶನ ಒದಗಿಸುವುದು
- ಸಂವಹನ ನ್ಯೂನತೆಯುಳ್ಳ ವ್ಯಕ್ತಿಗಳಿಗೆ ದೂರಸಂಪರ್ಕ ಮಾಧ್ಯಮದ ಮೂಲಕ ತರಬೇತಿಗಾಗಿ (ಮುದ್ರಣ ಮತ್ತು ಈ–ಮಾಧ್ಯಮದಲ್ಲಿ) ಆಂಗ್ಲ ಭಾಷೆ ಮತ್ತು ಇತರೆ ಭಾರತೀಯ ಭಾಷೆಗಳಲ್ಲಿ ಸಂಪನ್ಮೂಲ ಅಭಿವೃದ್ಧಿಗೊಳಿಸುವುದು
- ಸಂವಹನ ನ್ಯೂನತೆಯುಳ್ಳ ವ್ಯಕ್ತಿಗಳಿಗೆ ಶೈಕ್ಷಣಿಕ ಮಾರ್ಗದರ್ಶನ ನೀಡುವುದು
- ಸಂವಹನ ನ್ಯೂನತೆಯಿರುವ ಹಿರಿಯ ನಾಗರೀಕರಿಗೆ ಸಹಾಯವಾಣಿ ಸೇವೆ ಒದಗಿಸುವುದು

## ಚಟುವಟಿಕೆಗಳು

**ದೂರಸಂಪರ್ಕ ಮಾಧ್ಯಮದ ಮೂಲಕ ತಿಳುವಳಿಕೆ ಕಾರ್ಯಕ್ರಮಗಳು:**

- 'ವಾಕ್ ಪಠಣ ತರಬೇತಿ' (Speech Reading) ಕುರಿತು ವಯಸ್ಕರಿಗೆ ೩೦.೦೩.೨೦೧೭ ರಂದು ತಿಳುವಳಿಕೆ ಕಾರ್ಯಕ್ರಮ
- 'ವಾಕ್ ಪಠಣಕ್ಕೆ ಚಟುವಟಿಕೆಗಳು' ಕುರಿತು ಮಕ್ಕಳಿಗೆ ೦೬.೦೪.೨೦೧೭ ರಂದು ತಿಳುವಳಿಕೆ ಕಾರ್ಯಕ್ರಮ
- ಮಿಥ್ಯಾ ವಿಚಾರ ಸಂಕಿರಣಗಳು (Virtual seminars)
- 'ಸಂವಹನ ನ್ಯೂನತೆಗಳ ಪುನರ್ವಸತಿಗಾಗಿ ಅಪ್ಲಿಕೇಶನ್ ಗಳು' ವಿಷಯದ ಕುರಿತು ೧೫.೦೩.೨೦೧೭ ರಂದು ವಿಚಾರ ಸಂಕಿರಣ
- 'ವಾಕ್–ಭಾಷೆಯಲ್ಲಿ ದೂರಸಂಪರ್ಕ ಮಾಧ್ಯಮದ ಬಳಕೆಯ ಮಾರ್ಗದರ್ಶನ' ವಿಷಯದ ಕುರಿತು ೧೨.೦೭.೨೦೧೭ ರಂದು ವಿಚಾರ ಸಂಕಿರಣ

## ಸೇವೆಗಳು

ಕೇಂದ್ರವು ಸಂವಹನ ನ್ಯೂನತೆಯುಳ್ಳ ವ್ಯಕ್ತಿಗಳಿಗೆ ದೂರಸಂಪರ್ಕ ಮಾಧ್ಯಮದ ವಿಡಿಯೋ ಕಾನ್ಫರೆನ್ಸಿಂಗ್ ವ್ಯವಸ್ಥೆಯ ಮೂಲಕ ತಪಾಸಣೆ ಮತ್ತು ಚಿಕಿತ್ಸಾ ಸೇವೆಗಳನ್ನು (ತರಬೇತಿ, ಸಮಾಲೋಚನೆ, ಮತ್ತು ಪೋಷಕರಿಗೆ ಮಾರ್ಗದರ್ಶನ) ಒದಗಿಸುತ್ತದೆ. ಕೇಂದ್ರವು ರಾಷ್ಟ್ರದ ಪ್ರಮುಖ ೧೧ ಆಸ್ಪತ್ರೆಗಳಲ್ಲಿ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ http://aiishtcpd.com/en/centers.html ಜಾಲತಾಣದಲ್ಲಿ ನೀಡಲಾಗಿರುವ ವೇಳಾಪಟ್ಟಿ ಪ್ರಕಾರ ಸೇವೆಗಳನ್ನು ಒದಗಿಸುತ್ತದೆ. ಮಾತ್ರವಲ್ಲದೆ, ಮಾಹಿತಿ ಮತ್ತು ತಂತ್ರಜ್ಞಾನದ ವಿವಿಧ ಮಾಧ್ಯಮಗಳನ್ನು ಬಳಸಿಕೊಂಡು ಗ್ರಾಹಕರ ಮನೆಬಾಗಿಲಿಗೇ ಸೇವೆಗಳನ್ನು ನೀಡುತ್ತದೆ.

ಕೇಂದ್ರವು ತನ್ನ ೧೧ ವಿಡಿಯೋ ಕಾನ್ಫರೆನ್ಸಿಂಗ್ ಕೇಂದ್ರಗಳ ಮೂಲಕ ಸಂವಹನ ನ್ಯೂನತೆಯುಳ್ಳ ವ್ಯಕ್ತಿಗಳು, ಅವರ ಪೋಷಕರು ಮತ್ತು ವೃತ್ತಿಪರರಿಗೆ ಸಂವಹನ ನ್ಯೂನತೆಯ ವಿವಿಧ ವಿಷಯಗಳನ್ನು ಕುರಿತು ದೂರಸಂಪರ್ಕ ಮಾಧ್ಯಮದ ಮೂಲಕ ತಿಳುವಳಿಕೆ ನೀಡುತ್ತದೆ.

ಸಂವಹನ ನ್ಯೂನತೆಯುಳ್ಳ ಮಕ್ಕಳಿಗೆ ವಾಕ್–ಶ್ರವಣ ಮತ್ತು ಭಾಷೆಯ ತರಬೇತಿ ಎಷ್ಟು ಮುಖ್ಯವೋ ಶೈಕ್ಷಣಿಕ ತರಬೇತಿಯೂ ಅಷ್ಟೇ ಅಗತ್ಯವಾದದ್ದು. ಸಂವಹನ ನ್ಯೂನತೆಯುಳ್ಳ ಮಕ್ಕಳು ಶಾಲಾ ಶಿಕ್ಷಣ ಪಡೆಯುವ ಮುನ್ನ ಹಲವು ಶಾಲಾ ಪೂರ್ವ ಕೌಶಲ್ಯಗಳನ್ನು ಹೊಂದಿರಬೇಕಾಗುತ್ತದೆ. ಮಗುವಿನಲ್ಲಿ ಈ ಕೌಶಲ್ಯಗಳನ್ನು ಬೆಳೆಸಲು ಕೇಂದ್ರವು ಸೂಕ್ತ ತರಬೇತಿ ನೀಡುತ್ತದೆ. ಕೇಂದ್ರದ ಶ್ರವಣ ಹಾಗೂ

ವಾಕ್–ಭಾಷಾ ತಜ್ಞರು ಮಗುವಿನ ವಾಕ್–ಭಾಷಾ ಅಗತ್ಯಗಳನ್ನು ಗಮನಿಸಿ ತರಬೇತಿ ನೀಡುತ್ತಾರೆ. ಜೊತೆಗೆ, ಮಗುವಿನ ಶಾಲಾ ಕಲಿಕೆಯಲ್ಲೂ ಸೂಕ್ತ ಮಾರ್ಗದರ್ಶನ ನೀಡುವುದರ ಮೂಲಕ ಮಗುವಿನ ಶಾಲಾ ಪ್ರಗತಿಗೂ ಸಹ ಗಮನ ನೀಡುತ್ತಾರೆ. ಈ ತೊಂದರೆಗಳು ಓದುವ/ ಬರೆಯುವ ಅಥವಾ ಗಣಿತ ವಿಷಯದಲ್ಲಿ ಇರಬಹುದು. ಮಾರ್ಗದರ್ಶನ ಸೇವೆಯು ಪ್ರತಿ ಶುಕ್ರವಾರ ಬೆಳಿಗ್ಗೆ ೦೯.೦೦ ರಿಂದ ಸಂಜೆ ೦೫.೩೦ ರವರೆಗೆ ಲಭ್ಯವಿರುತ್ತದೆ. ಈ ಸೇವೆಯನ್ನು ಪಡೆಯಲು aiishtelecenter@gmail.com ಗೆ ಇ–ಮೇಲ್ ಮಾಡಿ ಸಮಯ ನಿಗದಿಪಡಿಸಿಕೊಳ್ಳಬಹುದು.

ಕೇಂದ್ರವು ಶ್ರವಣದೋಷವುಳ್ಳ ಮಕ್ಕಳ ಪೋಷಕರಿಗೆ ಹಲವು ಪುಸ್ತಕಗಳನ್ನು ಪ್ರಕಟಿಸಿದೆ. 'ನಿಮ್ಮ ಮಗುವಿನ ತರಬೇತಿ' ಶೀರ್ಷಿಕೆಯಡಿ ಒಟ್ಟು ಐದು ಹಂತಗಳಲ್ಲಿ ಕನ್ನಡ, ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳಲ್ಲಿ ಲಭ್ಯವಿದೆ. ಇದರೊಂದಿಗೆ, 'ನಿಮ್ಮ ಮಗುವಿನ ಗಮನ ಮತ್ತು ಏಕಾಗ್ರತೆ' ಮತ್ತು 'ಶಾಲಾ–ಪೂರ್ವ ಕೌಶಲ್ಯಗಳು' ಶೀರ್ಷಿಕೆಯ ಪುಸ್ತಕಗಳು ಆಂಗ್ಲ ಹಾಗೂ ಹಿಂದಿ ಭಾಷೆಗಳಲ್ಲಿ ಲಭ್ಯವಿವೆ. ಶ್ರವಣದೋಷವುಳ್ಳ ಮಕ್ಕಳಿಗೆ ಮನೆಯ ಸರಳ ಚಟುವಟಿಕೆಗಳ ಮೂಲಕ ಮನೆಯಲ್ಲೇ ಹೇಗೆ ವಾಕ್–ಭಾಷಾ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಬಹುದು ಎಂಬುದರ ಕುರಿತು ಈ ಪುಸ್ತಕಗಳಲ್ಲಿ ಪೋಷಕರಿಗೆ ಮಾಹಿತಿಯಿದೆ. ಹೆಚ್ಚಿನ ಮಾಹಿತಿಗೆ **www.aiishtcpd.com. ಗೆ ಭೇಟಿ ನೀಡಿ.**

## ಬಹುಮಾಧ್ಯಮ ಸೂಚಿ

ಕೇಂದ್ರವು ತಾಯಿ ತಂದೆ ಮತ್ತು ಮಗು (ಶ್ರವಣ ದೋಷವುಳ್ಳ ಮಕ್ಕಳ ಪೋಷಕರ ಕೈಪಿಡಿ) ಸಂಪನ್ಮೂಲ ಪುಸ್ತಕವನ್ನು ಆಧರಿಸಿ ಬಹುಮಾಧ್ಯಮ ಸೂಚಿಯನ್ನು ಅಭಿವೃದ್ಧಿ ಪಡಿಸಿದೆ. ಈ ಸೂಚಿಯಲ್ಲಿ ಶ್ರವಣ ದೋಷವುಳ್ಳ ಮಕ್ಕಳ ಪೋಷಕರಿಗೆ ಪುಸ್ತಕ, ಧ್ವನಿ ಹಾಗೂ ದೃಶ್ಯ ಮಾಧ್ಯಮಗಳ ಮೂಲಕ ಸಮಗ್ರವಾಗಿ ಹಾಗೂ ಸುಲಭವಾಗಿ ಅಳವಡಿಸಿಕೊಳ್ಳುವಂತೆ ವಿವರಣೆ ನೀಡಲಾಗಿದೆ. ಈ ಸೂಚಿಯನ್ನು http://aiishtcpd.com/en/multimedia.htm. ನಲ್ಲಿ ವೀಕ್ಷಿಸಬಹುದು. ಶ್ರವಣ ಮತ್ತು ದೃಶ್ಯ–ಶ್ರವಣ ಆಧಾರಿತ ಪಠ್ಯಕ್ರಮದ ಚಟುವಟಿಕೆಗಳ ಪ್ರದರ್ಶನಕ್ಕಾಗಿ ಈ ಲಿಂಕನ್ನು ಅನುಸರಿಸಿ. ಇದು ಕನ್ನಡ, ಇಂಗ್ಲೀಷ್ ಹಾಗೂ ಹಿಂದಿ ಭಾಷೆಗಳಲ್ಲಿ ಲಭ್ಯವಿದ್ದು, ಮಾತು, ಭಾಷೆ ಮತ್ತು ಶ್ರವಣಶಕ್ತಿಯ ಬೆಳವಣಿಗೆ, ಶ್ರವಣದೋಷ, ವಿವಿಧ ಶ್ರವಣದೋಷಗಳು, ಅದರ ಕಾರಣಗಳು ಮತ್ತು ಪರಿಹಾರ – ವಿಷಯಗಳ ಬಗ್ಗೆ ಮಾಹಿತಿ ನೀಡಲಾಗಿದೆ.

## ಪಾರ್ಕಿನ್ಸನ್ ಸಹಾಯವಾಣಿ

ಪಾರ್ಕಿನ್ಸನ್ ಸಮಸ್ಯೆಯುಳ್ಳ ವ್ಯಕ್ತಿಗಳು ಮತ್ತು ಅವರ ಆರೈಕೆದಾರರ ಸಹಾಯಕ್ಕಾಗಿ ಕೇಂದ್ರವು ಪಾರ್ಕಿನ್ಸನ್ ಸಹಾಯವಾಣಿಯನ್ನು ಪ್ರಾರಂಭಿಸಿದ್ದು, www.aiishtcpdhelpline.in ಜಾಲತಾಣದಲ್ಲಿ ಹೆಸರು ನೋಂದಾಯಿಸಿಕೊಳ್ಳುವ ಮೂಲಕ ಈ ದೂರಸಂಪರ್ಕ ಸೇವೆಗಳನ್ನು ಪಡೆಯಬಹುದು.

**ಸಂಪರ್ಕಿಸಿ**
**ಡಾ. ಜಯಶ್ರೀ ಸಿ. ಶಾನ್ಭಾಲ್**
ಸಹ ಪ್ರಾಧ್ಯಾಪಕರು, ಮತ್ತು ಮುಖ್ಯಸ್ಥರು, ಸಂವಹನ ನ್ಯೂನತೆಯುಳ್ಳ ವ್ಯಕ್ತಿಗಳಿಗೆ ಟೆಲಿ ಕೇಂದ್ರ
ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು – 570 006

ಕರ್ನಾಟಕ, ಭಾರತ

ದೂರವಾಣಿ ಸಂಖ್ಯೆ – 2502270

ಇ–ಮೇಲ್: telecenteraiish@gmail.com

ಕಾರ್ಯನಿರ್ವಹಿಸುವ ಸಮಯ: 09.00 ರಿಂದ ಸಂಜೆ 05.30 ರವರೆಗೆ

ಕಾರ್ಯ ನಿರ್ವಹಿಸುವ ದಿನಗಳು: ಸೋಮವಾರದಿಂದ ಶುಕ್ರವಾರದವರೆಗೆ (ಕೇಂದ್ರ ಸರ್ಕಾರದ ರಜಾ ದಿನಗಳನ್ನು ಹೊರತುಪಡಿಸಿ)

## ಸೌಲಭ್ಯಗಳು

### ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ

ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರವು ಸಂವಹನ ತೊಂದರೆ/ ನ್ಯೂನತೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇಡೀ ದೇಶದಲ್ಲೇ ಅತ್ಯುನ್ನತ ಕಲಿಕಾ ಸಂಪನ್ಮೂಲ ಕೇಂದ್ರವಾಗಿದ್ದು, ವಾಕ್–ಶ್ರವಣ ವಿಷಯಗಳ ಬಗ್ಗೆ ಅತ್ಯುತ್ತಮ ಪುಸ್ತಕಗಳ ಸಂಗ್ರಹವನ್ನು ಹೊಂದಿದೆ. ಈ ಗ್ರಂಥಾಲಯವು ಭಾರತದ ಒಂದು ಅತ್ಯುತ್ತಮ ವೈಜ್ಞಾನಿಕ ಮತ್ತು ತಾಂತ್ರಿಕ ಗ್ರಂಥಾಲಯವೆಂದು ಪರಿಗಣಿಸಲ್ಪಟ್ಟಿದೆ.

ಸಂಸ್ಥೆಯು ಎಜುಕೇಷನಲ್ ರಿಸೋರ್ಸಸ್ ಇನ್ ಮೆಡಿಸನ್ (ಇಖಒಇಆ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಭಾರತ ಸರ್ಕಾರ, ನವದೆಹಲಿ ಮತ್ತು ನ್ಯಾಷನಲ್ ಲೈಬ್ರರಿ ಅಂಡ್ ಇ ಸರ್ವೀಸಸ್ ಇನ್ಫಾಸ್ಟ್ರಕ್ಚರ್ ಫಾರ್ ಸ್ಕಾಲರ್ಲಿ ಕಂಟೆಟ್ (ಓ–ಐಖಖಖಿ) ಇನ್ಫರ್ಮೇಶನ್ ಅಂಡ್ ಲೈಬ್ರರಿ ನೆಟ್‌ವರ್ಕ್, ಯೂನಿವರ್ಸಿಟಿ ಗ್ರಾಂಟ್ ಕಮೀಷನ್, ಭಾರತ ಸರ್ಕಾರ ನವದೆಹಲಿ – ಇವುಗಳ ಅಂತರರಾಷ್ಟ್ರೀಯ ಮಟ್ಟದ ಮಾಹಿತಿ ಸೇವಾ ಯೋಜನೆಯ ಸದಸ್ಯತ್ವವನ್ನು ಹೊಂದಿದೆ. ೧೯೬೫ರಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಅವರ ತರಬೇತುದಾರರ ಮಾಹಿತಿ ಅಗತ್ಯತೆಗಳನ್ನು ಪೂರೈಸಲು ಸಂಸ್ಥೆಯೊಂದಿಗೆ ಸ್ಥಾಪಿತವಾದ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರವು ಇಂದು ಡಿಪ್ಲೊಮಾದಿಂದ ಹಿಡಿದು ಡಾಕ್ಟರೇಟ್ ನಂತರದ ವಿದ್ಯಾಭ್ಯಾಸದ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಂವಹನದ ಅಭ್ಯಾಸದ ವಿಭಾಗಗಳು ಮತ್ತು ಸಂಬಂಧಿತ ಕ್ಷೇತ್ರಗಳವರೆಗಿನ ವಿದ್ಯಾರ್ಥಿಗಳ ಅಗತ್ಯತೆಗಳನ್ನು ಪೂರೈಸುತ್ತಿದೆ. ಗ್ರಂಥಾಲಯವು ಸಂವಹನ ನ್ಯೂನತೆಗಳು ಮತ್ತು ಸಂಬಂಧಿತ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮುದ್ರಣ ಮತ್ತು ಎಲೆಕ್ಟ್ರಾನಿಕ್ ಸಂಪನ್ಮೂಲಗಳ ಅತ್ಯುತ್ತಮ ಸಂಗ್ರಹವನ್ನು ಹೊಂದಿದ್ದು, ಸಾಂಪ್ರದಾಯಿಕ ಮತ್ತು ತಂತ್ರಜ್ಞಾನ ಆಧಾರಿತ ಮಾಹಿತಿ ಸೇವೆಗಳು, ಸೂಕ್ತ, ಆಕರ್ಷಕ ಮತ್ತು ವಿಶಾಲವಾದ ಕಲಿಕೆಯ ಸ್ಥಳಗಳು ಇದರ ಕೆಲವು ವೈಶಿಷ್ಟ್ಯಗಳಾಗಿವೆ.

ಗ್ರಂಥಾಲಯವು ತನ್ನದೇ ಆದ ಜಾಲತಾಣವನ್ನು ಹೊಂದಿದ್ದು, ಅದು ಗ್ರಂಥಾಲಯದ ಎಲ್ಲಾ ಎಲೆಕ್ಟ್ರಾನಿಕ್ ಮಾಹಿತಿ ಮೂಲಗಳು ಮತ್ತು ಸೇವೆಗಳನ್ನು ಪ್ರವೇಶಿಸಲು ಒಂದು ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ. ಜೊತೆಗೆ, ಗ್ರಂಥಾಲಯದ ಮುದ್ರಣ ಆಧಾರಿತ ಮಾಹಿತಿಯ ಮೂಲಗಳು ಮತ್ತು ಸೇವೆಗಳು, ಸಿಬ್ಬಂದಿಗೆ ಸಂಬಂಧಿಸಿದ ಮಾಹಿತಿ, ಕಾರ್ಯನಿರ್ವಹಿಸುವ ಸಮಯ, ನಿಯಮಗಳು ಮತ್ತು ನಿಬಂಧನೆಗಳು ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಸಂಸ್ಥೆಯಲ್ಲಿ ನಡೆಸಲಾದ ಸಂಶೋಧನಾ ಕಾರ್ಯಗಳ ಪೂರ್ಣ ಪಠ್ಯ ವರದಿಗಳನ್ನು ಒಳಗೊಂಡಿರುವ ಡಿಜಿಟಲ್ ರೆಪೊಸಿಟರಿಯನ್ನು ಜಾಗತಿಕವಾಗಿ ದೊರಕಿಸಲು ಅವಕಾಶವಿರುವುದು ಸಹ ಗ್ರಂಥಾಲಯವು ಒದಗಿಸಿರುವ ವಿದ್ಯುನ್ಮಾನ ಮಾಹಿತಿ ಸೇವೆಗಳಲ್ಲೊಂದು. ಎನ್–ಲಿಸ್ಟ್ ಮತ್ತು ಕೃತಿಚೌರ್ಯ ಪರಿಶೀಲನೆ ಸೇವೆಗಳನ್ನು ಸಂಸ್ಥೆಯ ಹೊರಗಿನಿಂದಲೂ ಬಳಸಬಹುದಾದರೂ, ಬಳಕೆದಾರ ಹೆಸರು ಮತ್ತು ಪಾಸ್ ವರ್ಡ್ ಮೂಲಕವಷ್ಟೇ ಸಂಸ್ಥೆಯ ಬಳಕೆದಾರ ಸಮುದಾಯಕ್ಕೆ ಪ್ರವೇಶವನ್ನು ಪಡೆಯಲು ಸಾಧ್ಯವಾಗುವಂತೆ ಸೀಮಿತಗೊಳಿಸಲಾಗಿದೆ ಉಳಿದ ಸೇವೆಗಳಾದ ಇ ಆರ್ ಎಂ ಇ ಡಿ, ಚಂದಾದಾರರ ಇ–ಜರ್ನಲ್ ಗಳು ಮತ್ತು ಇ–ಪುಸ್ತಕಗಳು, ಡಿಜಿಟಲೀಕರಿಸಿದ ಪ್ರಶ್ನೆ ಪತ್ರಿಕೆಗಳು, ಪಠ್ಯಕ್ರಮ, ಪುಸ್ತಕ ಸಿಡಿ– ರ್‍ಯಾಮ್ ಇತ್ಯಾದಿ ಸೇವೆಗಳು ಸಂಸ್ಥೆಯ ಆವರಣದೊಳಗೆ ಮಾತ್ರ ಲಭ್ಯವಿವೆ. www.aiish.ac.in ಲಿಂಕ್‌ನಲ್ಲಿ ಗ್ರಂಥಾಲದ ವೆಬ್‌ಪೋರ್ಟಲನ್ನು ಪ್ರವೇಶಿಸಬಹುದು.

ಗ್ರಂಥಾಲಯ ತೆರೆದಿರುವ ಸಮಯ

ಸೋಮವಾರದಿಂದ ಶುಕ್ರವಾರ 08.30AM-08.00PM

ಶನಿವಾರ 09.00AM - 05.00PM

ಸಾರ್ವಜನಿಕ ರಜಾ ದಿನಗಳಂದು ಗ್ರಂಥಾಲಯ ಸೇವೆ ಲಭ್ಯವಿರುವುದಿಲ್ಲ.

ಸಂಪರ್ಕಿಸಿ

ಡಾ. ಸಿ .ಶಿಜಿತ್ ಕುಮಾರ್

ಗ್ರಂಥಾಲಯ ಮತ್ತು ಮಾಹಿತಿ ಅಧಿಕಾರಿ
ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ
ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ದೂರವಾಣಿ ಸಂಖ್ಯೆ – 91-0821-2502150

## ಅತಿಥಿಗೃಹಗಳು

ಸಂಸ್ಥೆಯು ಅಶೋಕ ಅಂತಾರಾಷ್ಟ್ರೀಯ ಅತಿಥಿ ಗೃಹ (International Guest House - IGH) ಮತ್ತು ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆಯ ಅತಿಥಿಗೃಹ ಎಂಬ ಎರಡು ಅತಿಥಿಗೃಹಗಳನ್ನು ಹೊಂದಿದೆ. ಅತಿಥಿಗೃಹಗಳು ಪ್ರಾಥಮಿಕವಾಗಿ ಸಂಸ್ಥೆಯ ಅಧಿಕೃತ ಅತಿಥಿಗಳಿಗೆ ಮೀಸಲಾಗಿರುತ್ತವೆ. ಆದಾಗ್ಯೂ, ಅವುಗಳನ್ನು ವೈಯಕ್ತಿಕ ಉದ್ದೇಶಗಳಿಗೂ ಬುಕ್ ಮಾಡಬಹುದು. ಆದರೆ, ಅಂತಹ ಬುಕಿಂಗ್ ಗಳು ತಾತ್ಕಾಲಿಕವಾಗಿರುತ್ತವೆ ಮತ್ತು ಯಾವುದೇ ಸಮಯದಲ್ಲಿ ಸಂಸ್ಥೆಗೆ ಕೊಠಡಿಗಳು ಅಗತ್ಯಬಿದ್ದಲ್ಲಿ ಮುಂಚಿತವಾಗಿ ಅತಿಥಿ/ ಮನವಿದಾರರಿಗೆ ತಿಳಿಸಿ ಅದನ್ನು ರದ್ದುಗೊಳಿಸುವ ಅಧಿಕಾರ ಸಂಸ್ಥೆಗಿರುತ್ತದೆ.

### ಅಶೋಕ ಅಂತಾರಾಷ್ಟ್ರೀಯ ಅತಿಥಿಗೃಹ (International Guest House - IGH)

- ಅಶೋಕ ಅಂತಾರಾಷ್ಟ್ರೀಯ ಅತಿಥಿ ಗೃಹ (IGH) ಸಂಸ್ಥೆಯು ಪಂಚವಟಿ ಆವರಣದಲ್ಲಿದೆ.
- ಈ ಅತಿಥಿಗೃಹವು ಎರಡೆರಡು ಹಾಸಿಗೆಗಳುಳ್ಳ 15 A/c ಕೊಠಡಿಗಳನ್ನು ಹೊಂದಿದೆ

**ಅರ್ಹತೆ**

**ಈ ಕೆಳಗೆ ನಮೂದಿಸಿದ ವರ್ಗಗಳ ವ್ಯಕ್ತಿಗಳು ಈ ಅತಿಥಿಗೃಹದ ಸೌಕರ್ಯಗಳಿಗಾಗಿ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.**

- ಸಂಸ್ಥೆಯ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು
- ಸಂಸ್ಥೆಯಲ್ಲಿ ಕರ್ತವ್ಯನಿರತ ಅಧಿಕಾರಿಗಳು (ಅಧಿಕೃತ ಮತ್ತು ವೈಯಕ್ತಿಕ ಉದ್ದೇಶಗಳಿಗಾಗಿ)
- ರಾಜ್ಯ / ಕೇಂದ್ರ ಸರ್ಕಾರ ನೌಕರರು (ವೈಯಕ್ತಿಕ / ಅಧಿಕೃತ ವಾಸಕ್ಕಾಗಿ)
- ಸಂಸ್ಥೆಯಲ್ಲಿ  ನಡೆಸಲಾಗುವ ಪ್ರವೇಶ ಪರೀಕ್ಷೆ /ವಿಚಾರಸಂಕಿರಣ/ ಸಂದರ್ಶನಗಳಲ್ಲಿ ಭಾಗವಹಿಸುವ ಅಭ್ಯರ್ಥಿಗಳು
- ಇತರ ಶೈಕ್ಷಣಿಕ ಸಂಸ್ಥೆಗಳು ಮತ್ತು ಸ್ವಯಂಸೇವಾ ಸಂಸ್ಥೆಗಳು (ತಮ್ಮ ಅಧಿಕಾರಿಗಳಿಗೆ)

### ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆಯ ಅತಿಥಿ ಗೃಹ

- ಈ ಅತಿಥಿಗೃಹವು ಸಂಸ್ಥೆಯ ನೈಮಿಷಂ ಆವರಣದಲ್ಲಿದೆ.
- ಈ ಅತಿಥಿಗೃಹವು ಎರಡೆರಡು ಹಾಸಿಗೆಗಳುಳ್ಳ 8 A/c ಮತ್ತು A/c  ರಹಿತ ಕೊಠಡಿಗಳನ್ನು ಹೊಂದಿದೆ

**ಅರ್ಹತೆ**

**ಈ ಕೆಳಗೆ ನಮೂದಿಸಿದ ವರ್ಗಗಳ ವ್ಯಕ್ತಿಗಳು ಈ ಅತಿಥಿಗೃಹದ ಸೌಕರ್ಯಗಳಿಗಾಗಿ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.**

- ಸಂಸ್ಥೆಯ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು (ಅಧಿಕೃತ ಉದ್ದೇಶಕ್ಕಾಗಿ)
- ಸಂಸ್ಥೆಯಲ್ಲಿ ಕರ್ತವ್ಯನಿರತ ಅಧಿಕಾರಿಗಳು
- ಸಂಸ್ಥೆಯ ಹಳೆಯ ವಿದ್ಯಾರ್ಥಿಗಳು/ ನಿವೃತ್ತ ಸಿಬ್ಬಂದಿ (ವೈಯಕ್ತಿಕ ವಾಸಕ್ಕಾಗಿ)
- ವಿಶೇಷ ಸೂಚನೆ: ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರು ತಮ್ಮ ಅಧಿಕೃತ ಅಥವಾ ವೈಯಕ್ತಿಕ ಉದ್ದೇಶಗಳಿಗೆ (ಸಂಸ್ಥೆಯನ್ನು ಹೊರತುಪಡಿಸಿ ಇನ್ಯಾವುದೇ) ಭೇಟಿ ನೀಡುವಾಗ ಅಶೋಕ ಅಂತಾರಾಷ್ಟ್ರೀಯ ಅತಿಥಿಗೃಹದಲ್ಲಿ ಕೊಠಡಿಗಳನ್ನು ಬುಕ್ ಮಾಡಿಕೊಳ್ಳಲು ಮನವಿ ಮಾಡಲಾಗಿದೆ

**ವಸತಿನಿಲಯಗಳು**

ಸಂಸ್ಥೆಯಲ್ಲಿ ಪುರುಷ ಹಾಗೂ ಮಹಿಳೆಯರಿಗೆ ಪ್ರತ್ಯೇಕ ವಸತಿನಿಲಯಗಳ ಸೌಲಭ್ಯವಿದ್ದು, ಸಂಸ್ಥೆಗೆ ಪ್ರವೇಶ ಪಡೆದ ಅಭ್ಯರ್ಥಿಗಳಿಗೆ ವಾಸಕ್ಕೆ ಲಭ್ಯವಿರುತ್ತದೆ. ಒಬ್ಬ ವ್ಯಕ್ತಿ ಕೊಠಡಿ, ಇಬ್ಬರು ಉಳಿಯಬಹುದಾದ ಹಾಗೂ ಮೂವರು ಉಳಿಯಬಹುದಾದ ಸುಸಜ್ಜಿತವಾದ ಕೊಠಡಿಗಳು ಪ್ರತ್ಯೇಕವಾಗಿ ವಸತಿಗೆ ಲಭ್ಯವಿದೆ. ಆದರೆ, ವಿದ್ಯಾರ್ಥಿಗಳು ಹಾಸಿಗೆ ಹಾಗೂ ತಮ್ಮ ವೈಯಕ್ತಿಕ ಅವಶ್ಯಕ ವಸ್ತುಗಳನ್ನು ತಾವೇ ತರಬೇಕಾಗುತ್ತದೆ. ಕೊಠಡಿಗಳು ಲಭ್ಯವಿದ್ದರೆ ಮಾತ್ರ ಸ್ಥಳೀಯ ವಿದ್ಯಾರ್ಥಿಗಳಿಗೆ ವಸತಿ ಒದಗಿಸಲಾಗುವುದು.

**ಶುಲ್ಕಗಳು**

| **ವಿವರಗಳು** | **ಡಿಪ್ಲೊಮಾ/ ಪದವಿ/ ಮತ್ತು ಸ್ನಾತಕೋತ್ತರ ಡಿಪ್ಲೊಮಾ** | **ಸ್ನಾತಕೋತ್ತರ ಪದವಿ/ ಜೆಆರ್ಎಫ್** |
|---|---:|---:|
| ಪ್ರವೇಶ ಶುಲ್ಕ | 60.00 | 60.00 |
| ಮುಂಜಾಗ್ರತೆ ಠೇವಣಿ (ಮರುಪಾವತಿಸಲಾಗುವುದು) | 1250.00 | 2500.00 |
| ವಾರ್ಷಿಕ ಕೊಠಡಿ ಬಾಡಿಗೆ | 1025.00 | 1025.00 |
| ಸವಕಳಿ ಶುಲ್ಕಗಳು | 50.00 | 50.00 |
| ನೈರ್ಮಲ್ಯ ಶುಲ್ಕಗಳು | 125.00 | 125.00 |
| ಸ್ಥಾಪನೆ ಶುಲ್ಕಗಳು (ವಾರ್ಷಿಕ) | 1875.00 | 1872.00 |
| ಭೋಜನಾ ಶಾಲೆಯ ಮುಂಗಡ ಹಣ– ಮಹಿಳೆಯರ ವಸತಿನಿಲಯ (ಮರುಪಾವತಿಸಲಾಗುವುದು) | 3500.00 | 3500.00 |
| ಭೋಜನಾ ಶಾಲೆಯ ಮುಂಗಡ ಹಣ– ಪುರುಷರ ವಸತಿನಿಲಯ (ಮರುಪಾವತಿಸಲಾಗುವುದು) | 4375.00 | 4375.00 |
| ಮಹಿಳೆಯರ ವಸತಿನಿಲಯ | 7885.00 | 9135.00 |
| ಪುರುಷರ ವಸತಿನಿಲಯ | 8760.00 | 10010.00 |
| ವಿದ್ಯುತ್ ಮತ್ತು ಭೋಜನ ಶಾಲೆಯ ಮಾಸಿಕ ಶುಲ್ಕಗಳು (ವಿಭಜಿಸುವ ವ್ಯವಸ್ಥೆಯಲ್ಲಿ) | | |

**ವಿಶೇಷ ಸೂಚನೆ:** ಪಾವತಿಗಳನ್ನು ಭಾರತೀಯ ರೂಪಾಯಿಗಳಲ್ಲಿ ಮಾತ್ರ ಸ್ವೀಕರಿಸಲಾಗುತ್ತದೆ.

ವಿದ್ಯಾರ್ಥಿನಿಲಗಳಲ್ಲಿ ವಾಸಿಸುವವರು ಕಡ್ಡಾಯವಾಗಿ ಹಂಚಿಕೆ ಆಧಾರದ ಮೇಲೆ ನಡೆಯುವ ಭೋಜನ ವ್ಯವಸ್ಥೆಗೆ ಒಳಪಡುತ್ತಾರೆ. ನಿರ್ದೇಶಕರಿಂದ ನಾಮನಿರ್ದೇಶನಗೊಂಡ ವಿದ್ಯಾರ್ಥಿನಿಲಯದ ಅಧೀಕ್ಷಕರು ಮತ್ತು ವಾರ್ಡನ್‌ಗಳು ಮೇಲ್ವಿಚಾರಣೆಯನ್ನು ನಿರ್ವಹಿಸುತ್ತಾರೆ. ವಿದ್ಯಾರ್ಥಿಗಳು ಹಾಸ್ಟೆಲ್ ನಿಯಮಗಳು ಮತ್ತು ನಿಬಂಧನೆಗಳನ್ನು ಪಾಲಿಸಬೇಕು.

**ಸಂಪರ್ಕಿಸಿ**

ಕಪಿಲ ಮಹಿಳೆಯರ ವಿದ್ಯಾರ್ಥಿ ನಿಲಯ

ಡಾ. ಚಾಂದಿನಿ ಜೈನ್

ವಾರ್ಡನ್ ಮತ್ತು ಸಹಾಯಕ ಪ್ರಾಧ್ಯಾಪಕರು
ಶ್ರವಣ ವಿಜ್ಞಾನ ವಿಭಾಗ
ದೂರವಾಣಿ : 2502358
ಈ–ಮೇಲ್ chandni@aiishmysore.in

**ಶ್ರೀಮತಿ.ಕೃಪಾ ಸೈರಾ ಜಾರ್ಜ್**
ಸಹಾಯಕ ವಾರ್ಡನ್ & ಸಂಶೋಧನಾ ವಿದ್ಯಾರ್ಥಿ, ಶ್ರವಣವಿಜ್ಞಾನ ವಿಭಾಗ, ದೂರವಾಣಿ (ಎಕ್ಸ್ಟ): 2190
ಈ–ಮೇಲ್: krupasairageorge@gmail.com

**ಬೋಧಿ ಪುರುಷರ ವಿದ್ಯಾರ್ಥಿ ನಿಲಯ**

**ಡಾ. ಸುಜೀತ್ ಕುಮಾರ್ ಸಿನ್ಹಾ**
ವಾರ್ಡನ್ ಮತ್ತು ಪ್ರವಾಚಕರು
ಶ್ರವಣವಿಜ್ಞಾನ ವಿಭಾಗ
ದೂರವಾಣಿ : 2502361
ಈ–ಮೇಲ್: sujitks5@gmail.com

## ಕುಟೀರ

**ರಚನೆ**

ಕುಟೀರವು ಸಂಸ್ಥೆಯ ಆವರಣದೊಳಗೆ ಒಂದು ಪ್ರತ್ಯೇಕ ಕಟ್ಟಡದಲ್ಲಿದ್ದು, ಎರಡು ಹಾಸಿಗೆಗಳುಳ್ಳ ೧೨ ಕೊಠಡಿಗಳು ಹಾಗೂ ಎರಡು ವಸತಿನಿಲಯಗಳನ್ನು ಹೊಂದಿದೆ. ಇಬ್ಬರಿಗೆ ಸ್ಥಳಾವಕಾಶವಿರುವ ಪ್ರತಿ ಕೊಠಡಿಯಲ್ಲಿ ಎರಡು ಹಾಸಿಗೆ, ಒಂದು ಕುರ್ಚಿ, ಒಂದು ಟೇಬಲ್ ಮತ್ತು ಫ್ಯಾನ್, ಟ್ಯೂಬ್‌ಲೈಟ್ ಮತ್ತು ಬಟ್ಟೆಯ ಹ್ಯಾಂಗರ್ ವ್ಯವಸ್ಥೆಯಿದೆ.

**ಪ್ರವೇಶವಕಾಶ**

ಕುಟೀರದ ಪ್ರವೇಶದ ಹಕ್ಕುಗಳನ್ನು ಕಾಯ್ದಿರಿಸಲಾಗಿದ್ದು, ಸಂಸ್ಥೆಯಲ್ಲಿ ಚಿಕಿತ್ಸಾ ಸೇವೆಗಳನ್ನು ಪಡೆಯುವವರು, ಸಂಸ್ಥೆಗೆ ಭೇಟಿ ನೀಡುವ ವಿದ್ಯಾರ್ಥಿಗಳು, ಕಾರ್ಯಾಗಾರಗಳಲ್ಲಿ ಭಾಗವಹಿಸುವವರು, ಸೆಮಿನಾರ್‌ಗಳಿಗೆ ಆಗಮಿಸವವರಿಗೆ ಆದ್ಯತೆಯ ಮೇರೆಗೆ ಕೊಠಡಿಗಳನ್ನು ನೀಡಲಾಗುತ್ತದೆ. ಯಾವುದೇ ಕಾರಣಗಳನ್ನು ನೀಡದೆ ಕುಟೀರದ ಸೌಲಭ್ಯವನ್ನು ಬಳಸಿಕೊಳ್ಳಲು ಯಾವುದೇ ವ್ಯಕ್ತಿಗೆ/ ವ್ಯಕ್ತಿಗಳಿಗೆ ಅನುಮತಿ ನೀಡಲು ಅಥವಾ ಅದನ್ನು ಹಿಂಪಡೆಯುವ ಹಕ್ಕು ಸಂಸ್ಥೆಯ ನಿರ್ದೇಶಕರದ್ದಾಗಿರುತ್ತದೆ.

**ಸಿಬ್ಬಂದಿ**

ಸಂಸ್ಥೆಯ ಕುಟೀರದ ಒಟ್ಟಾರೆ ಕಾರ್ಯನಿರ್ವಹಣೆ ಭದ್ರತಾ ಅಧಿಕಾರಿ ಶ್ರೀ ಮಲ್ಲಿಕಾರ್ಜುನ್ ಅವರದ್ದಾಗಿದೆ.

**ವಿಶೇಷ ಸೂಚನೆ:**

ರಚನೆ, ಸುಂಕ ಮತ್ತು ನಿಯಮಗಳು ಮತ್ತು ಷರತ್ತುಗಳನ್ನು ಒಳಗೊಂಡಂತೆ ಕುಟೀರದ ಸೌಕರ್ಯಗಳಿಗೆ ಸಂಬಂಧಿಸಿದ ಇತರ ವಿವರಗಳಿಗಾಗಿ ಭದ್ರತಾ ಅಧಿಕಾರಿಯಾದ ಶ್ರೀ. ಮಲ್ಲಿಕಾರ್ಜುನ್ ಅವರನ್ನು ಸಂಪರ್ಕಿಸಬಹುದು.

**ಸುಂಕ**

ಈ ಕೆಳಗಿನ ಕೋಷ್ಟಕದಲ್ಲಿರುವ ತೆರಿಗೆಯು ಪ್ರಸ್ತುತ ಚಾಲ್ತಿಯಲ್ಲಿರುವ ಸುಂಕವಾಗಿದ್ದು, ೨೪ ಗಂಟೆಗಳ ಚಕ್ರದ ದಿನಗಳಿಗೆ ಎಣಿಕೆ ಮಾಡಲಾಗುತ್ತದೆ. ಪ್ರತಿ ರಾತ್ರಿಯ ತಂಗುವಿಕೆಯನ್ನು ಒಂದು ದಿನದ ಸುಂಕ ಸಂಗ್ರಹಕ್ಕೆ ಸಮಾನವೆಂದು ಪರಿಗಣಿಸಲಾಗುತ್ತದೆ. ಆದಾಗ್ಯೂ, ಒಂದು ದಿನದ ಅವಧಿಯಲ್ಲಿ 12 ಗಂಟೆಗಳಿಗಿಂತ ಹೆಚ್ಚು ಸಮಯದ ವೇಳಾಪಟ್ಟಿಯನ್ನು ಒಂದು ದಿನವೆಂದು ಪರಿಗಣಿಸಿ ಅದಕ್ಕೆ ಶುಲ್ಕ ವಿಧಿಸಲಾಗುತ್ತದೆ.

**ಸಂಸ್ಥೆಗೆ ಭೇಟಿ ನೀಡುವವರಿಗೆ (ಅಧಿಕೃತವಲ್ಲದವರಿಗೆ)**

| ಕ್ರ.ಸಂ | ಕೋಣೆಯ ವಿಧ | ಹಾಸಿಗೆಯ ಶುಲ್ಕ |
|---|---|---|
| 1 | ಏಕವ್ಯಕ್ತಿ ಕೊಠಡಿ | ಪ್ರತಿ ಹಾಸಿಗೆಗೆ ರೂ 50 |
| 2 | ವಸತಿ ನಿಲಯ | ಪ್ರತಿ ಹಾಸಿಗೆಗೆ ರೂ 25 |

ನಿಯಮಗಳು ಮತ್ತು ಷರತ್ತುಗಳು

- ಎರಡು ಹಾಸಿಗೆಗಳುಳ್ಳ ಕೋಣೆಯಲ್ಲಿ, ಇಬ್ಬರು ವಯಸ್ಕರು ಮತ್ತು ಒಂದು ಮಗು ಮಾತ್ರ ಉಳಿಯಬಹುದು
- ಕೋಣೆಯಲ್ಲಿ ಅಡುಗೆ ತಯಾರಿಸಿಕೊಳ್ಳಲು ಅನುಮತಿ ಇಲ್ಲ
- ವಸತಿ ಸೌಕರ್ಯವನ್ನು 15 ದಿನಗಳವರೆಗೆ ಮಾತ್ರ ನೀಡಲಾಗುವುದು

ಲೆಕ್ಕ ಹಾಕಿದ ಸುಂಕವನ್ನು ಮುಂಚಿತವಾಗಿ ಸಂಗ್ರಹಿಸಲಾಗುತ್ತದೆ, ಕುಟೀರಕ್ಕೆ ಕೋಣೆಯನ್ನು ಹಂಚುವ ಮೊದಲು, ಸಂಸ್ಥೆಯ ಸೂಕ್ತ ಖಾತೆಗಳಿಗೆ ರಶೀದಿಗಳನ್ನು ಪಡೆಯಲಾಗುತ್ತದೆ. ರಜಾದಿನಗಳಲ್ಲಿ ಸಂದರ್ಶಕರಿಗೆ ಕೊಠಡಿಗಳನ್ನು ನೀಡಬೇಕಾದಲ್ಲಿ, ಈ ಮೊತ್ತವನ್ನು ಮುಂಚಿತವಾಗಿಯೇ ಸಂಗ್ರಹಿಸಲಾಗುತ್ತದೆ. ಸಂಗ್ರಹಿಸಿದ ಹಣವನ್ನು ಉಸ್ತುವಾರಿ ವ್ಯಕ್ತಿ ಮತ್ತು ಅಥವಾ ಸಹಾಯಕರು ತಮ್ಮ ಬಳಿ ಇರಿಸಿಕೊಂಡು ಮುಂದಿನ ಕೆಲಸದ ದಿನದಂದು ಅದನ್ನು ಸಂಸ್ಥೆಯ ಸಾಮಾನ್ಯ ನಗದು ವಿಭಾಗದಲ್ಲಿ ಠೇವಣಿ ಇಡುತ್ತಾರೆ. ಯಾವುದೇ ಸಂದರ್ಭಗಳಲ್ಲಿ, ಚಾಲ್ತಿಯಲ್ಲಿರುವ ದರಗಳಲ್ಲಿ ರಿಯಾಯಿತಿ ನೀಡಲಾಗುವುದಿಲ್ಲ.

ಸ್ವೀಕೃತ ಪಾವತಿಗಳನ್ನು ಸಾಮಾನ್ಯವಾಗಿ ರದ್ದಾಗಲೀ ಅಥವಾ ಮರುಪಾವತಿ ಮಾಡಲಾಗುವುದಿಲ್ಲ. ಆದಾಗ್ಯೂ, ಕೆಲವು ಸಂದರ್ಭಗಳಲ್ಲಿ, ಮತ್ತು ಅತಿಥಿಯಿಂದ ಸರಿಯಾದ ಲಿಖಿತ ಕೋರಿಕೆಯ ಮೇರೆಗೆ, ಮರುಪಾವತಿಗಾಗಿ ಉಸ್ತುವಾರಿ ಮತ್ತು / ಅಥವಾ ಸಹಾಯಕರು ಅಂತಿಮ ಅನುಮೋದನೆಗಾಗಿ ಸಂಸ್ಥೆಯ ನಿರ್ದೇಶಕರಿಗೆ ಅರ್ಜಿಯನ್ನು ಕಳುಹಿಸಬಹುದು. ಉಸ್ತುವಾರಿ ಮತ್ತು ಸಹಾಯಕರ ಶಿಫಾರಸುಗಳ ಹೊರತಾಗಿಯೂ ಮರುಪಾವತಿಯ ಯಾವುದೇ ವಿನಂತಿಗೆ ಪೂರ್ಣವಾಗಿ ಅನುಮತಿ ನೀಡುವ, ನಿರಾಕರಿಸುವ ಭಾಗಶಃ ಅಥವಾ ಅಥವಾ ಸಂಪೂರ್ಣ ಹಕ್ಕನ್ನು ನಿರ್ದೇಶಕರು ಹೊಂದಿರುತ್ತಾರೆ.

**ಕ್ಯಾಂಟೀನ್**

ಸಂಸ್ಥೆಯ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಅಗತ್ಯಕ್ಕಾಗಿ ಕ್ಯಾಂಟೀನ್ ಸೌಲಭ್ಯವನ್ನು ಕಲ್ಪಿಸಿದೆ. ಕ್ಯಾಂಟೀನ್ ನೂತನ ಪಾಕಶಾಲೆಯನ್ನು ಹೊಂದಿದ್ದು, ಪ್ರತಿದಿನ ಬೆಳಿಗ್ಗೆ ೯.೦೦ ರಿಂದ ಸಂಜೆ ೫.೩೦ ರವರೆಗೆ ಶಾಕಾಹಾರ ವ್ಯವಸ್ಥೆಯಿದೆ.

**ಸಂಪರ್ಕಿಸಿ**

**ಕ್ಯಾಂಟೀನ್ ಸಮಿತಿ**

ಡಾ. ಎನ್. ದೇವಿ

ಪ್ರವಾಚಕರು, ಶ್ರವಣ ವಿಜ್ಞಾನ

ದೂರವಾಣಿ: 2502359
9480442139
ಇಮೇಲ್: deviaiish@gmail.com, devi@aiishmysore.in

**ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್)**

ಸಂಸ್ಥೆ ತನ್ನ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯನ್ನು ಗುರಿಯಾಗಿರಿಸಿಕೊಂಡಿದ್ದು, ರಾಷ್ಟ್ರೀಯ ಸೇವಾ ಯೋಜನೆಯು ಈ ನಿಟ್ಟಿನಲ್ಲಿ ಸಹಾಯ ಮಾಡುವ ಒಂದು ಚಟುವಟಿಕೆಯಾಗಿದೆ. ಸಂಸ್ಥೆಯು ರಾಷ್ಟ್ರೀಯ ಸೇವೆಯಲ್ಲಿ ತೊಡಗಿಸಿಕೊಂಡು ಯುವ ಶಕ್ತಿ ಮತ್ತು ಸಾಮರ್ಥ್ಯವನ್ನು ಸರಿಯಾದ ಮಾರ್ಗದಲ್ಲಿ ಬಳಸಿಕೊಳ್ಳುವ ಮೂಲಕ ಅವರಲ್ಲಿ ಸಮುದಾಯ ಸೇವೆಯ ಉತ್ಸಾಹವನ್ನು ಮೂಡಿಸುತ್ತಿದೆ. ಸಂಸ್ಥೆಯಲ್ಲಿನ ಎನ್‌ಎಸ್‌ಎಸ್ ಯುವಕರನ್ನು ಅರ್ಥಪೂರ್ಣ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಗುರಿಯನ್ನು ಹೊಂದಿದ್ದು, ಇದು ಅಂತಿಮವಾಗಿ ಸಮಾಜದೊಂದಿಗೆ ಪರಿಣಾಮಕಾರಿಯಾಗಿ ಸಂಯೋಜಿಸಲು ಸಹಾಯ ಮಾಡುತ್ತದೆ.

**ಶಿಬಿರಗಳು**

ಸಂವಹನ ತೊಂದರೆ ಹೊಂದಿರುವ ವ್ಯಕ್ತಿಗಳ ಅಗತ್ಯತೆಗಳನ್ನು ಪೂರೈಸಲು ಕರ್ನಾಟಕ ಮತ್ತು ಇತರ ರಾಜ್ಯಗಳ ವಿವಿಧ ಸ್ಥಳಗಳಲ್ಲಿ ಶಿಬಿರಗಳನ್ನು ನಡೆಸಲಾಗುತ್ತದೆ. ಸರ್ಕಾರೇತರ ಮತ್ತು ರಾಜ್ಯ ಮತ್ತು/ ಅಥವಾ ಜಿಲ್ಲೆಯ ಸರ್ಕಾರಿ ಏಜೆನ್ಸಿಗಳು ಪ್ರಾಯೋಜಿಸಿದ ಯಾವುದೇ ಸಂಘಟನೆಯಿಂದ ವಿನಂತಿಯನ್ನು ಗಮನಿಸಿ ಶಿಬಿರಗಳನ್ನು ನಡೆಸಲಾಗುತ್ತದೆ. ಅಖಿಲ ಭಾರತ ವಾಕ್-ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು –ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಂದು ಪ್ರಮುಖ ಸಂಸ್ಥೆಯಾಗಿದ್ದು, ಸಂವಹನ ನ್ಯೂನತೆ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಚಿಕಿತ್ಸಾ ಸೇವೆಗಳನ್ನು ನೀಡುತ್ತಿದೆ. ಮಾತ್ರವಲ್ಲದೆ, ಇತರ ಸಾಮಾಜಿಕ ಸಂಸ್ಥೆಗಳ ಕೋರಿಕೆಯ ಮೇರೆಗೆ ಸಂವಹನ ನ್ಯೂನತೆಯುಳ್ಳ ವ್ಯಕ್ತಿಗಳಿಗಾಗಿ ವಿವಿಧ ಸ್ಥಳಗಳಲ್ಲಿ ಶಿಬಿರಗಳನ್ನು ನಡೆಸುವಲ್ಲಿ / ಆಯೋಜಿಸುವಲ್ಲಿ ಸಹಾಯ ಒದಗಿಸುತ್ತಿದೆ. ವೃತ್ತಿಪರರು / ತಂತ್ರಜ್ಞರ ತಂಡವನ್ನು ನಿಯೋಜಿಸುವ ಮೂಲಕ ಮತ್ತು ಅಗತ್ಯ ಪ್ರಮಾಣಪತ್ರಗಳನ್ನು ಮತ್ತು ಶ್ರವಣ ಸಾಧನಗಳ ಸಾಧನಗಳನ್ನು (ಲಭ್ಯವಿದ್ದರೆ) ಉಚಿತ/ ಹಣಕ್ಕೆ ನೀಡುವ ಮೂಲಕ ಇಂತಹ ಸಾಮಾಜಿಕ ಅಭಿವೃದ್ಧಿ ಚಟುವಟಿಕೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದೆ.

**ಸಂವಹನ ತೊಂದರೆಗಳನ್ನು ಗುರುತಿಸುವ ಶಿಬಿರ:**

**ತಂಡವು ಶಿಬಿರಗಳಲ್ಲಿ ಈ ಕೆಳಗಿನ ಸೇವೆಗಳನ್ನು ಒದಗಿಸುತ್ತದೆ:**

- ತಪಾಸಣಾ ಸಮಾಲೋಚನೆ
- ಸರಿಯಾದ ಔಷಧಿಗಳನ್ನು ಶಿಫಾರಸು ಮಾಡುವುದು
- ಶ್ರವಣ ಸಾಧನಗಳ ವಿತರಣೆ
- ಸರ್ಕಾರವು ಒದಗಿಸಿದ ವಿವಿಧ ಸೌಲಭ್ಯಗಳನ್ನು ಪಡೆಯಲು / ಪಡೆಯಲು ಶ್ರವಣದೋಷ ಮತ್ತು ಬುದ್ಧಿಮಾಂದ್ಯ ವ್ಯಕ್ತಿಗಳಿಗೆ ಪ್ರಮಾಣಪತ್ರಗಳ ವಿತರಣೆ
- ಕಿವಿಯ ಅಚ್ಚು ತೆಗೆದುಕೊಳ್ಳುವುದು

**ಶಿಬಿರಗಳನ್ನು ಆಯೋಜಿಸುವುದು ಹೇಗೆ?**

ನಮ್ಮ ಸಂಸ್ಥೆಯ ಸೇವೆಗಳನ್ನು ಪಡೆಯಲು ಬಯಸುವ ಇತರೆ ಸಂಸ್ಥೆಗಳು ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ನಿರ್ದೇಶಕರಿಗೆ ಇ–ಮೇಲ್, ಪತ್ರಗಳನ್ನು ಕಳುಹಿಸಿ ಮನವಿ ಮಾಡಬಹುದು. ಆದಾಗ್ಯೂ, ಶಿಬಿರಗಳನ್ನು ನಡೆಸಲು ನಿಯೋಜಿಸಿರುವ ಸಿಬ್ಬಂದಿಗೆ ಸಂಸ್ಥೆಗಳು ಈ ಕೆಳಗಿನ ಸೌಲಭ್ಯಗಳನ್ನು ಒದಗಿಸಬೇಕಾಗಬಹುದು.

ನಿಯೋಜಿಸಲಾದ ಎಲ್ಲಾ ಸಿಬ್ಬಂದಿಗೆ ಸಂಚಾರ ವ್ಯವಸ್ಥೆ (ಸುಮಾರು ೧೫ ರಿಂದ ೨೦ ಸಿಬ್ಬಂದಿ)

- ವೃತ್ತಿಪರರು / ತಂತ್ರಜ್ಞರ ಮಟ್ಟಕ್ಕೆ ಸೂಕ್ತವಾದ ವಸತಿ ಮತ್ತು ಬೋರ್ಡಿಂಗ್‌ನಂತಹ ಸ್ಥಳೀಯ ಆತಿಥ್ಯ.
- ಯಾವುದೇ ಶಬ್ದ ತೊಂದರೆಗಳಿಲ್ಲದ ನಿಶ್ಯಬ್ಧ ಕೊಠಡಿಗಳು. ಕನಿಷ್ಠ ೪ ಪವರ್ ಪಾಯಿಂಟ್‌ಗಳಿರಬೇಕು (ವಿದ್ಯುತ್ ಸಂಪರ್ಕದ ಪಾಯಿಂಟ್‌ಗಳು)
- ಮೌಲ್ಯಮಾಪನಕ್ಕಾಗಿ ಟೇಬಲ್ ಮತ್ತು ಕುರ್ಚಿಗಳಿರುವ ೪ ಕೊಠಡಿಗಳು –
- ಸ್ವಯಂಸೇವಕರು (ಅಗತ್ಯವಿದ್ದಲ್ಲಿ)

**ಶ್ರವಣ ಸಂರಕ್ಷಣೆ ಕಾರ್ಯಕ್ರಮಗಳು**

'ಎಲ್ಲರಿಗೂ ಆರೋಗ್ಯ' ಎಂಬುದು ಭಾರತ ಸರ್ಕಾರದ ಪ್ರಮುಖ ಗುರಿಯಾಗಿದ್ದು, ಇದು 'ಶ್ರವಣ ದೋಷ ತಡೆಗಟ್ಟುವಿಕೆ'ಯನ್ನು ಸಹ ಒಳಗೊಳ್ಳುತ್ತದೆ. ಮಾತು ಮತ್ತು ಭಾಷೆಯ ಅಭಿವೃದ್ಧಿ, ಸಂವಹನ, ಶಿಕ್ಷಣ ಮತ್ತು ಉದ್ಯೋಗ ನಿಯೋಜನೆಗಳಲ್ಲಿ ಶ್ರವಣವು ಪ್ರಮುಖ ಪಾತ್ರ ವಹಿಸುತ್ತದೆ. ಆದ್ದರಿಂದ, ಶ್ರವಣ ನಷ್ಟವನ್ನು ತಡೆಗಟ್ಟುವುದು ಅತ್ಯಗತ್ಯವಾಗುತ್ತದೆ, ಇದನ್ನು ಈ ಕೆಳಗಿನ ಮೂರು ಹಂತಗಳಲ್ಲಿ ಮಾಡಬಹುದು:

- ಪ್ರಾಥಮಿಕ
- ದ್ವಿತೀಯ
- ತೃತೀಯ

**ಪ್ರಾಥಮಿಕ ಹಂತದ ತಡೆಗಟ್ಟುವಿಕೆ**

ಶ್ರವಣದೋಷದ ಪ್ರಾಥಮಿಕ ತಡೆಗಟ್ಟುವಿಕೆ ಎಂದರೆ ಸಮಸ್ಯೆಯ ಪ್ರಾರಂಭ ಮತ್ತು ಅದರ ಬೆಳವಣಿಗೆಯನ್ನು ನಿರ್ಮೂಲನೆ ಮಾಡುವುದು ಅಥವಾ ತಡೆಯುವುದು. ಇದು ಈ ಕೆಳಗಿನವುಗಳನ್ನು ಒಳಗೊಳ್ಳುತ್ತದೆ.

ಶ್ರವಣದೋಷವನ್ನು ಪ್ರಾಥಮಿಕ ಹಂತದಲ್ಲಿಯೇ ತಡೆಗಟ್ಟಲು ಹಲವಾರು ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತದೆ. ಸಾರ್ವಜನಿಕರಲ್ಲಿ ಶ್ರವಣದೋಷದ ಕುರಿತು ಅರಿವು ಮೂಡಿಸುವುದು ಈ ಕಾರ್ಯಕ್ರಮಗಳ ಪ್ರಮುಖ ಉದ್ದೇಶವಾಗಿದ್ದು, ಇದರ ಪ್ರಮುಖ ಫಲಾನುಭವಿಗಳೆಂದರೆ, ವೈದ್ಯಕೀಯ ಮತ್ತು ಅರೆವೈದ್ಯಕೀಯ ವೃತ್ತಿಪರರು (ಮಕ್ಕಳ ವೈದ್ಯರು, ಕಿವಿ, ಮೂಗು ಮತ್ತು ಗಂಟಲು ವೈದ್ಯರು, ಕುಟುಂಬ ವೈದ್ಯರು, ಪ್ರಾಥಮಿಕ ಆರೋಗ್ಯದ ಕೇಂದ್ರದ ವೈದ್ಯರು, ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು, ದಾದಿಯರು, ಎಎನ್‌ಎಂ ಮತ್ತು ಸಿಬಿಆರ್ ಕಾರ್ಮಿಕರು) ಶಾಲೆಗಳ ಮುಖ್ಯಸ್ಥರು, ಶಾಲಾ ಶಿಕ್ಷಕರು, ಸಾಮಾಜಿಕ ಮತ್ತು ಆರೋಗ್ಯ ಕಾರ್ಯಕರ್ತರು ಅಂಗನವಾಡಿ ಕಾರ್ಮಿಕರು ಮತ್ತು ವಿವಿಧ ಲೋಕೋಪಕಾರಿ ಸಂಸ್ಥೆಗಳು ಇತರೆ. ಈ ಸಂವಾದಾತ್ಮಕ ಕಾರ್ಯಕ್ರಮಗಳಲ್ಲಿ ಈ ಮೇಲೆ ತಿಳಿಸಿದ ಸದಸ್ಯರಿಗೆ

ಶ್ರವಣದೋಷ ತಡೆಗಟ್ಟುವಿಕೆ, ಗುರುತಿಸುವಿಕೆ ಮತ್ತು ನಿರ್ವಹಣೆಯ ಕುರಿತು ಮಾರ್ಗಸೂಚಿಗಳನ್ನು ನೀಡಲಾಗುತ್ತದೆ. ಶ್ರವಣ ದೋಷವನ್ನು ತಡೆಗಟ್ಟುವ ಬಗ್ಗೆ ಅವರಿಗೆ ಕರಪತ್ರಗಳು ಮತ್ತು ಕೈಪಿಡಿ, ಭಿತ್ತಿಚಿತ್ರಗಳನ್ನು ಸಹ ನೀಡಲಾಗುತ್ತದೆ. ಈ ಕಾರ್ಯಕ್ರಮಗಳು ಕಿವಿ ಮತ್ತು ಶ್ರವಣ ಸಂರಕ್ಷಣೆ ಕುರಿತು ಮಾಹಿತಿಯನ್ನು ನೀಡುತ್ತವೆ. ಸಾಮಾನ್ಯವಾಗಿ, ಶ್ರವಣ ನಷ್ಟ ಸಂಭವಿಸಿದ ನಂತರ ವ್ಯಕ್ತಿಯ ಪುನಶ್ಚೇತನಕ್ಕಾಗಿ ಮಾಡುವ ಖರ್ಚಿಗೆ ಹೋಲಿಸಿದರೆ ಪ್ರಾಥಮಿಕ ತಡೆಗಟ್ಟುವಿಕೆಗಾಗಿ ಆಗುವ ವೆಚ್ಚ ತೀರಾ ಕಡಿಮೆ.

**ದ್ವಿತೀಯ ಹಂತದ ತಡೆಗಟ್ಟುವಿಕೆ:**

ಸಂವಹನ ನ್ಯೂನತೆಗಳನ್ನುಂಟು ಮಾಡುವಂತಹ ಅಪಾಯಕಾರಿ ಸಂಗತಿಗಳನ್ನು ಗುರುತಿಸುವುದು: ಈ ಹಂತದ ತಡೆಗಟ್ಟುವಿಕೆಯನ್ನು ಒಳಗೊಳ್ಳುತ್ತದೆ. ಶಾಲಾ ಮಕ್ಕಳಲ್ಲಿ ಶ್ರವಣಶಕ್ತಿ ಪರೀಕ್ಷೆ: ಶಾಲಾಪೂರ್ವ, ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಕಲಿಯುವ ಮಕ್ಕಳ ಸಂವಹನ ಶಕ್ತಿ ಬೆಳವಣಿಗೆ ಮತ್ತು ಅವುಗಳ ತೊಂದರೆಗಳನ್ನು ತಡೆಗಟ್ಟುವ ಸಲುವಾಗಿ ಕೈಗೊಳ್ಳಲಾಗಿದೆ. ಶಾಲಾ ಮಕ್ಕಳಲ್ಲಿನ ಜನ್ಮತಃ ಅಥವಾ ನಂತರ ಬಂದಂತಹ ಶ್ರವಣ ದೋಷಗಳು, ಮಾತು-ಭಾಷಾ ದೋಷಗಳು, ಕಲಿಕೆ (ಓದುವ ಮತ್ತು ಬರೆಯುವ) ತೊಂದರೆಗಳು ಹಾಗೂ ಮಾತಿನ ಶಬ್ಧಗಳ ಬೆಳವಣಿಗೆಯಲ್ಲಿ ಉಂಟಾದ ತೊಂದರೆಗಳನ್ನು ಕಂಡು ಹಿಡಿಯುವುದು. ಇಂತಹ ನವಜಾತ ಶಿಶುಗಳ ಸಂವಹನ ತೊಂದರೆಗಳಿಗಾಗಿ ಶೋಧನ ಪರೀಕ್ಷೆಗಳು ಮೈಸೂರಿನ ೧೯ ಆಸ್ಪತ್ರೆಗಳಲ್ಲಿ, ೬ ವಿಸ್ತರಣಾ ಕೇಂದ್ರಗಳಲ್ಲಿ ೧೨ ನವಜಾತ ಶಿಶು ಪರೀಕ್ಷಾ ಕೇಂದ್ರಗಳಲ್ಲಿ ಲಭ್ಯವಿದೆ.

ಕೈಗಾರಿಕಾ ಕೆಲಸಗಾರರಲ್ಲಿ ಶ್ರವಣಶಕ್ತಿ ಪರೀಕ್ಷೆ: ನಿಯಮಿತವಾಗಿ ಕೈಗಾರಿಕಾ ಕೆಲಸಗಾರರ ಶ್ರವಣಶಕ್ತಿ ಪರಿಶೀಲನೆ ಮಾಡಲಾಗುತ್ತದೆ. ಶಬ್ದದ ವಾತಾವರಣದಲ್ಲಿ ಕೆಲಸ ಮಾಡುವವರಲ್ಲಿ, ಅತೀಶಬ್ದದ ಕಾರಣ ಶ್ರವಣಶಕ್ತಿ ಕುಂಠಿತವಾಗಬಹುದು. ಅಲ್ಲದೆ, ಶಬ್ದದ ದುಷ್ಪರಿಣಾಮಗಳ ಬಗ್ಗೆ ಕೆಲಸಗಾರರಿಗೂ ಹಾಗೂ ನಿರ್ವಹಣಾ ಸಿಬ್ಬಂದಿಗೂ ಶಿಕ್ಷಣ ನೀಡಬಹುದು. ತಿಳುವಳಿಕೆ ಹಾಗೂ ಸಂವೇದನಾಶೀಲ ಕಾರ್ಯಕ್ರಮಗಳ ಮೂಲಕ ಶ್ರವಣಶಕ್ತಿಯ ಸಂರಕ್ಷಣೆಯ ಬಗ್ಗೆ ಹಾಗೂ ಅದಕ್ಕಾಗಿ ಬಳಸುವ ಸಾಧನಗಳ ಬಗ್ಗೆ, ಶ್ರವಣದೋಷ ಹೊಂದುವ ಅಪಾಯವಿರುವ ಕೆಲಸಗಾರರಿಗೆ ಅನುಸರಣಾ ಪರೀಕ್ಷೆಗಳನ್ನು ನಿಗದಿತ ಸಮಯದಲ್ಲಿ ಮಾಡಬೇಕಾಗುತ್ತದೆ. ಇದಕ್ಕಾಗಿ ವಿಭಾಗದಲ್ಲಿ ಸೇವೆಗಳು ಸದಾ ಲಭ್ಯವಿದೆ.

ಹಿರಿಯ ನಾಗರೀಕರ ಪರಿಶೀಲನೆ: ಹಿರಿಯ ನಾಗರೀಕರಲ್ಲಿ ಶ್ರವಣಶಕ್ತಿ, ಆಲೋಚನಾ ಶಕ್ತಿ, ನೆನಪಿನ ಶಕ್ತಿ, ಮಾತು ಮತ್ತು ಭಾಷೆ ವಯಸ್ಸಿನ ಪರಿಣಾಮವಾಗಿ ಕುಂಠಿತಗೊಳ್ಳಬಹುದು. ಇದಲ್ಲದೆ, ಪಾರ್ಶ್ವವಾಯು, ಆಲ್ಜಿಮರ್ ಕಾಯಿಲೆ, ಪಾರ್ಕಿನ್ ಸನ್ ಮುಂತಾದ ಕಾಯಿಲೆಗಳು ಮಾತು, ಭಾಷೆ ಮತ್ತು ಸಂವೇದನಾ ಶಕ್ತಿಯ ಮೇಲೆ ಪರಿಣಾಮ ಬೀರಬಹುದು. ಈ ಕಾರ್ಯಕ್ರಮವನ್ನು ಹಿರಿಯ ನಾಗರೀಕರಿಗೆ ಪರಿಣಾಮಕಾರಿಯಾಗಿ ಕೇಳಿಸಿಕೊಳ್ಳಲು ಮತ್ತು ಸಂಭಾಷಿಸಲು ಕೈಗೊಳ್ಳಲಾಗಿದೆ. ಬಹುವಿಧದ ವೃದ್ಧಾಶ್ರಮಗಳು, ಸಂಘಗಳು ಮತ್ತು ಕ್ಲಬ್ ಗಳನ್ನು ಈ ಸಲುವಾಗಿ ಗುರುತಿಸಲಾಗಿದೆ. ವಿಭಾಗದಿಂದ ಇಂತಹ ಸ್ಥಳಗಳಲ್ಲಿ ಮಾತು ಮತ್ತು ಭಾಷೆಯ ತೊಂದರೆಗಳ ತಪಾಸಣೆ ಮತ್ತು ಚಿಕಿತ್ಸೆ ಅಲ್ಲದೆ ಪಾಕೆಟ್ ಮಾದರಿಯ ಶ್ರವಣೋಪಕರಣಗಳನ್ನು ನೀಡಲಾಗುತ್ತದೆ.

**ತೃತೀಯ ತಡೆಗಟ್ಟುವಿಕೆ:**

ತೃತೀಯ ತಡೆಗಟ್ಟುವಿಕೆ, ಶ್ರವಣದೋಷವುಳ್ಳವುಳ್ಳ ವ್ಯಕ್ತಿಗಳ ಪುನರ್ವಸತಿಯನ್ನು ಒಳಗೊಳ್ಳುತ್ತದೆ. ಮಕ್ಕಳಲ್ಲಿ ಪ್ರಾರಂಭದಲ್ಲಿಯೇ ನ್ಯೂನತೆಯನ್ನು ಗುರುತಿಸಿ ಚಿಕಿತ್ಸೆ ನೀಡಿದಲ್ಲಿ, ಅವರ ಮಾತು–ಭಾಷಾ ಬೆಳವಣಿಗೆಯು ಉತ್ತಮವಾಗಿರುತ್ತದೆ. ಶ್ರವಣದೋಷವು ವ್ಯಕ್ತಿಗಳ ಶಿಕ್ಷಣ ಮತ್ತು ಉದ್ಯೋಗ ನಿಯೋಜನೆಯ ಮೇಲೂ ಪರಿಣಾಮ ಬೀರುತ್ತದೆ. ಆದ್ದರಿಂದ, ಈ ದುಷ್ಪರಿಣಾಮಗಳನ್ನು ತಡೆಗಟ್ಟಲು, ವಿವಿಧ ಹಂತಗಳಲ್ಲಿ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಶ್ರವಣ ದೋಷವುಳ್ಳ ವ್ಯಕ್ತಿಗಳಿಗೆ ವೈದ್ಯಕೀಯ / ಶಸ್ತ್ರಚಿಕಿತ್ಸೆ ಅಥವಾ ಶ್ರವಣ ನಿರ್ವಹಣೆಗಾಗಿ ಸೂಚನೆ ನೀಡಲಾಗುತ್ತದೆ ಒದಗಿಸಲಾಗುತ್ತದೆ. ಶ್ರವಣ ನಿರ್ವಹಣೆಯಲ್ಲಿ ಶ್ರವಣ ನ್ಯೂನತೆಯುಳ್ಳ ವ್ಯಕ್ತಿಗಳಿಗೆ ಸೂಕ್ತವಾದ ಶ್ರವಣೋಪಕರವನ್ನು ನೀಡಲಾಗುತ್ತದೆ/ ಸೂಚಿಸಲಾಗುತ್ತದೆ. ಅರ್ಹರಿಗೆ ಭಾರತ ಸರ್ಕಾರದ ಏಡ್ಸ್ ಮತ್ತು ಅಪ್ಲೈಯನ್ಸ್ ಯೋಜನೆಯಡಿ ಶ್ರವಣ ಸಾಧನಗಳನ್ನು ಉಚಿತವಾಗಿ ವಿತರಿಸಲಾಗುತ್ತದೆ. ಶ್ರವಣದೋಷದ ನಿರ್ದಿಷ್ಟ ಅವಶ್ಯಕತೆಗಳನ್ನು ನಿವಾರಿಸಬಲ್ಲ ಶ್ರವಣ ಸಾಧನಗಳು ಮಾತ್ರವಲ್ಲ, ಟಿವಿಯ ಸದ್ದನ್ನು ಆಲಿಸುವ ವ್ಯವಸ್ಥೆ, ಟೆಲಿಫೋನ್ ಆಂಪ್ಲಿಫೈಯರ್ನಂತಹ ಸಹಾಯಕ ಆಲಿಸುವ ಸಾಧನಗಳ (ಎಎಲ್‌ಡಿ) ಸಮಸ್ಯೆಗಳನ್ನು ನಿವಾರಿಸಲು ಅಗತ್ಯ ಸಂದರ್ಭಗಳಲ್ಲಿ ಸೂಚಿಸಲಾಗುತ್ತದೆ. ಅವರು ಬಳಸುತ್ತಿರುವ ಶ್ರವಣ ಸಾಧನಗಳನ್ನು ಆಗಾಗ್ಗೆ ತೊಂದರೆಗಳ ನಿರ್ವಹಣೆ ದುರಸ್ತಿ ಇತ್ಯಾದಿಗಳಿಗೆ ತರಲಾಗುತ್ತದೆ. ಶ್ರವಣೇಂದ್ರಿಯ ಕೌಶಲ್ಯಗಳ ಸುಧಾರಣೆಗಾಗಿ ತರಬೇತಿ ನೀಡಲಾಗುತ್ತದೆ.

ಈ ಶ್ರವಣ ಸಂರಕ್ಷಣಾ ಕಾರ್ಯಕ್ರಮಗಳ ಪರಿಣಾಮವೆಂದರೆ ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳು ಕಿರಿಯ ವಯಸ್ಸಿನಲ್ಲಿಯೇ ಸಹಾಯವನ್ನು ಪಡೆಯುತ್ತಿದ್ದಾರೆ. ಈ ಕಾರ್ಯಕ್ರಮವು ತೀವ್ರವಲ್ಲದ ಸಮಸ್ಯೆಗಳನ್ನು ಹೊಂದಿರುವ ಮತ್ತು ಏಕಪಕ್ಷೀಯ ಶ್ರವಣ ನಷ್ಟವನ್ನು ಹೊಂದಿರುವ ವ್ಯಕ್ತಿಗಳನ್ನು ಗುರುತಿಸಲು ಅನುವು ಮಾಡಿಕೊಟ್ಟಿದೆ.

**ಸಂಪರ್ಕಿಸಿ**

**ಕೀರ್ತಿ**
ಸಾರ್ವಜನಿಕ ಮಾಹಿತಿ ಅಧಿಕಾರಿ
ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆ, ಮೈಸೂರು 570 006
ದೂರವಾಣಿ (ಕಚೇರಿ): (ಎಕ್ಸ್‌ಟೆನ್ಷನ್: 113)
ಮೊಬೈಲ್: 9844484979

**ಕಾರ್ಯನಿರ್ವಹಿಸುವ ಅವಧಿ:** ಬೆಳಿಗ್ಗೆ 09.00 ರಿಂದ ಸಂಜೆ 05.30 ರವರೆಗೆ
**ಕಾರ್ಯನಿರ್ವಹಿಸುವ ದಿನಗಳು:** ಸೋಮವಾರದಿಂದ ಶುಕ್ರವಾರ

## ಸಂಸ್ಥೆಯ ಜಿಮ್ಕಾನಾ

ಜಿಮ್ಖಾನವು ಸಂಸ್ಥೆಯ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಸಂಘವಾಗಿದ್ದು, ಇದರಲ್ಲಿನ ಸದಸ್ಯರ ಮನರಂಜನೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಪ್ರದರ್ಶನಕ್ಕೆ ವೇದಿಕೆಯಾಗಿದೆ. ಮಾತ್ರವಲ್ಲದೆ, ಆಗಾಗ್ಗೆ ಕ್ರೀಡೆ, ಕಲೆ, ಸಾಂಸ್ಕೃತಿಕ ಮತ್ತು ಸಾಹಿತ್ಯ ಚಟುವಟಿಕೆಗಳನ್ನು ಆಯೋಜಿಸುತ್ತಾ ಪ್ರೋತ್ಸಾಹ ನೀಡುತ್ತಾ ಬಂದಿದೆ.

ಹೀಗೆ ಜಿಮ್ಖಾನವು ಸಂಸ್ಥೆಯ ಕ್ರೀಡೆ ಮತ್ತು ಮನರಂಜನಾ ಚಟುವಟಿಕೆಗಳಿಗೆ ಉತ್ತಮವಾದ ಸೌಲಭ್ಯಗಳನ್ನು ಒದಗಿಸಿದೆ. ಸಂಸ್ಥೆಗೆ ಸೇರಿದ ಆವರಣದಲ್ಲಿ ಕ್ರೀಡಾ ಕಟ್ಟಡವಿದ್ದು, ಶಟಲ್ ಬ್ಯಾಡ್ಮಿಂಟನ್ ಮತ್ತು ಟೇಬಲ್ ಟೆನ್ನಿಸ್ ಆಡಲು ಸಾಕಷ್ಟು ಸೌಲಭ್ಯಗಳಿವೆ. ಇದರೊಂದಿಗೆ, ಅತ್ಯಾಧುನಿಕ್ ಸೌಲಭ್ಯಗಳನ್ನೊಳಗೊಂಡ ನೂತನ ಜಿಮ್ನಾಸಂ ಮತ್ತು ಗ್ರಂಥಾಲಯವಿದೆ. ಜಿಮ್ಖಾನದಲ್ಲಿ ಸುಂದರವಾದ ಬಯಲು ರಂಗಮಂದಿರವೂ ಸಹ ಇದೆ. ೪೦೦ ಆಸನ ಸಾಮರ್ಥ್ಯವುಳ್ಳ ಸಭಾಂಗಣವು ಅತ್ಯಾಧುನಿಕ ಶ್ರವ್ಯ–ದೃಶ್ಯ ವ್ಯವಸ್ಥೆಯನ್ನೊಂದಿದೆ.

## ಸಂಸ್ಥೆಯ ಹಳೆ ವಿದ್ಯಾರ್ಥಿಗಳ ಸಂಘ

ಸಂಸ್ಥೆಯ ಮೊದಲ ಹಳೆ ವಿದ್ಯಾರ್ಥಿಗಳ ಸಂಘವು ೨೫ನೇ ಜನವರಿ, ೨೦೧೦ ರಂದು ಮೊದಲ ಸಭೆ ಸೇರಿತು. ಈ ಸಭೆಯಲ್ಲಿ ೧೯೬೬ ರಿಂದ ಹಿಡಿದು ೨೦೦೮ ರವರೆಗಿನ ಬ್ಯಾಚ್‌ನ ಹಳೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಭಾರತ ಸೇರಿದಂತೆ ಯುಎಸ್‌ಎ, ಆಸ್ಟ್ರೇಲಿಯಾ, ಮತ್ತು ಯುಕೆ ಯಿಂದ ಹಳೆ ವಿದ್ಯಾರ್ಥಿಗಳು ಆಗಮಿಸಿದ್ದರು. ಯುಎಸ್‌ಎ ನಿಂದ ೭ , ಯುಕೆ ಹಾಗೂ ಭಾರತದ ತಲಾ ಒಬ್ಬರು ವಿದ್ಯಾರ್ಥಿಗಳು ವೆಬ್ ಮೂಲಕ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಸಂಜೆ ४.೦೦ ರಿಂದ ಸಂಜೆ ೫.೦೦ ರವರೆಗೆ ನಡೆದ ಔಪಚಾರಿಕೆ ಉದ್ಘಾಟನೆಯಲ್ಲಿ ಎನ್‌ಐಇ ಆಡಳಿತ ಮಂಡಳಿಯ ನಿರ್ದೇಶಕ ಡಾ.ಸಿ.ಕೆ.ಎನ್ ರಾಜಾ ಮತ್ತು ಹಿರಿಯ ಪತ್ರಕರ್ತ ಶ್ರೀ ಕೃಷ್ಣ ವಟ್ಟನಂ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಇವರಿಬ್ಬರು ಈ ವರ್ಷಗಳಲ್ಲಿ ಅವರು ಸಂಸ್ಥೆಯಲ್ಲಿ ಗಮನಿಸಿದ ಬದಲಾವಣೆಗಳು ಮತ್ತು ನಿರ್ದೇಶಕರು ಮತ್ತು ಸಿಬ್ಬಂದಿಯ ಬಗ್ಗೆ ಮೆಲುಕು ಹಾಕಿದರು.

ನಿರ್ದೇಶಕಿ ಡಾ. ವಿಜಯಲಕ್ಷ್ಮಿ ಬಸವರಾಜ್ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ೧ ನೇ ಹಳೆಯ ವಿದ್ಯಾರ್ಥಿಗಳ ಸಂಘದ ಉದ್ದೇಶಗಳು ಮತ್ತು ಅದಕ್ಕೆ ಸಂಬಂಧಿಸಿದ ಬೈಲಾ ಕಾನೂನುಗಳ ಕರಡು ಮತ್ತು ನಿಯಮಗಳನ್ನು ಕುರಿತು ಸಂಕ್ಷಿಪ್ತವಾಗಿ ತಿಳಿಸಿದರು.

ಸಂಸ್ಥೆಯ ಹಳೆಯ ವಿದ್ಯಾರ್ಥಿಗಳ ಸಂಘವನ್ನು ನೋಂದಾಯಿಸಲು ತಾತ್ಕಾಲಿಕ ಸಮಿತಿಯನ್ನು ಸ್ಥಾಪಿಸಲು ಬೈಲ್ವಾಸ್ ಸೂಚಿಸಿದ ಕರಡಿನ ಬಗ್ಗೆ ಅವರು ಉಲ್ಲೇಖಿಸಿದರು. ಸೂಚಿಸಿದ ಸಮಿತಿಯ ಸಂವಿಧಾನವು ಈ ಕೆಳಗಿನಂತಿರುತ್ತದೆ.

- ಅಧ್ಯಕ್ಷರು – ಸಂಸ್ಥೆಯ ನಿರ್ದೇಶಕರು (ಸಂಸ್ಥೆಯ ಹಳೆಯ ವಿದ್ಯಾರ್ಥಿಯಾಗಿದ್ದರೆ) / ನಿರ್ದೇಶಕರು ಸಂಸ್ಥೆಯ ಹಳೆಯ ವಿದ್ಯಾರ್ಥಿಯಲ್ಲದಿದ್ದಲ್ಲಿ ಸಂಸ್ಥೆಯ ಹಳೆಯ ವಿದ್ಯಾರ್ಥಿಯಾಗಿರುವ ಹಿರಿಯ– ಪ್ರಾಧ್ಯಾಪಕರು
- ಕಾರ್ಯದರ್ಶಿ ೦– ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯ ಹಳೆಯ ವಿದ್ಯಾರ್ಥಿ
- ಬಾಹ್ಯ ಕಾರ್ಯದರ್ಶಿ – ಸಂಸ್ಥೆಯ ಹಳೆಯ ವಿದ್ಯಾರ್ಥಿ (ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರಬಾರದು)
- ಖಜಾಂಚಿ – ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯ ಹಳೆಯ ವಿದ್ಯಾರ್ಥಿ
- ಮತ್ತು ಸಂಸ್ಥೆಯ 4 ಹಳೆಯ ವಿದ್ಯಾರ್ಥಿಗಳು (ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರಬಾರದು)

ಡಾ. ವಿಜಯಲಕ್ಷ್ಮಿ ಬಸವರಾಜ್ ಅವರ ಮೇಲಿನ ಸಲಹೆಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಆದ್ದರಿಂದ, ನಿರ್ದೇಶಕರು ಡಾ. ಆಶಾ ಯತಿರಾಜ್ ಅವರನ್ನು ಸಂಸ್ಥೆಯ ಆಂತರಿಕ ಸಂಸ್ಥಾಪಕಿಯಾಗಿ ಕಾರ್ಯನಿರ್ವಹಿಸಲು ಮತ್ತು ಡಾ. ಪುಷ್ಪಾವತಿ ಅವರನ್ನು ಸಂಸ್ಥಾಪಕ ಖಜಾಂಚಿಯಾಗಿ ನಾಮನಿರ್ದೇಶನಗೊಳಿಸಲಾಯಿತು. ಉಳಿದ ಸದಸ್ಯರು ಸಮಿತಿಯಲ್ಲಿ ಸ್ವಯಂಸೇವಕರಾಗಿ ಸೇವೆ ಸಲ್ಲಿಸಬೇಕಾಗುತ್ತದೆ.

ಆದ್ದರಿಂದ, ಸಂಸ್ಥಾಪಕ ಸದಸ್ಯರಾಗಿ ತಮ್ಮ ಹೆಸರಿನ ವಿರುದ್ಧ ಪ್ರಸ್ತಾಪಿಸಲಾದ ಸ್ಥಾನಗಳಿಗೆ ಸೇವೆ ಸಲ್ಲಿಸಲು ಈ ಕೆಳಗಿನ ಸ್ವಯಂಸೇವಕರೊಂದಿಗೆ ತಾತ್ಕಾಲಿಕ ಸಮಿತಿಯನ್ನು ರಚಿಸಲಾಯಿತು.

| ಕ್ರ. ಸಂ | ಹೆಸರು | ಸ್ಥಾನ |
|---|---|---|
| 1 | ಡಾ. ಎಂ. ಪುಷ್ಪಾವತಿ<br>ನಿರ್ದೇಶಕರು, ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆ, ಮೈಸೂರು | ಅಧ್ಯಕ್ಷರು |
| 2 | ಡಾ. ಕೆ. ಯಶೋಧ<br>ಸಹ ಪ್ರಾಧ್ಯಾಪಕರು, ವಾಕ್–ಭಾಷಾ ವಿಜ್ಞಾನ<br>ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆ, ಮೈಸೂರು | ಕಾರ್ಯಕಾರಿ ಕಾರ್ಯದರ್ಶಿ |

| | | |
|---|---|---|
| **3.** | ಶ್ರೀಮತಿ ಆಶಾ ಜಿ.ಜಿ<br>ನಿರ್ದೇಶಕರು ಮತ್ತು ಶ್ರವಣತಜ್ಞರು, ವೈಭವ್ ವಾಕ್ ಮತ್ತು ಶ್ರವಣ ಕೇಂದ್ರ, ತ್ರಿಭುವನ್ ಟವರ್ಸ್, ದೀವಾನ್ಸ್ ರಸ್ತೆ, ಮೈಸೂರು, ಕರ್ನಾಟಕ | ಗೌರವಾನ್ವಿತ ಕಾರ್ಯದರ್ಶಿ |
| **4** | ಡಾ. ಟಿ. ಜಯಕುಮಾರ್<br>ಸಹ ಪ್ರಾಧ್ಯಾಪಕರು, ವಾಕ್–ವಿಜ್ಞಾನ<br>ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆ, ಮೈಸೂರು | ಖಜಾಂಚಿ |
| **5** | ಡಾ. ಜಿಜೋ ಎಂ.<br>ಪ್ರಾಚಾರ್ಯರು ಮತ್ತು ಪ್ರವಾಚಕರು, ಶ್ರವಣವಿಜ್ಞಾನ,<br>ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ,<br>ಧಾರವಾಡ ಕರ್ನಾಟಕ | ಕಾರ್ಯಕಾರಿ ಸಮಿತಿಯ ಸದಸ್ಯರು (ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರದ) |
| **6** | ಕುಮಾರಿ ಭಾಷ್ಪಾ ಪಿ.ಯು<br>ವಾಕ್–ಭಾಷಾ ತಜ್ಞರು<br>ಎಸ್‌ವಿಎಎನ್‌ಎ ವಾಕ್–ಮತ್ತು ಶ್ರವಣ ಮತ್ತು ಪಾಲಿಕ್ಲಿನಿಕ್ | ಕಾರ್ಯಕಾರಿ ಸಮಿತಿಯ ಸದಸ್ಯರು (ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರದ) |
| **7** | ಡಾ. ಬಾಲಾಜಿ ರಂಗರತ್ನಂ<br>ಪಿಹೆಚ್‌ಡಿ, ಸಿಸಿಸಿ–ವಾಕ್–ಭಾಷಾ ತಜ್ಞರು, ಸಹಾಯಕ ಪ್ರಾಧ್ಯಾಪಕರು, ಸಂವಹನ ವಿಜ್ಞಾನ ಮತ್ತು ನ್ಯೂನತೆಗಳು,<br>ಪೂರ್ವ ಕ್ಯಾರೋಲಿನಾ ವಿಶ್ವವಿದ್ಯಾನಿಲಯ<br>ಗ್ರೀನ್‌ವಿಲ್ಲೆ, ಉತ್ತರ ಕ್ಯಾರೊಲಿನಾ | ಕಾರ್ಯಕಾರಿ ಸಮಿತಿಯ ಸದಸ್ಯರು (ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರದ) |
| **8** | ಡಾ. ಪೆಬ್ಬಲ್ಲಿ ಗೋಪಿಕಿಶೋರ್<br>ಸಹಾಯಕ ಪ್ರಾಧ್ಯಾಪಕರು, ವಾಕ್ ದೋಷ<br>ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆ, ಮೈಸೂರು | ಕಾರ್ಯಕಾರಿ ಸಮಿತಿಯ ಸದಸ್ಯರು |
| **9** | ಕುಮಾರಿ ದೀಪಾ ಶನಂದ್<br>ಸಂಶೋಧನಾ ಸಹಾಯಕರು<br>ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆ, ಮೈಸೂರು | ಕಾರ್ಯಕಾರಿ ಸಮಿತಿಯ ಸದಸ್ಯರು |

## ಶ್ರವಣ, ಭಾಷೆ ಮತ್ತು ವಾಕ್ ವಿಷಯದಲ್ಲಿ ಡಿಪ್ಲೊಮಾ (ಡಿಹೆಚ್‌ಎಲ್‌ಎಸ್)

ಮೈಸೂರಿನ ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆಯು ಸಹಾಯಕ / ತಂತ್ರಜ್ಞ ಮಟ್ಟದಲ್ಲಿ ಮಾನವಶಕ್ತಿ ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡು ೨೦೦೭ ರಲ್ಲಿ ದೂರ ಸಂಪರ್ಕದ ಮೂಲಕ ಡಿಪ್ಲೊಮಾ ಇನ್ ಹಿಯರಿಂಗ್ ಲಾಂಗ್ವೇಜ್ ಅಂಡ್ ಸ್ಪೀಚ್ (ಡಿಹೆಚ್‌ಎಲ್‌ಎಸ್ – **ಶ್ರವಣ, ಭಾಷೆ ಮತ್ತು ವಾಕ್ ವಿಷಯದಲ್ಲಿ ಡಿಪ್ಲೊಮಾ**) ಕಾರ್ಯಕ್ರಮವನ್ನು ಪ್ರಾರಂಭಿಸಿತು. ಜಿಪ್ಮರ್

ಈ ಕಾರ್ಯಕ್ರಮವನ್ನು ಪುದುಚೇರಿ, ರಿಮ್ಸ್ ಇಂಫಾಲ್, ಎಐಐಪಿಎಂಆರ್ ಮುಂಬೈ ಮತ್ತು ಎಂಎಎಂಸಿ ನವದೆಹಲಿಗೆ ಸಂಪರ್ಕ ಕಲ್ಪಿಸುವ ಮೂಲಕ ಪ್ರಾರಂಭಿಸಲಾಯಿತು. ೨೦೦೮–೨೦೦೯ರಲ್ಲಿ, ಸಂಸ್ಥೆಯು ಅಜ್ಮೀರ್‌ನ ಜವಾಹರ್ ಲಾಲ್ ನೆಹರು ವೈದ್ಯಕೀಯ ಕಾಲೇಜು, ಇಂದಿರಾ ಗಾಂಧಿ ವೈದ್ಯಕೀಯ ಕಾಲೇಜು, ಶಿಮ್ಲಾ, ನೇತಾಜಿ ಸುಭಾಷ್ ಚಂದ್ರ ಬೋಸ್ ವೈದ್ಯಕೀಯ ಕಾಲೇಜು, ಜಬಲ್ಪುರ; ಕಿಂಗ್ ಜಾರ್ಜ್ ವೈದ್ಯಕೀಯ ವಿಶ್ವವಿದ್ಯಾಲಯ, ಲಕ್ನೋ; ರಾಂಚಿಯ ರಾಜೇಂದ್ರ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಮತ್ತು ವೈದ್ಯಕೀಯ ಕಾಲೇಜು ಕಟಕ್ನ ಶ್ರೀ ರಾಮಚಂದ್ರ ಭಂಜ್ ಒಳಗೊಂಡಂತೆ ಒಟ್ಟು ಆರು ವೈದ್ಯಕೀಯ ಕಾಲೇಜುಗಳಲ್ಲಿ ಅಧ್ಯಯನ ಕೇಂದ್ರಗಳನ್ನು ಸೇರ್ಪಡೆಗೊಳಿಸಿತು. ೨೦೦೯–೨೦೧೦ರಲ್ಲಿ ಭಗಲ್‌ಪುರದ ಜವಾಹರಲಾಲ್ ನೆಹರು ವೈದ್ಯಕೀಯ ಕಾಲೇಜಿನಲ್ಲಿ ಮತ್ತೊಂದು ಕೇಂದ್ರವನ್ನು ಪ್ರಾರಂಭಿಸಲಾಯಿತು. ಸಿದ್ಧಾಂತ ತರಗತಿಗಳನ್ನು

ಮೈಸೂರು ಕೇಂದ್ರದಿಂದ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ನಡೆಸಲಾಗುತ್ತದೆ ಮತ್ತು ದೇಶಾದ್ಯಂತದ ವಿದ್ಯಾರ್ಥಿಗಳು ಒಂದೇ ಸಮಯದಲ್ಲಿ ವೀಡಿಯೊ-ಕಾನ್ಫರೆನ್ಸಿಂಗ್ ಮೂಲಕ ಒಂದೇ ಸಮಯದಲ್ಲಿ ನೇರವಾಗಿ ಸಂವಾದ ನಡೆಸಲು ಇದು ಅನುವು ಮಾಡಿಕೊಡುತ್ತದೆ. ಚಿಕಿತ್ಸೆಗೆ ತರಬೇತಿಯನ್ನು ಸಾಂಪ್ರದಾಯಿಕ ವೃತ್ತಿಪರರ ಮೇಲ್ವಿಚಾರಣೆಯಲ್ಲಿ ಆಯಾ ಅಧ್ಯಯನ ಕೇಂದ್ರಗಳಲ್ಲಿ ದಿನನಿತ್ಯದ ಆಧಾರದಲ್ಲಿ ನೀಡಲಾಗುತ್ತದೆ.

ಹಳ್ಳಿ, ಬ್ಲಾಕ್ / ತಾಲ್ಲೂಕು ಮತ್ತು ಪಟ್ಟಣ ಮಟ್ಟದಲ್ಲಿ ವಿವಿಧ ಮಾತು, ಭಾಷೆ ಮತ್ತು ಶ್ರವಣ ನ್ಯೂನತೆಗಳ ತಪಾಸಣೆ ಮತ್ತು ಅದರ ಚಿಕಿತ್ಸೆ ಮತ್ತು ತರಬೇತಿಗಾಗಿ ಮಾನವ ಸಂಪನ್ಮೂಲವನ್ನು (ವಾಕ್ ಮತ್ತು ಶ್ರವಣ ತಂತ್ರಜ್ಞರು / ಸಹಾಯಕರು) ಅಭಿವೃದ್ಧಿಪಡಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಡಿಎಚ್‌ಎಲ್‌ಎಸ್ ಪ್ರೋಗ್ರಾಂ ಅನ್ನು ಬ್ಯಾಚುಲರ್ ಇನ್ ೨೦೧೪-೧೫ರಲ್ಲಿ ಕೆಲವು ಕೇಂದ್ರಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ಸಹ ಪರಿಚಯಿಸಲಾಗಿದೆ. ಅವೆಂದರೆ, ಜಬಲ್ಪುರದ ನೇತಾಜಿ ಸುಭಾಷ್ ಚಂದ್ರ ಬೋಸ್ ವೈದ್ಯಕೀಯ ಕಾಲೇಜು; ಪ್ರಾದೇಶಿಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ(ರಿಮ್ಸ್), ಇಂಫಾಲ್ ಮತ್ತು ಜವಾಹರಲಾಲ್ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ (ಜಿಪ್ಮರ್), ಪುದುಚೇರಿ.

ಭಾರತದ ಪುನರ್ವಸತಿ ಮಂಡಳಿ ೨೦೧೬-೧೭ ರಿಂದ ಜಾರಿಗೆ ಬರುವಂತೆ ಡಿಎಚ್‌ಎಲ್‌ಎಸ್ ಕಾರ್ಯಕ್ರಮದ ಪಠ್ಯಕ್ರಮವನ್ನು ಪರಿಷ್ಕರಿಸಿತು. ಅಂತೆಯೇ, ಈ ಕೆಳಗಿನ ವಿಷಯಗಳ ಬಗ್ಗೆ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಅಧ್ಯಾಪಕರು ಸಿದ್ಧಪಡಿಸಿ ಪ್ರಕಟಿಸಿದರು. ಮೈಸೂರಿನ ಅಖಿಲ ಭಾರತ ವಾಕ್-ಶ್ರವಣಸಂಸ್ಥೆಯ ವಾಕ್-ವಿಜ್ಞಾನದ ಪ್ರಾಧ್ಯಾಪಕರಾದ ಪ್ರೊ. ವೈ.ವಿ. ಗೀತಾ, ಎಲ್ಲಾ ನಾಲ್ಕು ಸಂಪುಟಗಳ ಒಟ್ಟಾರೆ ಸಂಕಲನ ಮತ್ತು ಸಂಪಾದನೆಯನ್ನು ಮಾಡಿದ್ದಾರೆ.

## ಮಾಹಿತಿ ಹಕ್ಕು ಕಾಯ್ದೆ

## ಮಾಹಿತಿ ಹಕ್ಕು ಕಾಯ್ದೆ 2005

**ಯಾರು ಅರ್ಜಿ ಸಲ್ಲಿಸಬಹುದು?**

ಈ ಕಾಯಿದೆಯಡಿ ಮಾಹಿತಿಯನ್ನು ಪಡೆಯಲು ಬಯಸುತ್ತಾರೆ ಎಲ್ಲಾ ಭಾರತೀಯ ನಾಗರಿಕರು ಅರ್ಜಿ ಸಲ್ಲಿಸಬಹುದು. ಆದರೆ, ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಈ ಕಾಯ್ದೆಯು ಅನ್ವಯಿಸುವುದಿಲ್ಲ.

**ಮಾಹಿತಿ ಎಂದರೆ ಯಾವುದು?**

ಯಾವುದೇ ರೀತಿಯ ದಾಖಲೆ, ಜ್ಞಾಪನಪತ್ರ, ನಮೂನೆ ಇತರೆ

**ಮಾಹಿತಿ ಹಕ್ಕು ಎಂದರೇನು?**

ಮಾಹಿತಿಯಲ್ಲಿ ನಾಲ್ಕು ವಿಧಗಳಿವೆ

- ದಾಖಲೆಗಳ ಪರಿಶೀಲನೆ
- ಮಾಹಿತಿಯ ಪ್ರಮಾಣೀಕೃತ ಪ್ರತಿಗಳನ್ನು ಗಮನಿಸುವುದು ಮತ್ತು ಪಡೆಯುವುದು
- ಮಾದರಿಗಳನ್ನು ಪಡೆಯುವುದು
- ಎಲೆಕ್ಟ್ರಾನಿಕ್ ಮೋಡ್ ಮೂಲಕ ಮಾಹಿತಿಯನ್ನು ಪಡೆಯುವುದು

**ಅರ್ಜಿ ಸಲ್ಲಿಸುವುದು ಹೇಗೆ?**

ಮಾಹಿತಿಯನ್ನು ಪ್ರಕಟಣೆ/ ಮತ್ತು ಅರ್ಜಿ ಮೂಲಕ ಪಡೆದುಕೊಳ್ಳಬಹುದು. ಅರ್ಜಿಯನ್ನು ಬರವಣಿಗೆ ರೂಪದಲ್ಲಿ ನೀಡಬೇಕಾಗುತ್ತದೆ. ಸಂಸ್ಥೆಯ 'ಕ್ಯಾಷ್' ಕೌಂಟರ್'ನಲ್ಲಿ ಲಭ್ಯವಿರುವ ಅರ್ಜಿಯನ್ನು ಪಡೆದುಕೊಂಡು ನಿಮಗೆ ಬೇಕಾದ ಮಾಹಿತಿಯೇನು ಎಂಬುದನ್ನು ಭರ್ತಿ ಮಾಡಿ ನೀಡಬೇಕಾಗುತ್ತದೆ.

**ಅರ್ಜಿ ಶುಲ್ಕ**

ನಗದು ರೂಪದಲ್ಲಿ ೧೦ ರೂಗಳನ್ನು ನೀಡಬಹುದು ಅಥವಾ ನಿರ್ದೇಶಕರು, ಅಖಿಲ ಭಾರತ ವಾಕ್-ಶ್ರವಣ ಸಂಸ್ಥೆ, ಮೈಸೂರು – ಈ ಹೆಸರಿನಲ್ಲಿ ಡಿಡಿ ಅಥವಾ ಬ್ಯಾಂಕರ್ಸ್ ಚೆಕ್ ಅನ್ನು ಪ್ರತಿ ಅರ್ಜಿಯೊಂದಿಗೆ ಸಲ್ಲಿಸಬೇಕಾಗುತ್ತದೆ.

**ಅರ್ಜಿಯನ್ನು ಯಾರಿಗೆ ಕಳುಹಿಸಬೇಕು?**

ಭರ್ತಿ ಮಾಡಿದ ಅರ್ಜಿಯನ್ನು ಶ್ರೀ. ಫ್ರೆಡ್ಡಿ ಆಂಟನಿ, ಉಪನ್ಯಾಸಕರು, ನೈದಾನಿಕ ಮನೋವಿಜ್ಞಾನ, ಅಖಿಲ ಭಾರತ ವಾಕ್-ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು – ೬ – ಇವರಿಗೆ ನೀಡಿ.

**ಮಾಹಿತಿ ಶುಲ್ಕ ಎಂದರೇನು?**

ಮಾಹಿತಿ ಶುಲ್ಕವೆಂದರೆ, ಪ್ರತಿ ಪುಟದ ಮಾಹಿತಿಗೆ (A4/ A3 ಅಳತೆ) ನೀವು ನೀಡುವ ಹಣ, ದೊಡ್ಡ ಅಳತೆಯ ಪುಟಕ್ಕೆ ಅದಕ್ಕೆ ತಗಲುವ ಶುಲ್ಕವನ್ನು ಭರಿಸಬೇಕಾಗುತ್ತದೆ. ಮಾಹಿತಿಯು ಡಿಸ್ಕ್ ಅಥವಾ ಫ್ಲಾಪಿ ರೂಪದಲ್ಲಿದ್ದರೆ, ಪ್ರತಿ ಪ್ರತಿಗೆ ೫೦ ರೂಗಳನ್ನು ನೀಡಬೇಕಾಗುತ್ತದೆ.

**ದಾಖಲೆಗಳ ಪರಿಶೀಲನೆ**

ಮೊದಲ ಒಂದು ಗಂಟೆಗೆ ಯಾವುದೇ ಶುಲ್ಕವಿರುವುದಿಲ್ಲ. ನಂತರ, ಪ್ರತಿ ೧೫ ನಿಮಿಷಗಳಿಗೆ ೫ ರೂಗಳಂತೆ ನೀಡಬೇಕಾಗುತ್ತದೆ.

**ಮಾಹಿತಿ ನೀಡಲು ಸಮಯದ ಮಿತಿಯೇನು?**

ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿಯು ಅರ್ಜಿಯನ್ನು ಸ್ವೀಕರಿಸಿದ 30 ದಿನಗಳೊಗಾಗಿ ಮಾಹಿತಿಯನ್ನು ನೀಡಬೇಕಾಗುತ್ತದೆ. ಆದರೆ, ಮಾಹಿತಿಯ ರವಾನೆ ಮತ್ತು ಶುಲ್ಕ ಪಾವತಿಯ ಅವಧಿಯನ್ನು ಹೊರತುಪಡಿಸಿ.

ಆದರೆ, ಕೋರಿದ ಮಾಹಿತಿಯು ಯಾವುದೇ ವ್ಯಕ್ತಿಯ ಜೀವನ/ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ್ದಾದರೆ ೪೮ ಗಂಟೆಗಳೊಳಗೆ ನೀಡಲಾಗುತ್ತದೆ. ನಿಗದಿತ ಸಮಯದೊಳಗೆ ಮಾಹಿತಿ ಲಭ್ಯವಾಗದಿದ್ದಲ್ಲಿ/ ಯಾವುದೇ ಪ್ರತಿಕ್ರಿಯೆ ಬಾರದಿದ್ದಲ್ಲಿ, ಅಂತಹ ಅರ್ಜಿಯನ್ನು ತಿರಸ್ಕರಿಸಲಾಗಿದೆ ಎಂದರ್ಥ.

**ಮನವಿ ಮಾಡುವುದು ಹೇಗೆ?**

ಯಾವುದೇ ವ್ಯಕ್ತಿಗೆ, ನಿಗದಿತ ಸಮಯದೊಳಗೆ ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿಯಿಂದ ಮಾಹಿತಿ ಲಭ್ಯವಾಗದಿದ್ದಲ್ಲಿ/ ವ್ಯಕ್ತಿಯು ತೊಂದರೆಗಳೊಗಾಗಿದ್ದಲ್ಲಿ, ಮಾಹಿತಿಯ ನೀಡಲು ನಿಗದಿಪಡಿಸಿದ ಗರಿಷ್ಟ ಅವಧಿ ಮುಗಿದ ೩೦ ದಿನಗಳ ಒಳಗೆ ಉನ್ನತ ಪ್ರಾಧಿಕಾರಕ್ಕೆ ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿಯ ನಿರ್ಧಾರದ ವಿರುದ್ಧ ಮೇಲ್ಮನವಿ ಸಲ್ಲಿಸಬಹುದು. ಸಂಸ್ಥೆಯ ಮಟ್ಟದಲ್ಲಿ ಈ

ಮೊದಲ ಮೇಲ್ಮನವಿಯನ್ನು ಡಾ. ಪಿ. ಮಂಜುಳ, ಪ್ರಾಧ್ಯಾಪಕರು, ಶ್ರವಣವಿಜ್ಞಾನ, ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆ, ಮೈಸೂರು – ಇವರಿಗೆ ಸಲ್ಲಿಸಬಹುದು.

ಎರಡನೇ ಮೇಲ್ಮನವಿಯನ್ನು ಮೊದಲ ಮೇಲ್ಮನವಿ ಸಲ್ಲಿಸಿದ ದಿನಾಂಕದಿಂದ ೯೦ ದಿನಗಳಲ್ಲಿ ಮೊದಲ ಮೇಲ್ಮನವಿ ಪ್ರಾಧಿಕಾರವು ಕೇಂದ್ರ ಮಾಹಿತಿ ಆಯೋಗಕ್ಕೆ ಮಾಡಬೇಕಾದ ನಿರ್ಧಾರದದ ಆಧಾರದಲ್ಲಿ ನೀಡಬಹುದು. ವಿಳಾಸ ಹೀಗಿದೆ: ಕೇಂದ್ರ ಮಾಹಿತಿ ಆಯೋಗ, ಬ್ಲಾಕ್ ಸಂಖ್ಯೆ ೪ (ಐದನೇ ಮಹಡಿ), ಹಳೆ ಜೆಎನ್‌ಯು ಕಾಂಪ್ಲೆಕ್ಸ್, ನವದೆಹಲಿ – ೧೧೦ ೦೬೭

**ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿ**

ಭಾರತ ಸಂವಿಧಾನದ ಸೆಕ್ಷನ್ ೨೨೫ ಮತ್ತು ೩೨ ರ ಪ್ರಕಾರ, ಮಾಹಿತಿ ಹಕ್ಕು ಕಾಯ್ದೆ ಮೇಲೆ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ಗೆ ಅಧಿಕಾರವಿರುತ್ತದೆ.

## ಸಂಪರ್ಕಿಸಿ


**ಪ್ರೊ. ಎಂ. ಪುಷ್ಪಾವತಿ**
ನಿರ್ದೇಶಕರು
ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆ, ಮಾನಸಗಂಗೋತ್ರಿ
ಮೈಸೂರು – ೫೭೦ ೦೦೬

**ಕಚೇರಿ: ೨೫೦೨೧೦೨**
ನಿವಾಸ: ೨೫೧೫೫೪೩
ಫ್ಯಾಕ್ಸ್ ಸಂಖ್ಯೆ: ೨೫೧೦೫೧೫
ಈ–ಮೇಲ್: director@aiishmysore.in


**ಶೈಕ್ಷಣಿಕ**


**ಅಜಿತ್ ಕುಮಾರ್ ಯು.**

ಸಂಯೋಜಕರು, ಶೈಕ್ಷಣಿಕ ವಿಭಾಗ
ಪ್ರಾಧ್ಯಾಪಕರು, ಶ್ರವಣ ವಿಜ್ಞಾನ
ದೂರವಾಣಿ: 2502586
ಈ–ಮೇಲ್: ajithkumar18@gmail.com



**ಜಾಗೃತ ಸಮಿತಿಯ ಅಧಿಕಾರಿ**
ದೂರವಾಣಿ: ೨೫೦೨೧೪೨
ಈ–ಮೇಲ್: psycoindia@aiishmysore.in



**ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿ (ಮಾಹಿತಿ ಹಕ್ಕು ಕಾಯ್ದೆ)**
ಡಾ. ಸಿ. ಶಿಜಿತ್ ಕುಮಾರ್

ಗ್ರಂಥಾಲಯ ಮತ್ತು ಮಾಹಿತಿ ಅಧಿಕಾರಿ
ದೂರವಾಣಿ: ೨೫೦೧೫೦
ಈ–ಮೇಲ್: cshijithkumar@gmail.com

**ರ್‍ಯಾಗಿಂಗ್ ವಿರೋಧಿ ನೀತಿ ಮತ್ತು ಸಮಿತಿ**
ಡಾ. ಅಜಿತ್ ಕುಮಾರ್ ಯು.
ಪ್ರಾಧ್ಯಾಪಕರು, ಶ್ರವಣ ವಿಜ್ಞಾನ
ದೂರವಾಣಿ: 2502586
ಈ–ಮೇಲ್: ajithkumar18@gmail.com

**ಪಾರದರ್ಶಕತೆ ಅಧಿಕಾರಿ**
ಡಾ. ಸಿ. ಶಿಜಿತ್ ಕುಮಾರ್
ಗ್ರಂಥಾಲಯ ಮತ್ತು ಮಾಹಿತಿ ಅಧಿಕಾರಿ
ದೂರವಾಣಿ: ೨೫೦೧೫೦
ಈ–ಮೇಲ್: cshijithkumar@gmail.com

**ಸಿಬ್ಬಂದಿ ಕುಂದು ಕೊರತೆ**
ಡಾ. ಎನ್. ಸ್ವಪ್ನ
ಸಹ ಪ್ರಾಧ್ಯಾಪಕರು, ವಾಕ್–ಭಾಷಾ ವಿಜ್ಞಾನ ವಿಭಾಗ
ದೂರವಾಣಿ: ೨೨೬೩
ಈ–ಮೇಲ್: nsn112002@yahoo.com

**ಲೈಂಗಿಕ ಕಿರುಕುಳ ತಡೆಗಟ್ಟುವ ಸಮಿತಿ**
ಡಾ. ಅಮೃತ ಕಾಂಚನ್
ಉಪನ್ಯಾಸಕರು, ಮನೋವಿಜ್ಞಾನ
ದೂರವಾಣಿ; 2502140
ಇಮೇಲ್: amrita.kanchan@rediffmail.com

**ಸಾರ್ವಜನಿಕ ಕುಂದುಕೊರತೆ ಅಧಿಕಾರಿ**
ಡಾ. ಟಿ.ಕೆ. ಪ್ರಕಾಶ್
ಪ್ರವಾಚಕರು ಮತ್ತು ಮುಖ್ಯಸ್ಥರು, ಕಿವಿ, ಮೂಗು ಮತ್ತು ಗಂಟಲು ವಿಭಾಗ
ದೂರವಾಣಿ: 2502243
ಇಮೇಲ್: drprakashtk@aiishmysore.in

**ಕೃತಿಚೌರ್ಯ ವಿರೋಧಿ ಸಮಿತಿ**

ಡಾ. ಸಿ. ಶಿಜಿತ್ ಕುಮಾರ್
ಗ್ರಂಥಾಲಯ ಮತ್ತು ಮಾಹಿತಿ ಅಧಿಕಾರಿ
ದೂರವಾಣಿ: ೨೫೦೧೫೦
ಈ–ಮೇಲ್: cshijithkumar@gmail.com

**ಅಧ್ಯಕ್ಷರು, ವಿದ್ಯಾರ್ಥಿನಿಲಯ**
ಡಾ. ಅನಿಮೇಶ್ ಬರ್ಮನ್
ಪ್ರಾಧ್ಯಾಪಕರು, ಶ್ರವಣವಿಜ್ಞಾನ

ದೂರವಾಣಿ: ೨೫೦೨೧೮೧
ಇಮೇಲ್: nimeshbarman@aiishmysore.in

**ಮಾಹಿತಿ ಹಕ್ಕು ಕಾಯ್ದೆಯ ನೋಡಲ್ ಅಧಿಕಾರಿ**
ಡಾ. ಸಿ. ಶಿಜಿತ್ ಕುಮಾರ್
ಗ್ರಂಥಾಲಯ ಮತ್ತು ಮಾಹಿತಿ ಅಧಿಕಾರಿ
ದೂರವಾಣಿ: ೨೫೦೧೫೦
ಈ–ಮೇಲ್: cshijithkumar@gmail.com

**ಐಎಸ್‌ಓ ವಿಭಾಗ**
ಡಾ. ಎಸ್. ರಾಮ್‌ಕುಮಾರ್
ಮುಖ್ಯ ಆಡಳಿತಾಧಿಕಾರಿ
ದೂರವಾಣಿ: ೨೫೦೨೧೨೦

**ಸಂಶೋಧನಾ ಸಮನ್ವಯ ವಿಭಾಗ ಮತ್ತು ಸಂಶೋಧನಾ ನೀತಿ ಸಮಿತಿಯ ಸದಸ್ಯ ಕಾರ್ಯದರ್ಶಿ**
ಡಾ. ಪಲ್ನಾಟಿ ವಿಜೇತ ಎಂ.
ಅಧ್ಯಾಪಕರು, ವಿಶೇಷ ಶಿಕ್ಷಣ
ದೂರವಾಣಿ: ೨೫೦೨೦೦೦–೨೫೬೫
**ಇ–ಮೇಲ್ ವಿಳಾಸ: palnatyvijetha@gmail.com**

**ಜೆಸಿ/ ಸಿಸಿ ಸಂಯೋಜಕರು**
ಡಾ. ನೀರಜ್ ಕುಮಾರ್ ಸಿಂಗ್
ಪ್ರವಾಚಕರು, ಶ್ರವಣ ವಿಜ್ಞಾನ
ದೂರವಾಣಿ: 2502582
ಇಮೇಲ್: nirajks@aiishmysore.in

**ಪೀರ್ ಸಮಿತಿ**
ಡಾ. ಕೆ. ರಾಜಲಕ್ಷ್ಮೀ
ಪ್ರಾಧ್ಯಾಪಕರು, ಶ್ರವಣ ವಿಜ್ಞಾನ
ದೂರವಾಣಿ: 2502190
ಇಮೇಲ್:veenasrijaya@gmail.com,
rajalakshmikrishna@aiishmysore.in

**ಜೈಶ್ ಮತ್ತು ಗ್ರಂಥಾಲಯ ಸಮಿತಿ**
ಡಾ. ಸಂದೀಪ್ ಎಂ.
ಸಹಾಯಕ ಪ್ರಾಧ್ಯಾಪಕರು, ಶ್ರವಣ ವಿಜ್ಞಾನ
ದೂರವಾಣಿ: 2502230
ಇಮೇಲ್: msandeepa@gmail.com

**ಕ್ಯಾಂಟೀನ್ ಸಮಿತಿ**
ಡಾ. ಎನ್. ದೇವಿ
ಪ್ರವಾಚಕರು, ಶ್ರವಣ ವಿಜ್ಞಾನ
ದೂರವಾಣಿ: 2502359

9480442139
ಇಮೇಲ್: deviaiish@gmail.com, devi@aiishmysore.in

**ಸ್ಥಾಯಿ ಖರೀದಿ ಸಮಿತಿ**

ಡಾ. ಎಸ್. ಪಿ. ಗೋಸ್ವಾಮಿ
ಪ್ರಾಧ್ಯಾಪಕರು, ವಾಕ್ – ದೋಷ, ಮತ್ತು ಮುಖ್ಯಸ್ಥರು,
ವಾಕ್ ಭಾಷಾ ದೋಷಾ ವಿಭಾಗ
ದೂರವಾಣಿ ಸಂಖ್ಯೆ – 2502269
ಇಮೇಲ್: goswami16@aiishmysore.in

**ಖರೀದಿ ಸಮೀಕ್ಷೆ ಸಮಿತಿ**

ಡಾ. ಅನಿಮೇಶ್ ಬರ್ಮನ್
ಪ್ರಾಧ್ಯಾಪಕರು, ಶ್ರವಣವಿಜ್ಞಾನ
ದೂರವಾಣಿ: ೨೫೦೨೧೮೧
ಇಮೇಲ್: nimeshbarman@aiishmysore.in